ಮೈಸೂರು ಮಿತ್ರ

ಮೈಸೂರು-ಮಂಡ್ಯ-ಚಾಮರಾಜನಗರ-ಕೊಡಗು-ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಆಗಸ್ಟ್ 4 ಸೋಮವಾರ 2025

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ-ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 109 | ಪುಟಗಳು: 12

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಇಂದು ಗಜಪಯಣ

● ಕ್ಯಾಪ್ಟನ್ ಅಭಿಮನ್ಯು ಸೇರಿ ಮೊದಲ ತಂಡದ 9 ಆನೆಗಳು ಮೈಸೂರಿಗೆ ಪಯಣ ● 7 ಗಂಡಾನೆ, 2 ಹೆಣ್ಣಾನೆ ಆಗಮನ ● ಮಧ್ಯಾಹ್ನ 12.34 ರಿಂದ 12.59 ರವರೆಗೆ ಸಲ್ಲುವ ಶುಭ ತುಲಾ ಲಗ್ನದಲ್ಲಿ ಪೂಜೆ



ಗಜಪಯಣಕ್ಕೆ ಸಜ್ಜಾಗಿರುವ ದಸರಾ ಆನೆಗಳೊಂದಿಗೆ ಅರಣ್ಯಾಧಿಕಾರಿಗಳು.

ಮೈಸೂರು, ಆ.3(ಎಂಟಿವೈ)- ದಸರಾ ಮಹೋತ್ಸವ ಪ್ರಮುಖ ಆಕರ್ಷಣೆ ಅಂಬಾರಿ ಆನೆ ಅಭಿಮನ್ಯು ನೇತೃತ್ವದಲ್ಲಿ ಗಜಪಡೆಯ ಮೊದಲ ತಂಡದಲ್ಲಿ 9 ಆನೆಗಳಿಗೆ ನಾಳೆ(ಆ.4) ಮಧ್ಯಾಹ್ನ 12.34ರಿಂದ 12.59 ರವರೆಗೆ ಸಲ್ಲುವ ಶುಭ ತುಲಾ (ಅಭಿಜಿನ್) ಲಗ್ನದಲ್ಲಿ ಪೂಜೆ ಸಲ್ಲಿಸುವ ಮೂಲಕ ಗಜಪಯಣಕ್ಕೆ ವಿಧ್ಯುಕ್ತ ಚಾಲನೆ ದೊರೆಯಲಿದೆ.

ಪ್ರಸಕ್ತ ಸಾಲಿನ ದಸರಾ ಮಹೋತ್ಸವದಲ್ಲಿ ಪಾಲ್ಗೊಳ್ಳಲು ಈ ಬಾರಿ ಅಂಬಾರಿ ಆನೆ ಅಭಿಮನ್ಯು ನೇತೃತ್ವದಲ್ಲಿ 14 ಆನೆಗಳನ್ನು ಆಯ್ಕೆ ಮಾಡಲು ಅರಣ್ಯ ಇಲಾಖೆ ನಿರ್ಧರಿಸಿದ್ದು, ಈಗಾಗಲೇ ಮೊದಲ ಮತ್ತು ಎರಡನೇ ತಂಡದ ಆನೆಗಳ ಪಟ್ಟಿ ಸಿದ್ಧಪಡಿಸಿದೆ. ಜಂಬೂಸವಾರಿಗೂ 55 ದಿನ ಮುನ್ನವೇ ಮೊದಲ ತಂಡದ ಆನೆಗಳಿಗೆ ತಾಲೀಮು ಆರಂಭಿಸಿ, ವಿಶೇಷ ಆರೈಕೆ ಮಾಡಬೇಕಾದ ಹಿನ್ನೆಲೆಯಲ್ಲಿ ಅಂಬಾರಿ ಆನೆ, ಪರ್ಯಾಯ ಅಂಬಾರಿ ಆನೆ ಹಾಗೂ ಕುಮ್ಕಿ ಆನೆ ಜವಾಬ್ದಾರಿ ನಿಭಾಯಿಸುವ ಆನೆಗಳನ್ನು ಮೊದಲ ತಂಡದಲ್ಲಿ ಕರೆತರುವ ವಾಡಿಕೆಯಿದ್ದು, ಅದರಂತೆ ನಾಳೆ ಮಧ್ಯಾಹ್ನ ವಿವಿಧ ಕ್ಯಾಂಪ್‌ಗಳ 9 ಆನೆಗಳು ಸಾಂಸ್ಕೃತಿಕ ನಗರಿ ಮೈಸೂರಿನತ್ತ ಪ್ರಯಾಣ ಬೆಳೆಸಲಿವೆ.

ಗಜಪಯಣ: ಹುಣಸೂರು ತಾಲೂಕಿನ ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ವೀರನಹೊಸಳ್ಳಿ ಗೇಟ್ ಬಳಿ ನಾಳೆ ಮಧ್ಯಾಹ್ನ 9 ಆನೆಗಳಿಗೆ ಸಾಂಪ್ರದಾಯಿಕ ಪೂಜೆ ಸಲ್ಲಿಸಲಾಗುತ್ತದೆ. ಈಗಾಗಲೇ ವೀರನಹೊಸಳ್ಳಿ ಗೇಟ್‌ನಲ್ಲಿ ಗಜಪಯಣಕ್ಕೆ ಸಿದ್ಧತೆ ಮಾಡಿಕೊಳ್ಳಲಾಗಿದ್ದು, ಮತ್ತಿಗೋಡು, ಬಳ್ಳೆ, ದುಬಾರೆ ಕ್ಯಾಂಪ್‌ಗಳಿಂದ ಮೊದಲ ತಂಡದ 9 ಆನೆಗಳು ಭಾನುವಾರ ಸಂಜೆ ವೇಳೆಗೆ ವೀರನಹೊಸಳ್ಳಿ ಗೇಟ್ ಬಳಿ ಸುರಕ್ಷಿತವಾಗಿ ಬಂದಿವೆ.

ಮಧ್ಯಾಹ್ನ 12 ಗಂಟೆಗೆ ಅರ್ಚಕ ಎಸ್.ವಿ. ಪ್ರಹ್ಲಾದರಾವ್ ಅವರು ದ್ವಾರ ಪೂಜೆ ಮಾಡಿ, ಎಲ್ಲಾ ಆನೆಗಳ ಪಾದ ತೊಳೆದು ಅರಿಶಿನ, ಕುಂಕುಮ, ಶ್ರೀಗಂಧ ಹಚ್ಚಿ, ಸೊಂಡಿಲ ಮೇಲೆ ಓಂಕಾರ ಬರೆದ ನಂತರ ಅಡವಿದೇವಿ ಪೂಜೆ, ಚಾಮುಂಡಿಪೂಜೆ, ಗಣಪತಿ ಪೂಜೆ ನೆರವೇರಿಸಲಿದ್ದಾರೆ. ನಂತರ ಮಧ್ಯಾಹ್ನ 12.34ರಿಂದ 12.59ರವರೆಗೆ ಸಲ್ಲುವ ಶುಭ ತುಲಾ(ಅಭಿಜಿನ್) ಲಗ್ನದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಆನೆಗಳಿಗೆ ಪೂಜೆ ಸಲ್ಲಿಸಿ, ಪುಷ್ಪಾರ್ಚನೆ ಮಾಡಲಿದ್ದಾರೆ. ಬಳಿಕ ಆನೆಗಳಿಗೆ ಪಂಚಫಲ, ಕಬ್ಬು, ಬೆಲ್ಲ ಸೇರಿದಂತೆ ವಿವಿಧ ತಿನಿಸು ನೀಡಿದ ನಂತರ ದೃಷ್ಟಿ ತೆಗೆಯಲಾಗುತ್ತದೆ. ನಂತರ ವಿವಿಧ ಜಾನಪದ ಕಲಾತಂಡಗಳೊಂದಿಗೆ ಮೊದಲ ತಂಡದ ಆನೆಗಳನ್ನು ವೀರನಹೊಸಳ್ಳಿ ಗೇಟ್‌ನಿಂದ 1.5 ಕಿ.ಮೀ ■ 6ನೇ ಪುಟಕ್ಕೆ

ಮೊದಲ ತಂಡದ ಆನೆಗಳಿವು

ಗಜಪಡೆ ನಾಯಕ ಅಭಿಮನ್ಯು(59) ವಿನೊಂದಿಗೆ ಮತ್ತಿಗೋಡು ಶಿಬಿರದ ಭೀಮ (25), ದುಬಾರೆ ಶಿಬಿರದ ಕಂಜನ್ (24), ಧನಂಜಯ (44) ಮತ್ತು ಪ್ರಶಾಂತ್ (53), ಬಳ್ಳೆ ಶಿಬಿರದ ಮಹೇಂದ್ರ (42), ದೊಡ್ಡಹರವೆ ಶಿಬಿರದ ಏಕಲವ್ಯ (40) ಸೇರಿದಂತೆ 7 ಗಂಡಾನೆ ಹಾಗೂ ದುಬಾರೆ ಶಿಬಿರದ ಕಾವೇರಿ (45) ಹಾಗೂ ಬಳ್ಳೆಯ (ದೊಡ್ಡಹರವೆ) ಲಕ್ಷ್ಮೀ(53) ಹೆಣ್ಣಾನೆಗಳು ಮೊದಲ ತಂಡದಲ್ಲಿ ಮೈಸೂರಿಗೆ ಆಗಮಿಸಲಿವೆ.

ಗಜಪಯಣ ಕಾರ್ಯಕ್ರಮಕ್ಕೆ ಸಜ್ಜಾಗಿದ್ದೇವೆ

"ಗಜಪಯಣ ಕಾರ್ಯಕ್ರಮಕ್ಕೆ ಎಲ್ಲಾ ಸಿದ್ಧತೆ ಪೂರ್ಣಗೊಂಡಿದ್ದು, ಕಾರ್ಯಕ್ರಮ ನಡೆಸಲು ಸಜ್ಜಾಗಿದ್ದೇವೆ. ವೀರನಹೊಸಳ್ಳಿ ಗೇಟ್ ಬಳಿ ಸ್ವಾಗತ ಕಮಾನು, ಸಭಾ ಕಾರ್ಯಕ್ರಮಕ್ಕೆ ವಾಟರ್ ಪ್ರೂಫ್ ಪೆಂಡಾಲ್‌ನಿಂದ ವೇದಿಕೆ ನಿರ್ಮಾಣ ಮಾಡಲಾಗಿದೆ. ಗಜಪಯಣದ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಆಗಮಿಸುವ 5 ಸಾವಿರ ಮಂದಿ ಸ್ಥಳೀಯರಿಗೆ ಊಟದ ವ್ಯವಸ್ಥೆ ಮಾಡಲಾಗಿದೆ.

\- ಡಾ.ಐ.ಬಿ.ಪ್ರಭುಗೌಡ, ಡಿಸಿಎಫ್, ಮೈಸೂರು ವನ್ಯಜೀವಿ ವಿಭಾಗ

ಪ್ರಜ್ವಲ್ ರೇವಣ್ಣಗೆ ಸಮವಸ್ತ್ರ, ಕೈದಿ ಸಂಖ್ಯೆ 15528



ಬೆಂಗಳೂರು, ಆ.3- ಮನೆಗೆಲಸದ ಮಹಿಳೆ ಮೇಲೆ ಪದೇ ಪದೆ ಅತ್ಯಾಚಾರ ಎಸಗಿದ ಪ್ರಕರಣದಲ್ಲಿ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಜೀವಾವಧಿ ಶಿಕ್ಷೆ (ಜೀವನ ಪರ್ಯಂತ) ನೀಡಲಾದ ಒಂದು ದಿನದ ನಂತರ, ಮಾಜಿ ಸಂಸದ ಪ್ರಜ್ವಲ್ ರೇವಣ್ಣ ಅವರಿಗೆ ಬೆಂಗಳೂರಿನ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ ಕೈದಿ ಸಂಖ್ಯೆ ನೀಡಲಾಗಿದೆ ಎಂದು ಜೈಲು ಅಧಿಕಾರಿಗಳು ಭಾನುವಾರ ತಿಳಿಸಿದ್ದಾರೆ.

ಪ್ರಜ್ವಲ್ ಶನಿವಾರ ತಪ್ಪಿತಸ್ಥರೆಂದು ಸಾಬೀತಾದ ನಂತರ ಜೈಲಿನಲ್ಲಿ ತಮ್ಮ ಮೊದಲ ರಾತ್ರಿಯನ್ನು ಕಳೆದಿದ್ದಾರೆ. ಅವರು ಕಣ್ಣೀರು ಹಾಕುತ್ತಿದ್ದರು ಮತ್ತು ದುಃಖಿಸುತ್ತಿದ್ದರು ಎಂದು ವರದಿಯಾಗಿದೆ. ■ 6ನೇ ಪುಟಕ್ಕೆ

ಎಸ್‌ಐಟಿಗೆ ಮುಖ್ಯಮಂತ್ರಿ ಪದಕ



ಜಿ. ಪರಮೇಶ್ವರ್

ಬೆಂಗಳೂರು, ಆ.3- ಹಾಸನ ಮಾಜಿ ಸಂಸದ ಪ್ರಜ್ವಲ್ ರೇವಣ್ಣ ಅತ್ಯಾಚಾರ ಪ್ರಕರಣದಲ್ಲಿ ನ್ಯಾಯಾಲಯವು ನೀಡಿದ ಜೀವನಪರ್ಯಂತ ಶಿಕ್ಷೆ ತೀರ್ಪು ಐತಿಹಾಸಿಕವಾಗಿದ್ದು, ಈ ಪ್ರಕರಣದಲ್ಲಿ ಮೊದಲಿನಿಂದಲೂ ಅಚ್ಚುಕಟ್ಟಾಗಿ ತನಿಖೆ ನಡೆಸಿದ ಕರ್ನಾಟಕ ಪೊಲೀಸರು ಹಾಗೂ ಎಸ್‌ಐಟಿ ತಂಡ ಶ್ಲಾಘನೀಯ ಕೆಲಸ ಮಾಡಿದ್ದಾರೆ ಎಂದು ಗೃಹ ಸಚಿವ ಜಿ. ಪರಮೇಶ್ವರ್ ಹೇಳಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ■ 6ನೇ ಪುಟಕ್ಕೆ

ನಾಳೆ ಸಾರಿಗೆ ಮುಷ್ಕರ; ಇಂದು ಸಂಘಟನೆಗಳೊಂದಿಗೆ ಸಿಎಂ ಮಾತುಕತೆ

ಸಂಧಾನ ವಿಫಲವಾದರೆ ಪರ್ಯಾಯ ವ್ಯವಸ್ಥೆಗೆ ಸರ್ಕಾರ ಸಿದ್ಧತೆ



ಬೆಂಗಳೂರು, ಆ.3- ವೇತನ ಪರಿಷ್ಕರಣೆ ಮಾಡಬೇಕು, ಹಿಂಬಾಕಿ ನೀಡಬೇಕು ಎಂದು ಕೆಎಸ್‌ಆರ್‌ಟಿಸಿ ಕಾರ್ಮಿಕ ಸಂಘಟನೆಗಳ ಜಂಟಿ ಕ್ರಿಯಾಸಮಿತಿ ಪಟ್ಟು ಹಿಡಿದಿದ್ದು, ಆ.5ರಿಂದ ಮುಷ್ಕರ ನಡೆಸಲು ನಿರ್ಧರಿಸಿದೆ. ಹಿಂಬಾಕಿಯೂ ಇಲ್ಲ, 2027ರವರೆಗೆ ವೇತನ ಪರಿಷ್ಕರಣೆಯೂ ಇಲ್ಲ ಎಂದು ಸರ್ಕಾರವೂ ಸಡ್ಡು ಹೊಡೆದಿದೆ.

ಈ ನಡುವೆ ಸಂಘಟನೆಗಳ ಮುಖಂಡರೊಂದಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಆ.4ರಂದು ಮಾತುಕತೆಗೆ ಕರೆದಿದ್ದಾರೆ. ಜೊತೆಗೆ ಪರ್ಯಾಯ ಸಾರಿಗೆ ವ್ಯವಸ್ಥೆ ಮಾಡುವುದಕ್ಕೂ ಸರ್ಕಾರ ಮುಂದಾಗಿರುವುದು ಕುತೂಹಲಕ್ಕೆ ಕಾರಣವಾಗಿದೆ.

ಕಾರ್ಮಿಕ ಸಂಘಗಳ ಕಾಯ್ದೆ, ಕೈಗಾರಿಕಾ ವಿವಾದ ಕಾಯ್ದೆಗಳು ನಿಗಮಕ್ಕೆ ಅನ್ವಯವಾಗುತ್ತಿದ್ದು, 1996 ರಲ್ಲಿ ನಡೆದ ಒಪ್ಪಂದದಂತೆ ನಾಲ್ಕು ವರ್ಷಕ್ಕೊಮ್ಮೆ ವೇತನ ಪರಿಷ್ಕರಣೆ ನಡೆಯಬೇಕು. 2020ರಿಂದ ಅನ್ವಯವಾಗುವಂತೆ 2023ರಲ್ಲಿ ಪರಿಷ್ಕರಣೆ ಮಾಡಲಾಗಿತ್ತು. ಆದರೆ, ಆ 38 ತಿಂಗಳ ಹಿಂಬಾಕಿಯನ್ನು ಸರ್ಕಾರ ನೀಡಿರಲಿಲ್ಲ. 2024ಕ್ಕೆ ಮತ್ತೆ ವೇತನ ಪರಿಷ್ಕರಣೆಯಾಗಬೇಕಿತ್ತು. ಅದನ್ನೂ ಮಾಡಿಲ್ಲ. ಈ ಬಗ್ಗೆ ಹಲವು ಬಾರಿ ಸರ್ಕಾರದ ಗಮನಕ್ಕೆ ತಂದರೂ ಪ್ರಯೋಜನವಾಗಿಲ್ಲ. ಕಳೆದ ಡಿಸೆಂಬರ್‌ನಲ್ಲಿ ಮುಷ್ಕರ ನಡೆಸಲು ನಿರ್ಧರಿಸಲಾಗಿತ್ತು. ಮಾತುಕತೆ ನಡೆಸುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದರಿಂದ ಮುಷ್ಕರ ಕೈಬಿಡಲಾಗಿತ್ತು. ಈಗ ವರಸೆ ಬದಲಾಯಿಸಿದ್ದಾರೆ ಎಂದು ಕೆಎಸ್‌ಆರ್‌ಟಿಸಿ ಸ್ಟಾಫ್ ವರ್ಕರ್ಸ್ ಫೆಡರೇಷನ್ ಅಧ್ಯಕ್ಷ ಎಚ್.ವಿ. ಅನಂತಸುಬ್ಬರಾವ್ ದೂರಿದ್ದಾರೆ. ಮುಷ್ಕರ ದಿನ ಬೆಂಗಳೂರಿನಲ್ಲಿ 4 ಸಾವಿರ, ರಾಜ್ಯದ ವಿವಿಧೆಡೆ 7 ಸಾವಿರ ಖಾಸಗಿ ಬಸ್‌ಗಳು ಸಂಚರಿಸಲಿವೆ. ಸಭೆಯಲ್ಲಿ ಹೆಚ್ಚುವರಿ ಸಾರಿಗೆ ಆಯುಕ್ತರಾದ ಸಿ. ಮಲ್ಲಿಕಾರ್ಜುನ, ಬಿ.ಪಿ. ಉಮಾಶಂಕರ್, ಶೋಭಾ, ಖಾಸಗಿ ಬಸ್ ಸಂಘಟನೆಗಳ ಮುಖಂಡರಾದ ನಟರಾಜ ಶರ್ಮ, ರಾಧಾಕೃಷ್ಣ ಹೊಳ್ಳ, ಶಿವಣ್ಣ ಮುಂತಾದವರು ಪಾಲ್ಗೊಂಡಿದ್ದರು.

2023ರಿಂದ ಪರಿಷ್ಕರಣೆಯಾಗಿರುವುದರಿಂದ ಹಿಂಬಾಕಿ ನೀಡುವುದಿಲ್ಲ. ನಾಲ್ಕು ವರ್ಷ ಪರಿಷ್ಕರಣೆ ಇಲ್ಲ ಎಂದು ಈಗ ಹೇಳುವ ಬದಲು ನಾವು ಪ್ರತಿಭಟನೆ ನಡೆಸಿದಾಗ, ಹಿಂದೆ ಮುಷ್ಕರಕ್ಕೆ ಕರೆ ನೀಡಿದ್ದ ಸಂದರ್ಭದಲ್ಲಿ ತಿಳಿಸಬೇಕಿತ್ತು. 2023ರಲ್ಲಿ ಬಿಜೆಪಿ ಅಧಿಕಾರದಲ್ಲಿದ್ದಾಗ ಒಪ್ಪಂದದಲ್ಲಿ ತಪ್ಪುಗಳಾಗಿದ್ದರೆ ಅದನ್ನು ಸರಿಪಡಿಸಬೇಕು. ಅದನ್ನು ಬಿಟ್ಟು ಯಾವುದೇ ಒಪ್ಪಂದ ಇಲ್ಲ ಎನ್ನುವುದು ಸರಿಯಲ್ಲ. ಸಾಮಾಜಿಕ ನ್ಯಾಯದ ಪರವಾಗಿ ಮಾತನಾಡುವ ಸಿದ್ದರಾಮಯ್ಯರಿಂದ ಇಂಥದ್ದನ್ನು ನಿರೀಕ್ಷಿಸಿರಲಿಲ್ಲ' ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಯಾವುದೋ ವಿದೇಶಿ ಕಂಪನಿಗೆ 8,000 ಕೋಟಿ ನೀಡಲು ಇವರಲ್ಲಿ ದುಡ್ಡಿದೆ. ದುಡಿಯುವ ಕಾರ್ಮಿಕರಿಗೆ ಹಿಂಬಾಕಿ 1,800 ಕೋಟಿ ನೀಡಲು ಕಷ್ಟವಾಗಿದೆ. ■ 6ನೇ ಪುಟಕ್ಕೆ

'ಕರ್ನಾಟಕ ಅಗತ್ಯ ಸೇವಾ ನಿರ್ವಹಣಾ ಕಾಯ್ದೆ-2013' ಅಡಿ ಕೆಎಸ್‌ಆರ್‌ಟಿಸಿ ನಾಲ್ಕು ನಿಗಮಗಳ ನೌಕರರು ಯಾವುದೇ ಮುಷ್ಕರ ಹೂಡುವಂತಿಲ್ಲ ಮತ್ತು ಇತರೆ ಯಾವುದೇ ಸಂಘ-ಸಂಸ್ಥೆ ಇಲ್ಲವೇ ಅನಾಮಧೇಯ ವ್ಯಕ್ತಿಗಳು(ಸಾರಿಗೆ ಸಂಸ್ಥೆಗೆ ಸಂಬಂಧವಿಲ್ಲದ) ನಿಗಮ ನೌಕರರನ್ನು ಮುಷ್ಕರ ಹೂಡುವಂತೆ ಪ್ರಚೋದಿಸುವಂತಿಲ್ಲ ಹಾಗೂ ಬೆಂಬಲವನ್ನು ಸಹ ವ್ಯಕ್ತಪಡಿಸುವಂತಿಲ್ಲ. ನೌಕರರು ಮುಷ್ಕರ ಹೂಡಿದರೆ, ವೇತನವಿಲ್ಲ ಎಂಬ ಸಾಮಾನ್ಯ ತತ್ವದನ್ವಯ ದಿನದ ವೇತನವನ್ನು ಕಡಿತಗೊಳಿಸುವುದರ ಜೊತೆಗೆ ಆಡಳಿತ ವರ್ಗವು ಅನಧಿಕೃತವಾಗಿ ಗೈರು ಹಾಜರಾದ ನೌಕರರ ವಿರುದ್ಧ ಶಿಸ್ತಿನ ಕ್ರಮ ಜರುಗಿಸಬಹುದಾಗಿದೆ.

\- ಅಕ್ರಂ ಪಾಷಾ, ವ್ಯವಸ್ಥಾಪಕ ನಿರ್ದೇಶಕರು, ಕೆಎಸ್‌ಆರ್‌ಟಿಸಿ

ಕೆಆರ್‌ಎಸ್ ಅಣೆಕಟ್ಟೆಗೆ ಅಡಿಗಲ್ಲು ಹಾಕಿದ್ದು ಟಿಪ್ಪು

ನಾಲ್ವಡಿಯವರ ಪುಣ್ಯಸ್ಮರಣೆ ದಿನವೇ ಸಚಿವ ಮಹದೇವಪ್ಪ ವಿವಾದಾತ್ಮಕ ಹೇಳಿಕೆ





ಹೆಚ್.ಸಿ.ಮಹದೇವಪ್ಪ

ಶ್ರೀರಂಗಪಟ್ಟಣ,ಆ.3- ಸಮಾಜ ಕಲ್ಯಾಣ ಇಲಾಖೆ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಟಿಪ್ಪು ಹಾಡಿ ಹೊಗಳುವ ಭರದಲ್ಲಿ ಕೆಆರ್‌ಎಸ್ ಅಣೆಕಟ್ಟೆಗೆ ಮೊದಲು ಅಡಿಗಲ್ಲು ಹಾಕಿದ್ದು ಟಿಪ್ಪು ಸುಲ್ತಾನ್ ಎಂದು ವಿವಾದಾತ್ಮಕ ಹೇಳಿಕೆ ನೀಡಿದ್ದಾರೆ.

ಶ್ರೀರಂಗಪಟ್ಟಣದಲ್ಲಿ ನೂತನ ಡಾ.ಬಿ.ಆರ್. ಅಂಬೇಡ್ಕರ್ ಭವನ ನಿರ್ಮಾಣ ಕಾಮಗಾರಿಗೆ ಚಾಲನೆ ನೀಡಿ ಮಾತನಾಡಿದ ಅವರು, ಕನ್ನಂಬಾಡಿ ಕಟ್ಟಲು ಟಿಪ್ಪು ಸುಲ್ತಾನ್ ಅಡಿಗಲ್ಲು ಹಾಕಿದ್ದರು. ಕೆಆರ್‌ಎಸ್ ಹೆಬ್ಬಾಗಿಲಿನಲ್ಲಿ ಟಿಪ್ಪು ಅಡಿಗಲ್ಲು ಇತಿಹಾಸ ಕಾಣಬಹುದು. ಆದರೆ ಇದನ್ನು ಹೇಳಲು ಈಗ ಯಾರಿಗೂ ಧೈರ್ಯ ಇಲ್ಲ ಎಂದಿದ್ದಾರೆ. ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಪುಣ್ಯಸ್ಮರಣೆ ದಿನದಂದೇ ಸಚಿವ ಹೆಚ್.ಸಿ. ಮಹದೇವಪ್ಪ ಟಿಪ್ಪು ಹೊಗಳುವ ಭರದಲ್ಲಿ ■ 6ನೇ ಪುಟಕ್ಕೆ

ಮತ ಗಳಿಕೆಗಾಗಿ ಇತಿಹಾಸವನ್ನು ತಿರುಚುವ ಪ್ರಯತ್ನ

ರಾಜವಂಶಸ್ಥರೂ ಆದ ಸಂಸದ ಯದುವೀರ್ ತೀವ್ರ ಆಕ್ರೋಶ



ಮೈಸೂರು, ಆ.3-ಕೆಆರ್‌ಎಸ್ ಅಣೆಕಟ್ಟೆಗೆ ಮೊದಲು ಅಡಿಗಲ್ಲು ಹಾಕಿದ್ದು ಟಿಪ್ಪು ಸುಲ್ತಾನ್ ಎಂದು ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಹೇಳಿಕೆಗೆ ಪ್ರತಿಕ್ರಿಯೆ ನೀಡಿರುವ ರಾಜವಂಶಸ್ಥರೂ ಆದ ಮೈಸೂರು-ಕೊಡಗು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಇದು ಹಾಸ್ಯಾಸ್ಪದ ಹೇಳಿಕೆ. ಮತ ಗಳಿಕೆಗಾಗಿ ಇತಿಹಾಸವನ್ನು ತಿರುಚುವ ಪ್ರಯತ್ನದ ಭಾಗವಿದು ಎಂದು ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಕೆಆರ್‌ಎಸ್‌ಗೆ ಟಿಪ್ಪು ಸುಲ್ತಾನ್ ಅಡಿಗಲ್ಲು ಹಾಕಿದರೆಂಬುದಕ್ಕೆ ಯಾವುದೇ ಸಾಕ್ಷಿ ಇಲ್ಲ. ಕೆಆರ್‌ಎಸ್ ಕಟ್ಟಿದವರು ಯಾರು ಎನ್ನುವುದು ಎಲ್ಲರಿಗೂ ಗೊತ್ತಿರುವ ಸಂಗತಿ. ಶಿಕ್ಷಕರು, ಇತಿಹಾಸ ತಜ್ಞರು ಈ ಬಗ್ಗೆ ನಿಖರವಾದ ಮಾಹಿತಿ ನೀಡುತ್ತಾರೆ. ಈ ರೀತಿ ಯಾವುದೇ ಕಥೆಯನ್ನು ನಾನು ಈವರೆಗೆ ಕೇಳಿಲ್ಲ ಎಂದು ಯದುವೀರ್ ಹೇಳಿದರು. ಪತ್ರಗಳಲ್ಲಿ ಈ ಬಗ್ಗೆ ಸ್ಪಷ್ಟ ದಾಖಲೆಗಳಿವೆ. ಟಿಪ್ಪು ಕಾಲದಲ್ಲಿ ನಾಲ್ಕು ದೊಡ್ಡ ಯುದ್ಧಗಳು ನಡೆದವು. ಅಲ್ಲದೆ, ದೇವಾಲಯಗಳನ್ನು ಹಾನಿಗೊಳಿಸಲಾಗಿದೆ. ಆ ಕಾಲದಲ್ಲಿ ಶ್ರೀರಂಗ ನಾಥ ಮತ್ತು ನಂಜನಗೂಡಿನ ದೇವಾಲಯಗಳಲ್ಲಿ ■ 6ನೇ ಪುಟಕ್ಕೆ


ಅಮಾನತಾದ ವಾಹನಗಳ ಹಿಂಪಡೆಯಲು ಸೂಚನೆ

ಮೈಸೂರು, ಆ.3– ಮೈಸೂರು ನಗರ ಕೆ.ಆರ್ ಸಂಚಾರ ಪೊಲೀಸ್ ಠಾಣೆಯಲ್ಲಿ ವಾರಸುದಾರರು ಇಲ್ಲದೆ ಇರುವ ದ್ವಿಚಕ್ರ ವಾಹನಗಳನ್ನು ಅಮಾನತ್ತುಪಡಿಸಿಕೊಂಡಿದ್ದು, ಸದರಿ ವಾಹನಗಳ ವಾರಸುದಾರರು ಪತ್ತೆಯಾಗದೆ ಇರುವುದರಿಂದ ಸದರಿ ವಾಹನಗಳನ್ನು ಘನ ನ್ಯಾಯಾಲಯದ ಅನುಮತಿ ಪಡೆದು ಹರಾಜು ಮಾಡಿ ಬಂದ ಹಣವನ್ನು ಸರ್ಕಾರಕ್ಕೆ ಜಮಾ ಮಾಡಲಾಗುವುದು.

ವಾಹನಗಳ ಸಂಖ್ಯೆ KA09-HB-3861, KA09-HA-4620, KA09-EE-4265, KA09-ED-3500, KA09-ED-5702, KA09-EH-5801, KA09-ED-4715, KA11-R-1619, KA09EE7814, KA04-EW-2605, KA02-EH-6689, KA09-EB-3159, KA09-EH-2562, KA09-EF-2666, KA03-EQ-2312, KA09-EM-0722, TVS VICTOR, KA09-EY-7301.

ಸದರಿ ವಾಹನಗಳ ವಾರಸುದಾರರು ಯಾರಾದರೂ ಇದ್ದಲ್ಲಿ ಸಂಬಂಧಪಟ್ಟ ದಾಖಲೆಗಳೊಂದಿಗೆ ಕೆ.ಆರ್ ಸಂಚಾರ ಪೊಲೀಸ್ ಠಾಣೆಗೆ ಖುದ್ದಾಗಿ ಅಥವಾ ಫೋನ್ ನಂ: 0821–2418330 ಇಲ್ಲವೇ ಪೊಲೀಸ್ ಕಂಟ್ರೋಲ್ ರೂಂ ನಂ: 0821–2418541 ಅನ್ನು ಸಂಪರ್ಕಿಸಬಹುದು ಎಂದು ಕೃಷ್ಣರಾಜ ಸಂಚಾರ ಪೊಲೀಸ್ ಠಾಣೆಯ ಪೊಲೀಸ್ ಉಪ–ನಿರೀಕ್ಷಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಶ್ರೀ ಯೋಗಾನರಸಿಂಹಸ್ವಾಮಿ ದೇವಸ್ಥಾನಕ್ಕೆ ಭೇಟಿ



ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ರಾಜ್ಯಾಧ್ಯಕ್ಷ ಎಸ್.ರಘುನಾಥ್ ಅವರು ಮೈಸೂರಿನ ಶ್ರೀ ಯೋಗಾನರಸಿಂಹ ಸ್ವಾಮಿ ದೇವಸ್ಥಾನಕ್ಕೆ ಭೇಟಿ ನೀಡಿ, ದೇವಸ್ಥಾನದ ಸಂಸ್ಥಾಪಕರಾದ ಪೂಜ್ಯಶ್ರೀ ಭಾಷ್ಯಂ ಸ್ವಾಮೀಜಿಯವರ ಆಶೀರ್ವಾದ ಪಡೆದರು. ದೇವಸ್ಥಾನದ ಆಡಳಿತಾಧಿಕಾರಿ ಶ್ರೀನಿವಾಸನ್, ಶೇಷಾದ್ರಿ, ರಾಜ್ಯ ಉಪಾಧ್ಯಕ್ಷ ನಂ.ಶ್ರೀಕಂಠ ಕುಮಾರ್, ರಥಯಾತ್ರೆ ಸುರೇಶ್, ರಾಜಶೇಖರ್, ದಿಲೀಪ್, ಪುರುಷೋತ್ತಮ, ಜಿ.ಆರ್.ಮೋಹನ್, ಎನ್.ಶ್ರೀನಿವಾಸಪ್ರಸಾದ್ ಮತ್ತಿತರರು ಉಪಸ್ಥಿತರಿದ್ದರು.

ಆ.10ರಂದು ಸಣ್ಣಕತೆ, ಕಾದಂಬರಿ, ಪ್ರಬಂಧ ರಚನೆ ಕಾರ್ಯಾಗಾರ

ಮೈಸೂರು,ಆ.3–ಸಣ್ಣಕತೆ, ಕಾದಂಬರಿ ಹಾಗೂ ಪತ್ರಿಕೆಗಳಿಗೆ ಪ್ರಬಂಧ ರಚಿಸುವ ಕಾರ್ಯಾಗಾರವನ್ನು ಆ.10ರಂದು ಮೈಸೂರಿನ ಕುವೆಂಪುನಗರದ ಅಕ್ಷಯ್ ಭಂಡಾರ್ ಹತ್ತಿರದಲ್ಲಿರುವ ಜೀನಿಯಸ್ ಎಂ.ಎಂ. ಕೋಚಿಂಗ್ ಸೆಂಟರ್‌ನಲ್ಲಿ ಏರ್ಪಡಿಸಲಾಗಿದೆ. ಅದೇ ದಿನ ಸಭೆ ಸಮಾರಂಭಗಳಲ್ಲಿ ಅರ್ಥಪೂರ್ಣ ಭಾಷಣ, ಸ್ವಾಗತ, ನಿರೂಪಣೆ ಮಾಡಲು ಆಸಕ್ತಿ ಇರುವವರಿಗೆ ತರಬೇತಿ ಕಾರ್ಯಾಗಾರವನ್ನು ಏರ್ಪಡಿಸಲಾಗಿದೆ. ಸಾಹಿತ್ಯ ಕ್ಷೇತ್ರದಲ್ಲಿ ಪ್ರಸಿದ್ಧಿ ಪಡೆದಿರುವವರು ತರಬೇತಿ ನೀಡುತ್ತಿರುವುದು ವಿಶೇಷ. ಅಂದು ಬೆಳಗಿನ ಅವಧಿಯಲ್ಲಿ ಭಾಷಣ ಕಲೆ ಕುರಿತಾಗಿ ಬಿ.ಎಸ್.ವಿನಯ್ ಅವರು ತರಬೇತಿ ನೀಡಿದರೆ, ಪತ್ರಿಕೆಗಳಿಗೆ ಲೇಖನ ರಚಿಸುವ ಕುರಿತು 'ಮೈಸೂರು ಮಿತ್ರ' ಅಂಕಣಕಾರ ಜಿ.ಎಲ್.ತ್ರಿಪುರಾಂತಕ ತರಬೇತಿ ನೀಡಲಿದ್ದಾರೆ. ಮಧ್ಯಾಹ್ನದ ಅವಧಿಯಲ್ಲಿ ಸಣ್ಣಕತೆಗಳ ರಚನೆ ಕುರಿತಾಗಿ ಸ್ವಾಮಿ ಪೊನ್ನಾಚಿಯವರು ಅನುಭವ ಹಂಚಿಕೊಂಡರೆ ಶ್ರೀಮತಿ ಕುಸುಮಾ ಆಯರಹಳ್ಳಿ ಅವರು ಕಾದಂಬರಿ ರಚನೆ ಕುರಿತ ಕೌಶಲಗಳನ್ನು ತಿಳಿಸಿಕೊಡಲಿದ್ದಾರೆ. ಸಾಹಿತ್ಯಾಸಕ್ತರು ಕಾರ್ಯಾಗಾರಕ್ಕೆ ನೋಂದಣಿ ಮಾಡಿಸಲು ಸಂಚಾಲಕ ಜಿ.ಎಲ್.ತ್ರಿಪುರಾಂತಕ ಅವರನ್ನು ಮೊ: 9686677284 ಸಂಪರ್ಕಿಸಬಹುದಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಮೈಸೂರಲ್ಲಿ 'ಪರಿವರ್ತನಾ ಯಾತ್ರೆ'ಗೆ ಚಾಲನೆ



ಮೈಸೂರಿನ ರಿಂಗ್ ರಸ್ತೆಯ ಹೊರವರ್ತುಲ ರಸ್ತೆಯಲ್ಲಿರುವ ಎಸ್.ಟಿ.ಎಚ್.ಎಲ್. ಮಳಿಗೆಯಲ್ಲಿ ಸ್ಟಿಲ್ ಪರಿವರ್ತನ ಯಾತ್ರೆಗೆ ಎಸ್‌ಟಿಐಎಚ್‌ಎಲ್ ಇಂಡಿಯಾದ ಹಿರಿಯ ನಾಯಕ ವೋಲ್ಕರ್ ಬುಚೋಲ್ಜ್ (ಏಷ್ಯಾ ಮಾರಾಟ ನಿರ್ದೇಶಕ) ಚಾಲನೆ ನೀಡಿದರು. ಈ ವೇಳೆ ಪರಿಂದ್ ಪ್ರಭುದೇಸಾಯಿ (ವ್ಯವಸ್ಥಾಪಕ ನಿರ್ದೇಶಕ), ಸಂಜಯ್ ವರ್ಮಾ (ದಕ್ಷಿಣ ಪ್ರಾದೇಶಿಕ ಮುಖ್ಯಸ್ಥ), ಪ್ರದುಮ್ನ್ ಚತುರ್ವೇದಿ (ವ್ಯಾಪಾರ ಮಾರುಕಟ್ಟೆ ವ್ಯವಸ್ಥಾಪಕ) ಮತ್ತು ಶರತ್ ಶೆಟ್ಟಿ (ಕರ್ನಾಟಕ ರಾಜ್ಯ ಮುಖ್ಯಸ್ಥ) ಉಪಸ್ಥಿತರಿದ್ದರು.

ಮೈಸೂರು ಸೌತ್ ಈಸ್ಟ್ ಕ್ಲಬ್‌ನಿಂದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಸನ್ಮಾನ



ಮೈಸೂರು ಸೌತ್ ಈಸ್ಟ್ ಕ್ಲಬ್ ವತಿಯಿಂದ ಇನ್ನರ್ ವೀಲ್ ಕ್ಲಬ್ ಸಹಯೋಗದಲ್ಲಿ ನಡೆದ ಕಾರ್ಯಕ್ರಮದಲ್ಲಿ ವಿವಿಧ ಶಾಲಾ ವಿದ್ಯಾರ್ಥಿಗಳಿಗೆ ಬಹುಮಾನ, ಸ್ಮರಣಿಕೆ ನೀಡಿ, ಗೌರವಿಸಲಾಯಿತು.

ಮೈಸೂರು, ಆ.3– ಮೈಸೂರು ಸೌತ್ ಈಸ್ಟ್ ಕ್ಲಬ್ ವತಿಯಿಂದ ಇನ್ನರ್ ವೀಲ್ ಕ್ಲಬ್ ಸಹಯೋಗದಲ್ಲಿ ನಡೆದ ಕಾರ್ಯಕ್ರಮದಲ್ಲಿ ಹತ್ತು ವಿವಿಧ ಶಾಲಾ ಕಾಲೇಜುಗಳ ವಿದ್ಯಾರ್ಥಿಗಳಿಗೆ ಬಹುಮಾನ ಮತ್ತು ಸ್ಮರಣಿಕೆಗಳನ್ನು ನೀಡಿ ಗೌರವಿಸಲಾಯಿತು.

ಕ್ಲಬ್‌ನ ಅಧ್ಯಕ್ಷ ರೋ. ಮುರಳೀಧರ್ ವೈ ವಿ, ಕಾರ್ಯದರ್ಶಿ, ರೋ ಸುರೇಶ್, ರೋ ಡಾ.ಈ.ಸಿ.ನಿಂಗರಾಜ್‌ಗೌಡ, ಇನ್ನರ್ ವೀಲ್ ಕ್ಲಬ್ ಅಧ್ಯಕ್ಷೆ ಶ್ರೀಮತಿ ಡಾ ಶ್ರೀಲಕ್ಷ್ಮಿ ವಾಸುದೇವನ್, ರೋ ವೆಂಕಟೇಶ್ ಬಿ ಆರ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಮೈಸೂರು ವಿವಿ ಸಿಂಡಿಕೇಟ್ ಮಾಜಿ ಸದಸ್ಯರಾದ ಡಾ.ಈ.ಸಿ.ನಿಂಗರಾಜ್ ಗೌಡ ಮಾತನಾಡಿ, ಶಿಕ್ಷಣ ಎಂಬುದು ವ್ಯಕ್ತಿಯ ಜ್ಞಾನ, ಕೌಶಲ, ಆಚಾರ–ವಿಚಾರ, ಮೌಲ್ಯ ಮತ್ತು ವ್ಯಕ್ತಿತ್ವದ ಸಮಗ್ರ ಅಭಿವೃದ್ಧಿಗೆ ಸಹಾಯಮಾಡುವ ಮಹತ್ವದ ಪ್ರಕ್ರಿಯೆಯಾಗಿದೆ. ಶಿಕ್ಷಣವು ಕೇವಲ ಪುಸ್ತಕ ಜ್ಞಾನವಲ್ಲ, ಅದು ಜೀವನವನ್ನು ಸರಿಯಾದ ದಿಸೆಯಲ್ಲಿ ನಡೆಸಲು ಮಾರ್ಗದರ್ಶಿ ಕೂಡ ಆಗಿದೆ ಎಂದರು.

ಕ್ಲಬ್ ಮಾಜಿ ಅಧ್ಯಕ್ಷ ಎಂ.ರಾಜೀವ್, ಎಂ.ಮೋಹನ್, ಗೋವರ್ಧನ್ ಯಾದವ್, ಮುರಳಿ, ವಾಸುದೇವನ್, ಗಿರೀಶ್, ರವೀಂದ್ರ, ಜ್ಞಾನಶಂಕರ್, ನಾಗರಾಜ್, ಶ್ರೀಮತಿ ಶುಭಾ ಮುರಳೀಧರ್, ಸೀಮಾ ಮರಿಸ್ವಾಮಿ, ವೀಣಾ ರವೀಂದ್ರ, ರೇಖಾಗೌಡ, ಪ್ರಸನ್ನ, ಆನಂದ್ ಮತ್ತು ಮತ್ತಿತರರು ಉಪಸ್ಥಿತರಿದ್ದರು.

ನಾಗಮ್ಮ ನಿಧನ



ಕೆ.ಆರ್.ಪೇಟೆ: ತಾಲೂಕಿನ ಬೇಲದಕೆರೆ ಗ್ರಾಮದ ನಿವೃತ್ತ ಶಿಕ್ಷಕರಾದ ದಿವಂಗತ ಚನ್ನವೀರೇಗೌಡರ ಧರ್ಮಪತ್ನಿ ನಾಗಮ್ಮ (84) ಭಾನುವಾರ ರಾತ್ರಿ ಸುಮಾರು 9 ಗಂಟೆ ಸಮಯದಲ್ಲಿ ನಿಧನ ಹೊಂದಿದರು.

ಮೃತರು ಕೊಮ್ಮೇನಹಳ್ಳಿ ಸರ್ಕಾರಿ ಪ್ರಾಥಮಿಕ ಪಾಠಶಾಲೆಯ ಮುಖ್ಯ ಶಿಕ್ಷಕ ಬಿ.ಸಿ.ಎಸ್.ಕುಮಾರ್ ಸೇರಿದಂತೆ ಇಬ್ಬರು ಪುತ್ರರು, ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆಯು ಆ.4ರಂದು ಸೋಮವಾರ ಬೆಳಿಗ್ಗೆ 11 ಗಂಟೆಗೆ ಸ್ವಗ್ರಾಮ ಬೇಲದಕೆರೆ ಗ್ರಾಮದಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ವರಮಹಾಲಕ್ಷ್ಮಿ ಆರಾಧನೆಗೆ ಸಜ್ಜಾಗುತ್ತಿದೆ ಸಾಂಸ್ಕೃತಿಕ ನಗರಿ

ಮೈಸೂರು ಮಾರುಕಟ್ಟೆಯಲ್ಲಿ ಭರದಿಂದ ವ್ಯಾಪಾರವಾಗುತ್ತಿವೆ ಲಕ್ಷ್ಮಿಯ ಮುಖವಾಡಗಳು, ಅಲಂಕಾರಿಕ ವಸ್ತುಗಳು









ಲಕ್ಷ್ಮಿ ಕೃಪೆ ಬೇಕು

"ಮನೆಯಲ್ಲಿ ಸುಖ–ಶಾಂತಿ ನೆಮ್ಮದಿ ನೆಲೆಸಲು ಲಕ್ಷ್ಮಿ ಕೃಪೆ ಬೇಕು. ಹಾಗಾಗಿ ಭಕ್ತಿಯಿಂದ ವರಮಹಾಲಕ್ಷ್ಮಿ ವ್ರತ ಆಚರಿಸುತ್ತೇವೆ. ಪ್ರತಿ ವರ್ಷ ಆಚರಣೆ ಮಾಡುತ್ತಿದ್ದು, ವರ್ಷದಿಂದ ವರ್ಷಕ್ಕೆ ಸಂಭ್ರಮ ಹೆಚ್ಚಾಗುತ್ತಿದೆ.

–ಬನ್ನೂರಿನ ವಿದ್ಯಾ

ಈ ವರ್ಷ ಆಸನಸಹಿತ ಲಕ್ಷ್ಮಿ ಮೂರ್ತಿಗಳೇ(ದೇವರ ಫೋಟೋದಲ್ಲಿರುವಂತೆ) ಮಾರುಕಟ್ಟೆಯಲ್ಲಿ ಲಭ್ಯವಿದೆ. ಕಳಸವನ್ನು ಸೀರೆಯಿಂದ ಸಿಂಗರಿಸಿ ಪ್ರತಿಷ್ಠಾಪಿಸುವ ಬದಲು ಅಲಂಕೃತ ಮೂರ್ತಿಗಳೇ ಲಭ್ಯವಿರುವುದು ಮಹಿಳೆಯರಿಗೆ ಸಮಯ ಉಳಿಸಿದೆ. ಲಕ್ಷ್ಮಿ ಮುಖವಾಡದ ಜೊತೆಗೆ ಮೂರ್ತಿಗಳು, ಒಡವೆಗಳು, ಸೀರೆ, ಬಗೆ ಬಗೆ ವಿನ್ಯಾಸದ ರೆಡಿಮೆಡ್ ಹಾರಗಳು ಲಭ್ಯವಿವೆ. ಮುಖವಾಡಗಳಲ್ಲಿ ಕಿರೀಟವನ್ನೊಳಗೊಂಡ ಬೆಳ್ಳಿ ಮುಖವಾಡ, ಅರಿಶಿನ ಮುಖವಾಡದ ಜೊತೆಗೆ ಅಲಂಕೃತ ಮೂರ್ತಿಗಳು ಆಕರ್ಷಣೀಯವಾಗಿವೆ.

ಮೈಸೂರು, ಆ.3(ಎಂಕೆ)– 'ಭಾಗ್ಯದ ಲಕ್ಷ್ಮಿ ಬಾರಮ್ಮ... ನಮ್ಮಮ್ಮ ನೀ ಸೌಭಾಗ್ಯದ ಲಕ್ಷ್ಮಿ ಬಾರಮ್ಮ...' ಎಂಬ ಭಕ್ತಿ ಗಾನ ಸುಧೆಯೊಂದಿಗೆ ವರಮಹಾಲಕ್ಷ್ಮಿಯನ್ನು ತಮ್ಮ ತಮ್ಮ ಮನೆ–ಮನಗಳಿಗೆ ಬರಮಾಡಿಕೊಳ್ಳಲು ಮೈಸೂರಿನ ಲಕ್ಷ್ಮಿಯರು ಭರದ ಸಿದ್ಧತೆಯಲ್ಲಿದ್ದಾರೆ.

ಹಿಂದೂ ಧಾರ್ಮಿಕ ಹಬ್ಬಗಳಲ್ಲಿಯೇ ವಿಶೇಷ ಪೂಜಾ ಕೈಂಕರ್ಯದೊಂದಿಗೆ ಸಡಗರ–ಸಂಭ್ರಮದಿಂದ ನಡೆಯುವ ಅದರಲ್ಲೂ ಮಹಿಳೆಯರ ನೆಚ್ಚಿನ ಹಬ್ಬವಾದ 'ವರಮಹಾಲಕ್ಷ್ಮಿ ವ್ರತ' ಆಚರಣೆಗೆ ಸಜ್ಜಾಗುತ್ತಿರುವ ಮೈಸೂರಿನ ಮಾರುಕಟ್ಟೆಗಳಲ್ಲಿ ಬಗೆ ಬಗೆಯ ಅತ್ಯಾಕರ್ಷಕ ಲಕ್ಷ್ಮಿ ಮುಖವಾಡಗಳು, ಅಲಂಕಾರಿಕ ವಸ್ತುಗಳು ಕಣ್ಮನ ಸೆಳೆಯುತ್ತಿವೆ.

ಮಂಗಳ ದ್ರವ್ಯಗಳನ್ನಿಟ್ಟು ಕಳಸಕ್ಕೆ ಸೀರೆ ತೊಡಿಸಿ ಲಕ್ಷ್ಮಿ ಕೂರಿಸುವ ವರಮಹಾಲಕ್ಷ್ಮಿವ್ರತ ಆಚರಣೆ ಕಾಲಕ್ಕೆ ತಕ್ಕಂತೆ ಬದಲಾಗುತ್ತಿದೆ. ಆಭರಣಗಳಿಂದ ಸಿಂಗರಿಸಿರುವ ಲಕ್ಷ್ಮಿ ವಿಗ್ರಹಗಳು, ಮುಖವಾಡಗಳು, ಅಲಂಕಾರಿಕ ಒಡವೆಗಳತ್ತ ಮಹಿಳೆಯರ ಚಿತ್ತ ಹರಿದಿದ್ದು, ಲಕ್ಷ್ಮಿಯನ್ನು ಸಂತೃಪ್ತಿಗೊಳಿಸಿ ಮನೆಗೆ ಆಹ್ವಾನಿಸುವ ಪೂಜಾ ಕೈಂಕರ್ಯದಲ್ಲಿ ಮಗ್ನರಾಗುತ್ತಿದ್ದಾರೆ.

ಮೈಸೂರಿನ ದೇವರಾಜ ಮಾರುಕಟ್ಟೆ, ಅಗ್ರಹಾರ ಮಾರುಕಟ್ಟೆ, ಸಂತೆಪೇಟೆ ಸೇರಿದಂತೆ ಹಲವೆಡೆ ಲಕ್ಷ್ಮಿ ಮುಖವಾಡಗಳು, ಅಲಂಕಾರಿಕ ವಸ್ತುಗಳ ಮಾರಾಟ ಆರಂಭವಾಗಿದ್ದು, ಈ ಬಾರಿ ಕಳೆದ ಬಾರಿಗಿಂತಲೂ ವೈಭವಯುತವಾಗಿ ಹಬ್ಬ ಆಚರಿಸಬೇಕು ಎಂಬ ನಿಟ್ಟಿನಲ್ಲಿ ಮಹಿಳೆಯರು ಲಕ್ಷ್ಮಿ ಅಲಂಕಾರಿಕ ವಸ್ತುಗಳನ್ನು ಖರೀದಿಸಲು ಮುಗಿಬೀಳುತ್ತಿದ್ದಾರೆ. ವರಮಹಾಲಕ್ಷ್ಮಿ ವ್ರತ ಆಚರಣೆಗೆ ಅಗತ್ಯವಿರುವ ಮಂಗಳ ದ್ರವ್ಯಗಳಾದ ಅರಿಶಿನ–ಕುಂಕುಮ, ಅಡಿಕೆ, ಗಂಧದ ಕಡ್ಡಿ, ಬಳೆ–ಬಿಚ್ಚಾಲೆ, ಅರಿಶಿಣದ ಕೊನೆ, ಕಳಸದಲ್ಲಿ ಹಾಕುವ ಗೋಮತಿ ಚಕ್ರ, ಗುಲಗಂಜಿ, ಶ್ರೀ ಫಲ, ಸುದರ್ಶನ ಚಕ್ರ, ಗರುಡ ಕೊಕ್ಕು, ಲಕ್ಷ್ಮಿ ನಾಣ್ಯ, ತಿಲಕ, ಹಲವು ಪದಾರ್ಥಗಳ ಮಾರಾಟ ಜೋರಾಗಿದೆ.

ಮಾರಾಟ ಆರಂಭವಾಗಿದೆ: ಆ.8ರ ವರಮಹಾಲಕ್ಷ್ಮಿ ಹಬ್ಬದ ಖರೀದಿ ಆರಂಭವಾಗಿದೆ. ಲಕ್ಷ್ಮಿ ಅಲಂಕಾರಕ್ಕೆ ಬೇಕಾದಂತಹ ಎಲ್ಲಾ ಬಗೆಯ ವಸ್ತುಗಳು ಮಾರುಕಟ್ಟೆಗೆ ಬಂದಿದ್ದು, ಈಗಾಗಲೇ ಹಲವರು ಬಂದು ಖರೀದಿ ಮಾಡುತ್ತಿದ್ದಾರೆ. ಕಳೆದ ವರ್ಷಕ್ಕಿಂತ ಅತ್ಯಾಕರ್ಷಕ ಲಕ್ಷ್ಮಿ ಮೂರ್ತಿಗಳು ಇದ್ದು, ಎಲ್ಲರ ಗಮನ ಸೆಳೆಯುತ್ತಿದೆ ಎಂದು ದೇವರಾಜ ಮಾರುಕಟ್ಟೆ ಶ್ರೀ ವಿನಾಯಕ ಪೂಜಾ ಸ್ಟೋರ್ ನಾಗೇಂದ್ರ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಕೆಎಸ್‌ಆರ್‌ಟಿಸಿ ಸಂಸ್ಥಾಪನಾ ದಿನಾಚರಣೆ



ಕೆಎಸ್‌ಆರ್‌ಟಿಸಿ ಸಂಸ್ಥಾಪನ ದಿನಾಚರಣೆ ಅಂಗವಾಗಿ ನಿಗಮದ ಎಂಡಿಎಂಎಸ್ ಸೊಸೈಟಿ ಸದಸ್ಯರೂ ಆದ ನಿಗಮದ ನಿವೃತ್ತ ನೌಕರರನ್ನು ಅಭಿನಂದಿಸಲಾಯಿತು. ಎಂಡಿಎಂಎಸ್ ಸೊಸೈಟಿ ಅಧ್ಯಕ್ಷ ಕೆ.ಲೋಕೇಶ್, ಉಪಾಧ್ಯಕ್ಷೆ ಶ್ರೀಮತಿ ನಾಗಲೀಲಾ, ನಿರ್ದೇಶಕರಾದ ಎಂ.ಪಿ.ನಾಗಪ್ರಸಾದ್, ದೇವರಾಜ್ ಕುಮಾರ್, ಮಹಾದೇವಸ್ವಾಮಿ, ಮಾದೇಶ್, ಮಹೇಶ್, ರಾಜು, ಮಹಾದೇವಸ್ವಾಮಿ, ರಾಮು, ರಘು ಮತ್ತಿತರರು ಉಪಸ್ಥಿತರಿದ್ದರು.

ನಾಳೆ ಭಾವಗೀತೆ, ಜನಪದಗೀತೆಗಳ ಸಂಗೀತ ಸಮ್ಮಿಲನ

ಮೈಸೂರು,ಆ.3(ಎಂಟಿವೈ)–ಜನ ಚೈತನ್ಯ ಫೌಂಡೇಷನ್ ವತಿಯಿಂದ ಆ.5ರಂದು ಸಂಜೆ 4.30ರಿಂದ 'ಓ ನನ್ನ ಚೇತನ, ಆಗು ನೀ ಅನಿಕೇತನ' ಭಾವಗೀತೆ ಮತ್ತು ಜನಪದಗೀತೆಗಳ ಸಂಗೀತ ಸಮ್ಮಿಲನ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಫೌಂಡೇಷನ್‌ನ ಅಧ್ಯಕ್ಷ ಆರ್.ಲಕ್ಷ್ಮಣ್ ತಿಳಿಸಿದ್ದಾರೆ.


ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಸಂಜೆ 4.30ಕ್ಕೆ ನಾದ ಬ್ರಹ್ಮ ಸಂಗೀತ ಸಭಾಂಗಣದಲ್ಲಿ ನಡೆಯುವ ಕಾರ್ಯಕ್ರಮವನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನಸ್ವಾಮಿ ಉದ್ಘಾಟಿಸುವರು. ಕರ್ನಾಟಕ ಸುಗಮ ಸಂಗೀತ ಪರಿಷತ್ತಿನ ಜಿಲ್ಲಾಧ್ಯಕ್ಷ ಡಾ.ನಾಗರಾಜ ವಿ.ಭೈರಿ ಅಧ್ಯಕ್ಷತೆ ವಹಿಸುವರು ಎಂದರು.

ಹಿರಿಯ ಪತ್ರಕರ್ತ ಅಂಶಿ ಪ್ರಸನ್ನ ಕುಮಾರ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಎಂ.ಡಿ.ಸುದರ್ಶನ್, ಸಂಸ್ಕೃತಿ ಚಿಂತಕ ಕೆ.ರಘುರಾಂ ವಾಜಪೇಯಿ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್ ಇನ್ನಿತರರು ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವರು. ಇದೇ ಸಂದರ್ಭದಲ್ಲಿ ಪದ್ಮಶ್ರೀ ಪುರಸ್ಕೃತ ಗಿರಿಜನ ಮುಖಂಡ ಸೋಮಣ್ಣ ಅವರನ್ನು ಅಭಿನಂದಿಸಲಾಗುವುದು ಎಂದರು.

ಜನಪದ ಗಾಯಕ ಅಮ್ಮರಾಮಚಂದ್ರ, ಜಾಯ್ಸ್ ವೈಶಾಕ್, ಪುಷ್ಪಲತಾ ಶಿವಕುಮಾರ್, ವೈ.ಎಂ.ನಾಗೇಂದ್ರ, ರವಿರಾಜ್ ಹಾ.ಸು., ಸೌಮ್ಯ ಪ್ರಕಾಶ್ ಸೇರಿದಂತೆ ಇನ್ನಿತರ ಗಾಯಕರು ಜನಪದ ಮತ್ತು ಭಾವಗೀತೆಗಳನ್ನು ಹಾಡಲಿದ್ದಾರೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಗಾಯಕರಾದ ಜಾಯ್ಸ್ ವೈಶಾಕ್, ಬಿ.ಎಸ್.ವಿಜಯ್ ಆನಂದ್, ಕೆ.ನರಸಿಂಹಮೂರ್ತಿ ಇದ್ದರು.

ಆ.9ರಿಂದ ಔಷಧೀಯ ಅಕ್ಕಿ ಆರೋಗ್ಯ ಮೇಳ



ಮೈಸೂರು, ಆ.3–ದೇಸಿ ಅಕ್ಕಿ ಸಂಸ್ಕೃತಿ ಮತ್ತು ಬಳಕೆಯನ್ನು ಜನಪ್ರಿಯಗೊಳಿಸುವ ಉದ್ದೇಶದಿಂದ ಸಹಜ ಸಮೃದ್ಧ ಸಂಸ್ಥೆಯು ಮೈಸೂರಿನಲ್ಲಿ ಔಷಧೀಯ ಅಕ್ಕಿ ಮೇಳವನ್ನು ಆಯೋಜಿಸಲಾಗಿದೆ.

ನಗರದ ನಂಜರಾಜ ಬಹದ್ದೂರ್ ಛತ್ರದಲ್ಲಿ ಇದೇ ಆ.9 ಮತ್ತು 10ರಂದು ಬೆಳಗ್ಗೆ 10 ಗಂಟೆಯಿಂದ ರಾತ್ರಿ 8ರವರೆಗೆ ಅನ್ನಸ್ವಾತಂತ್ರ್ಯಕ್ಕಾಗಿ ಔಷಧೀಯ ಅಕ್ಕಿ ಮೇಳ ಆರೋಗ್ಯಕ್ಕಾಗಿ ಆಹಾರ; ಕಾಯಿಲೆಗಳಿಗೆ ಪರಿಹಾರ ಮೇಳವನ್ನು ಆಯೋಜಿಸಲಾಗಿದೆ. ಮೇಳದಲ್ಲಿ ಆ.10 ರಂದು ಮಧ್ಯಾಹ್ನ 12.30ಕ್ಕೆ ಅಕ್ಕಿ ಅಡುಗೆ ಸ್ಪರ್ಧೆ ಆಯೋಜಿಸಲಾಗಿದ್ದು, ದೇಸಿ ಅಕ್ಕಿಗಳನ್ನು ಬಳಸಿ ಮನೆಯಲ್ಲಿಯೇ ಅಡುಗೆ ಮಾಡಿ ಮೇಳಕ್ಕೆ ತಂದು ಪ್ರದರ್ಶಿಸಿ ಬಹುಮಾನಗಳನ್ನು ಗೆಲ್ಲಬಹುದಾಗಿದೆ.

ಸ್ಪರ್ಧೆಯಲ್ಲಿ ಗೆಲ್ಲುವ ಮೂವರು ವಿಜೇತರಿಗೆ ನಗದು ಬಹುಮಾನ ಮತ್ತು ಪ್ರಮಾಣ ಪತ್ರ ನೀಡಲಾಗುತ್ತದೆ. ಸ್ಪರ್ಧೆಯಲ್ಲಿ ಭಾಗವಹಿಸಲು ಯಾವುದೇ ಶುಲ್ಕ ಇರುವುದಿಲ್ಲ. ಆಸಕ್ತರು ತಮ್ಮ ಹೆಸರನ್ನು ನೋಂದಾಯಿಸಲು ಮೊ.ಸಂ: 98809 08608 ಸಂಪರ್ಕಿಸಬಹುದು.

ಸ್ಕೌಟ್ಸ್ & ಗೈಡ್ಸ್ ಬಗ್ಗೆ ಅರಿವು



ವಿಶ್ವ ಸ್ಕೌಟ್ ಸ್ಕಾರ್ಫ್ ದಿನದ ಪ್ರಯುಕ್ತ ಮೈಸೂರಿನ ಎಸ್‌ಟಿಜಿ ಪ್ರಥಮ ದರ್ಜೆ ಕಾಲೇಜಿನ ಎಲ್ಲಾ ಪ್ರಾಧ್ಯಾಪಕರು ದಿನಪೂರ್ತಿ ಸ್ಕಾರ್ಫ್ ಧರಿಸುವ ಮೂಲಕ ಆಚರಿಸಿದರು. ವಿದ್ಯಾರ್ಥಿಗಳಿಗೆ ಸ್ಕೌಟ್ಸ್ & ಗೈಡ್ ಬಗ್ಗೆ ಅರಿವು ಮೂಡಿಸಲಾಯಿತು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

04.08.2025 ಸೋಮವಾರ, ಮಳೆ ನಕ್ಷತ್ರ: ಆಶ್ಲೇಷ 03.08.2025 ರಿಂದ 16.08.2025 ವಿಶ್ವವಸು ನಾಮ ಸಂವತ್ಸರ, ದಕ್ಷಿಣಾಯಣ, ವರ್ಷ ಋತು, ಶ್ರಾವಣ ಮಾಸ, ಶುಕ್ಲ ಪಕ್ಷ, ತಿಥಿ: ದಶಮಿ, ನಕ್ಷತ್ರ: ಅನುರಾಧ, ರಾಹುಕಾಲ: ಬೆಳಗ್ಗೆ 7.30ರಿಂದ 9ರವರೆಗೆ

- **ಶ್ರೀ ಚಾಮುಂಡೇಶ್ವರಿ ಮತ್ತು ಶ್ರೀ ಕರುಮಾರಿಯಮ್ಮನವರ ದೇವಸ್ಥಾನ ಟ್ರಸ್ಟ್ :** 95ನೇ ವರ್ಷದ ವಿಶೇಷ ಕರಗ ಮಹೋತ್ಸವ, ಸಂಜೆ 7 ಗಂಟೆಗೆ ಸ್ವರ ಸ್ವಾಗರ ಮ್ಯೂಸಿಕ್ ಫೌಂಡೇಷನ್‌ನಿಂದ ಜಾನಪದ ಗೀತೆಗಳು–ಶ್ರೀಮತಿ ಶುಭ ರಾಘವೇಂದ್ರ ಅವರಿಂದ. ಸ್ಥಳ: ದೇವಸ್ಥಾನ, ವಿದ್ಯಾರಣ್ಯಪುರಂ.
- **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಬೆಳಗ್ಗೆ 6.30ರಿಂದ ದೇಹ–ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ, ಬೆಳಗ್ಗೆ 9ರಿಂದ ಅರ್ಥರೈಟಿಸ್‌ಗೆ ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ ಆವರಣ, ಲಲಿತಾದ್ರಿ ರಸ್ತೆ, ಆಲನಹಳ್ಳಿ, ಬೆಳಗ್ಗೆ 9ಕ್ಕೆ.
- **ಕಾವೇರಿ ಆಯುರ್ವೇದ ಆಸ್ಪತ್ರೆ :** ಡಿಜಿಟಲ್ ಡಿಟಾಕ್ಸ್ ಮತ್ತು ಅತ್ಯಾಸಕ್ತಿ ಅರಿವು ಶಿಬಿರ, ಕೊಬ್ಬಿನ ಗಂಟು ಚಿಕಿತ್ಸಾ ಶಿಬಿರ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್, ಬೆಳಗ್ಗೆ 9 ರಿಂದ.
- **ಜೆಎಸ್‌ಎಸ್ ಕಾನೂನು ಕಾಲೇಜು :** ದೀಕ್ಷಾರಂಭ, ಪುನಶ್ಚೇತನ ಕಾರ್ಯಕ್ರಮ, ಸ್ಥಳ: ಸಿಲ್ವರ್ ಜ್ಯೂಬಿಲಿ ಸಭಾಂಗಣ, ಬೆಳಗ್ಗೆ 9ಕ್ಕೆ.
- **ಶ್ರೀ ವೀರಭದ್ರೇಶ್ವರ ಸ್ವಾಮಿ ಹಾಗೂ ಶ್ರೀ ಚಾಮರಾಜೇಶ್ವರ ಸ್ವಾಮಿ ದೇವಸ್ಥಾನ ಟ್ರಸ್ಟ್ :** ಶ್ರೀ ವೀರಭದ್ರೇಶ್ವರ ಸ್ವಾಮಿಯ ಜನ್ಮೋತ್ಸವ, ಮಹಾರಥೋತ್ಸವ, ಶ್ರಾವಣ ಮಾಸದ ಪೂಜಾ ಕಾರ್ಯಕ್ರಮ, ಸ್ಥಳ: ದೇವಸ್ಥಾನದ ಆವರಣ, ಡಿ.ಬನುಮಯ್ಯ ರಸ್ತೆ, ಕೆ.ಆರ್.ಮೊಹಲ್ಲಾ, ಬೆಳಗ್ಗೆಯಿಂದ.
- **ಸಂಚಲನ ಮೈಸೂರು, ರಂಗರಥ ಬೆಂಗಳೂರು:** ನಟನಾಭ್ಯಾಸ ಶಿಬಿರ, ಶಿಬಿರದ ನಿರ್ದೇಶಕರು: ನಟ, ನಿರ್ದೇಶಕ, ಚಿತ್ರಕಥೆ, ಸಂಭಾಷಣೆ, ನಾಟಕಕಾರರಾದ ಆಸಿಫ್ ಕ್ಷತ್ರಿಯ, ನಟಿ, ನಿರ್ದೇಶಕಿ, ಯೋಗ ತರಬೇತುದಾರರು, ಒಡಿಸ್ಸಿ ಮತ್ತು ಯಕ್ಷಗಾನ ನೃತ್ಯಪಟು ಶ್ವೇತಾ ಶ್ರೀನಿವಾಸ್, ಸ್ಥಳ: ತಾಲೀಮು ಕೊಠಡಿ, ಕಲಾಮಂದಿರ ಆವರಣ, ಬೆಳಗ್ಗೆ 6.30ರಿಂದ.
- **ಪರಿವರ್ತನ ಬ್ಯುಸಿನೆಸ್ ಸ್ಕೂಲ್ :** ಸೈಬರ್ ಸೆಕ್ಯೂರಿಟಿ ಓರಿಯೆಂಟೇಷನ್, ಭಾಗವಹಿಸುವವರು : ಕೋರ್ಸ್‌ನ ನಿರ್ದೇಶಕ ಡಾ. ಎ.ಎಂ. ಸುಧಾಕರ, ಸ್ಥಳ: ಸ್ಕೂಲ್ ಆವರಣ, ಕೆ.ಆರ್.ಎಸ್. ರಸ್ತೆ, ಬೆಳಗ್ಗೆ 10 ರಿಂದ.
- **ಶ್ರೀ ಸೂತ್ರ ಆಯುರ್ಧಾಮ :** ವೆರಿಕೋಸ್ ಸಮಸ್ಯೆ ಉಚಿತ ವೈದ್ಯಕೀಯ ತಪಾಸಣೆ ಮತ್ತು ಸಲಹಾ ಶಿಬಿರ, ಸ್ಥಳ: ಶ್ರೀ ಸೂತ್ರ ಆಯುರ್ಧಾಮ, ಚಾಮುಂಡಿಪುರಂ, ಬೆಳಗ್ಗೆ 10ರಿಂದ.
- **ನೀಲಗಂಗಾ ಮಹಿಳಾ ಬಳಗ :** ಜಯಂತ್ಯುತ್ಸವ–2025, ಬಸವ ಜಯಂತಿ, ಅಕ್ಕ ಮಹಾದೇವಿ ಜಯಂತಿ, ರೇಣುಕ ಜಯಂತಿ, ಸಾನ್ನಿಧ್ಯ: ತಿ.ನರಸೀಪುರ ತಾಲೂಕು ಸೋಸಲೆಯ ಶ್ರೀ ಸಿದ್ದರಹಳ್ಳಿ ಪಾರಮಾರ್ಥ ಗವಿಮಠದ ನಿ.ಪ್ರ.ಸ್ವ ಶ್ರೀ ಮಲ್ಲಿಕಾರ್ಜುನ ಸ್ವಾಮಿಗಳು, ಸ್ಥಳ: ಜೆಎಸ್‌ಎಸ್ ಕಾನೂನು ಕಾಲೇಜು, ಕುವೆಂಪುನಗರ, ಸಂಜೆ 4 ಗಂಟೆಗೆ.
- **ಶ್ರೀ ಸುತ್ತೂರು ಮಠ (ಮೈಸೂರು ಶಾಖೆ) :** ಶ್ರಾವಣಮಾಸ ಪೂಜಾನುಷ್ಠಾನ ಮತ್ತು ಪ್ರವಚನ, ಪ್ರಾಧ್ಯಾಪಕ ಡಾ.ಬಿ.ವಿ.ವಸಂತಕುಮಾರ್ ಅವರಿಂದ ಪ್ರವಚನ, ವಾಚನ: ಗಮಕ ವಿದ್ವಾನ್ ಕೃ.ರಾಮಚಂದ್ರ, ಸಾಮೂಹಿಕ ಪ್ರಾರ್ಥನೆ, ಸ್ಥಳ: ಶ್ರೀ ಸುತ್ತೂರು ಮಠ, ಚಾಮುಂಡಿಬೆಟ್ಟದ ತಪ್ಪಲು, ಸಂಜೆ 6ಕ್ಕೆ.
- **ದಿ ಆರ್ಟ್ ಆಫ್ ಲಿವಿಂಗ್ :** ನಾಡಿ ಪರೀಕ್ಷೆ, ಸ್ಥಳ: ಆರ್ಟ್ ಆಫ್ ಲಿವಿಂಗ್ ಆಶ್ರಮ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 10 ರಿಂದ.
- **ಶ್ರೀ ಸೂತ್ರ ಆಯುರ್ಧಾಮ :** ಉಚಿತ ವೈದ್ಯಕೀಯ ತಪಾಸಣಾ ಮತ್ತು ಸಲಹಾ ಶಿಬಿರ, ಸ್ಥಳ: ಸ್ಥಳ: ಶ್ರೀ ಸೂತ್ರ ಆಯುರ್ಧಾಮ, ಚಾಮುಂಡಿಪುರಂ, ಬೆಳಗ್ಗೆ 10ರಿಂದ.

ಮೈಸೂರು ಆಕಾಶವಾಣಿ




ಬೆಳಗ್ಗೆ: 6.10–ಚಿಂತನ, 6.15–ಗೀತಾರಾಧನ, 6.35 ಮತ್ತು ಸಂಜೆ 6.10: ಸಸ್ಯ ಸಿರಿ ಮನೆಯಂಗಳದಲ್ಲಿರುವ ಔಷಧೀಯ ಸಸ್ಯಗಳು, ಪ್ರಸ್ತುತಿ: ಡಾ.ಟಿ.ಶಿವಕುಮಾರ್, 6.40–ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಬಿ.ಶ್ರೀರಾಂಭಟ್, ಪಿ.ಸುರಭಿ ಹಾಗೂ ಸಿ.ವಿಶ್ವನಾಥ್, ವ್ಯಾಖ್ಯಾನ–ಕೆ.ಎಲ್.ಪದ್ಮಿನಿ ಹೆಗಡೆ, 6.50–ರೈತರಿಗೆ ಸಲಹೆ, 7.15–ಭಾವಗೀತೆಗಳು, 8.30–ಕನ್ನಡ ಚಿತ್ರಗೀತೆಗಳು, 9.00–ನೆನಪಿನಂಗಳ (ಧ್ವನಿ ಮುದ್ರಣ ಭಂಡಾರದಿಂದ) 10.00– ಕರ್ನಾಟಕ ಶಾಸ್ತ್ರೀಯ ಸಂಗೀತ ವಿದ್ವಾನ್ ಎಂ.ಎಸ್.ಶೀಲಾ–ಹಾಡುಗಾರಿಕೆ, 10.30–ಹಿಂದಿ ಚಿತ್ರಗೀತೆಗಳು, 11.00–ನಿಮ್ಮೊಂದಿಗೆ ಮೈಸೂರು ಆಕಾಶವಾಣಿ –ಗೇಮ್ ಷೋ, ಪ್ರಸ್ತುತಿ–ಬಿ.ದಿಗ್ವಿಜಯ್, 12.05–ವನಿತಾ ವಿಹಾರ, 12.35–ದೇವರನಾಮ, 12.45–ನಮ್ಮ ಆರೋಗ್ಯ ಹದಿಹರೆಯದವರ ದಿನಾಚರಣೆ ಸಂಬಂಧವಾಗಿ ವಿಶೇಷ ಕಾರ್ಯಕ್ರಮ, ಹದಿಹರೆಯದವರ ಮಾನಸಿಕ ಸಮಸ್ಯೆಗಳು ಮತ್ತು ಪರಿಹಾರ ಕುರಿತು ಬೆಂಗಳೂರಿನ ನಿಮ್ಹಾನ್ಸ್ ಸಂಸ್ಥೆಯ ಮಾನಸಿಕ ಆರೋಗ್ಯ ತಜ್ಞರಾದ ಡಾ.ಗಜಾನನ ಸಭಾಹಿತ್ ಮತ್ತು ಟೆಲಿಮನಸ್ ಪ್ರಾಜೆಕ್ಟ್ ಮ್ಯಾನೇಜರ್ ಅರ್ಚನಾ ಕಾರ್ತಿಕ್ ಅವರೊಂದಿಗೆ ಮಾತುಕತೆ, ಇವರೊಂದಿಗೆ ಭಾಗವಹಿಸುತ್ತಾರೆ: ಬೇದ್ರೆ ಮಂಜುನಾಥ, 1.00–ಪ್ರಗತಿ ಪಥ, ಕೇಂದ್ರ ಸರ್ಕಾರದ ಅಭಿವೃದ್ಧಿ ಯೋಜನೆಗಳ ಸರಣಿ, 1.20–ಭಾವಗೀತೆಗಳು, ಕೆ.ಎಂ.ಕುಸುಮಾ ಹಾಗೂ ಚಂದ್ರಶೇಖರ ಕಂಬಾರ, 2.30–ಪ್ರದೇಶ ಸಮಾಚಾರ, 2.40–ಚಿತ್ರಗೀತೆಗಳು, 3.00–ಕರ್ನಾಟಕ ಶಾಸ್ತ್ರೀಯ ಸಂಗೀತ: ಡಾ.ಎಸ್.ವಿ.ಸಹನ–ವೀಣಾವಾದನ, 4.00–ಮಹಿಳಾರಂಗ, ನನ್ನ ಹಕ್ಕು–ನನ್ನ ಜವಾಬ್ದಾರಿ–ಮಹಿಳಾ ಕಾನೂನು ಜಾಗೃತಿ ಕಾರ್ಯಕ್ರಮ, ಭಾಗವಹಿಸುತ್ತಾರೆ–ಮೈಸೂರಿನ ವಕೀಲರಾದ ಎಂ.ಎನ್. ಸುಮನಾ. ಪ್ರಸ್ತುತಿ–ಸಹನ, 4.45–ಹಿಂದಿ ಪಾಠ, ಪ್ರಸ್ತುತಿ: ಡಾ.ಸ್ಮಿತಾ ಚಿಪ್ಳೂಣ್‌ಕರ್, 5.05–ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50–ಕೃಷಿರಂಗ: ಅರಿಶಿಣ ಬೇಸಾಯದಲ್ಲಿ ಸಮಗ್ರ ಪೋಷಕಾಂಶ ನಿರ್ವಹಣೆ ಕುರಿತು ಸಂವಾದ, ಭಾಗವಹಿಸುತ್ತಾರೆ–ಚಾಮರಾಜನಗರ ತಾಲೂಕು ಹರದನಹಳ್ಳಿಯ ಕೃಷಿ ವಿಜ್ಞಾನ ಕೇಂದ್ರದ ಮಣ್ಣು ವಿಜ್ಞಾನಿ ಡಾ.ಜಿ.ಎಸ್.ಯೋಗಿಶ್ ಮತ್ತು ಗುಂಡ್ಲುಪೇಟೆ ತಾಲೂಕು ತೆರಕಣಾಂಬಿ ಹೋಬಳಿ ಪಡಗೂರು ಗ್ರಾಮದ ರಾಘವೇಂದ್ರ. ಪ್ರಸ್ತುತಿ–ಎನ್.ಕೇಶವಮೂರ್ತಿ, 7.45–ಕನ್ನಡ ಚಿತ್ರಗೀತೆಗಳು, 8.00–ಸಂಸತ್ ಸಮೀಕ್ಷಾ, 8.15–ಯುವವಾಣಿ 2024ನೇ ಸಾಲಿನ ಕೇಂದ್ರ ಲೋಕಸೇವಾ ಆಯೋಗದ ಪರೀಕ್ಷೆಯಲ್ಲಿ ಉನ್ನತ Rank ಗಳಿಸಿದ ಮೈಸೂರು ಜಿಲ್ಲೆ, ಸಾಲಿಗ್ರಾಮ ತಾಲೂಕಿನ ಅಂಕನಹಳ್ಳಿ ಗ್ರಾಮದ ಪ್ರೀತಿ ಎ.ಸಿ. ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ, ದಿಗ್ವಿಜಯ ಬಿ. 9.30–ಕರ್ನಾಟಕ ಶಾಸ್ತ್ರೀಯ ಸಂಗೀತ: ಭರತ್ ಸುಂದರ್–ಹಾಡುಗಾರಿಕೆ 10.00–ಸಂಸತ್‌ನ ಪ್ರಶ್ನೋತ್ತರ ಕಲಾಪಗಳ ಧ್ವನಿಮುದ್ರಣ.

ಗ್ರಾಮೀಣ ಆರೋಗ್ಯ, ತಂತ್ರಜ್ಞಾನ ಅಭಿವೃದ್ಧಿಗೆ ಹೊಸ ಹೆಜ್ಜೆ

ಅಮೆರಿಕದ ಸ್ಟಾನ್‌ಫೋರ್ಡ್ ಯೂನಿವರ್ಸಿಟಿ ಕರ್ನಾಟಕ ಸಹಭಾಗಿತ್ವಕ್ಕೆ ಒಲವು

ಸ್ಪೀಕರ್ ಖಾದರ್ ನೇತೃತ್ವದ ಉನ್ನತ ಮಟ್ಟದ ನಿಯೋಗ ಭೇಟಿ



ವಿಧಾನಸಭಾಧ್ಯಕ್ಷ ಯು.ಟಿ.ಖಾದರ್ ನೇತೃತ್ವದ ಉನ್ನತ ಮಟ್ಟದ ನಿಯೋಗವು ಅಮೆರಿಕದ ಸ್ಯಾನ್ ಫ್ರಾನ್ಸಿಸ್ಕೋದಲ್ಲಿರುವ ಪ್ರತಿಷ್ಠಿತ ಸ್ಟಾನ್‌ಫೋರ್ಡ್ ವಿಶ್ವವಿದ್ಯಾಲಯಕ್ಕೆ ಭೇಟಿ ನೀಡಿತ್ತು.

ಸ್ಯಾನ್ ಫ್ರಾನ್ಸಿಸ್ಕೋ (ಕ್ಯಾಲಿಫೋರ್ನಿಯ), ಆ.3– ವಿಧಾನಸಭಾಧ್ಯಕ್ಷ ಯು.ಟಿ. ಖಾದರ್ ಹಾಗೂ ಶಾಸಕ ಮಂಜುನಾಥ್ ಭಂಡಾರಿ ನೇತೃತ್ವದ ಉನ್ನತ ಮಟ್ಟದ ನಿಯೋಗವು ಅಮೆರಿಕದ ಸ್ಯಾನ್ ಫ್ರಾನ್ಸಿಸ್ಕೋದಲ್ಲಿರುವ ಪ್ರತಿಷ್ಠಿತ ಸ್ಟಾನ್ ಫೋರ್ಡ್ ವಿಶ್ವವಿದ್ಯಾಲಯಕ್ಕೆ ಭೇಟಿ ನೀಡಿ, ಗ್ರಾಮೀಣ ಭಾಗದ ಆರೋಗ್ಯ ಸುಧಾರಣೆ ಮತ್ತು ತಂತ್ರಜ್ಞಾನ ವಲಯದಲ್ಲಿ ಕರ್ನಾಟಕದೊಂದಿಗೆ ಸಹಭಾಗಿತ್ವ ವಹಿಸುವ ಕುರಿತು ಪ್ರಮುಖ ಮಾತುಕತೆ ನಡೆಸಿದೆ. ಈ ಭೇಟಿಯು ಕರ್ನಾಟಕದ ವೈದ್ಯಕೀಯ ಮತ್ತು ಐಟಿಬಿಟಿ ಕ್ಷೇತ್ರಗಳಿಗೆ ಹೊಸ ದಿಕ್ಕನ್ನು ನೀಡುವ ಸಾಧ್ಯತೆಗಳನ್ನು ತೆರೆದಿಟ್ಟಿದೆ.

ನಿಯೋಗವು ಸ್ಟಾನ್‌ಫೋರ್ಡ್ ವಿಶ್ವವಿದ್ಯಾಲಯದ ಪ್ರೊಫೆಸರ್‌ಗಳಾದ ಅನುರಾಗ್ ಮತ್ತು ನಂದನ್ ಅವರನ್ನು ಭೇಟಿ ಮಾಡಿ ಹೃದಯಾಘಾತ, ಸ್ಟ್ರೋಕ್ ಮತ್ತು ಕ್ಯಾನ್ಸರ್‌ನಂತಹ ಮಾರಕ ರೋಗಗಳಿಗೆ ಕಡಿಮೆ ವೆಚ್ಚದಲ್ಲಿ ಚಿಕಿತ್ಸೆ ನೀಡುವ ತಂತ್ರಜ್ಞಾನಗಳ ಕುರಿತು ಚರ್ಚಿಸಿದೆ. ನಿರ್ದಿಷ್ಟವಾಗಿ ಸ್ಟೆಂಟ್ ಅಳವಡಿಕೆ, ಹಾರ್ಟ್ ಬ್ಲಾಕೇಜ್, ರಕ್ತ ಹೆಪ್ಪುಗಟ್ಟುವಿಕೆ (ಬ್ಲಡ್ ಕ್ಲಾಟ್) ಮತ್ತು ಸರ್ವಿಕಲ್ ಕ್ಯಾನ್ಸರ್ ತಡೆಗಟ್ಟುವ ಹೊಸ ತಂತ್ರಜ್ಞಾನಗಳ ಸಂಶೋಧನೆಗಳ ಬಗ್ಗೆ ಮಾಹಿತಿ ವಿನಿಮಯ ಮಾಡಿಕೊಳ್ಳಲಾಗಿದೆ. ಚಿಕಿತ್ಸೆ ಮತ್ತು ರೋಗನಿರ್ಣಯದಲ್ಲಿ ಕೃತಕ ಬುದ್ಧಿಮತ್ತೆ (AI) ತಂತ್ರಜ್ಞಾನ ಬಳಕೆ ಬಗ್ಗೆಯೂ ಚರ್ಚೆಗಳು ನಡೆದಿವೆ.

ಐಟಿಬಿಟಿ ನೀತಿಗೆ ಮೆಚ್ಚುಗೆ: ಈ ವೇಳೆ ಸ್ಟಾನ್‌ಫೋರ್ಡ್ ವಿವಿಯು ಕರ್ನಾಟಕದ ಐಟಿಬಿಟಿ ನೀತಿಯನ್ನು ಪ್ರಶಂಸಿಸಿದೆ. ಬೆಂಗಳೂರಿನ ವಿಜ್ಞಾನ ಮತ್ತು ವೈದ್ಯಕೀಯ ವಿಜ್ಞಾನ ವಿದ್ಯಾರ್ಥಿಗಳು ಸಂಶೋಧನೆಯಲ್ಲಿ ಅಮೆರಿಕ, ಸಿಂಗಾಪುರ, ಜಪಾನ್, ಯೂರೋಪ್ ಮತ್ತು ಇಂಗ್ಲೆಂಡ್‌ನಂತಹ ದೇಶಗಳ ವಿದ್ಯಾರ್ಥಿಗಳಿಗೆ ಸವಾಲು ಒಡ್ಡಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದೆ.

ಗ್ರಾಮೀಣ ಭಾಗದ ಉನ್ನತಿಗೆ ತಂತ್ರಜ್ಞಾನ: ಗ್ರಾಮೀಣ ರೈತರಿಗೆ ಅನುಕೂಲವಾಗುವಂತೆ ಸುಧಾರಿತ ತಂತ್ರಜ್ಞಾನಗಳನ್ನು ಅಭಿವೃದ್ಧಿಪಡಿಸುವ ನಿಟ್ಟಿನಲ್ಲೂ ಮಾತು ಕತೆಗಳು ನಡೆದಿವೆ. ಕಡಿಮೆ ದರದಲ್ಲಿ ಗ್ರಾಮೀಣ ಜನರಿಗೆ ಸುಲಭವಾಗಿ ಲಭ್ಯವಾಗುವಂತೆ ಎಲೆಕ್ಟ್ರಿಕಲ್ ಸ್ಕೂಟರ್, ಆಟೋ ಮತ್ತು ಸೌರ ಚಾಲಿತ ವಾಹನಗಳನ್ನು ತಲುಪಿಸುವುದು, ಜಲ ಮತ್ತು ಇಂಧನ ಮರುಬಳಕೆ, ವಿಜ್ಞಾನ ಅಭಿವೃದ್ಧಿ ಮತ್ತು ದತ್ತಾಂಶ ವಿಜ್ಞಾನದ ಬಗ್ಗೆಯೂ ಸಂಶೋಧನೆಗಳು ನಡೆಯುತ್ತಿವೆ. ಈ ಎಲ್ಲಾ ಸಂಶೋಧನೆಗಳಿಗೆ ಕರ್ನಾಟಕ ಸರ್ಕಾರ ಆಸಕ್ತಿ ವಹಿಸಿದರೆ ಹೆಚ್ಚಿನ ಸಹಭಾಗಿತ್ವ ಸಾಧ್ಯವಾಗಲಿದೆ ಎಂದು ಪ್ರೊಫೆಸರ್‌ಗಳು ತಿಳಿಸಿದ್ದಾರೆ.

ಹೊಸ ಒಪ್ಪಂದಕ್ಕೆ ಸಿದ್ಧತೆ: ಸ್ಯಾನ್ ಫ್ರಾನ್ಸಿಸ್ಕೋ ವಿವಿಯು ಭಾರತ, ಅದರಲ್ಲೂ ಬೆಂಗಳೂರಿನೊಂದಿಗೆ ಹೊಸ ಒಪ್ಪಂದ ಮತ್ತು ಮಾತುಕತೆಗೆ ಸಿದ್ಧವಿದೆ ಎಂದು ಪ್ರೊಫೆಸರ್‌ಗಳು ತಿಳಿಸಿದ್ದು, ಈ ಮೂಲಕ ಕರ್ನಾಟಕ ಸರ್ಕಾರದೊಂದಿಗೆ ವೈದ್ಯಕೀಯ ಮತ್ತು ಐಟಿಬಿಟಿ ಕ್ಷೇತ್ರಗಳಲ್ಲಿ ಹೊಸ ಒಪ್ಪಂದಗಳನ್ನು ಮಾಡಿಕೊಳ್ಳಲು ಆಸಕ್ತಿ ವ್ಯಕ್ತಪಡಿಸಿದ್ದಾರೆ. ಇದು ಕರ್ನಾಟಕದ ಅಭಿವೃದ್ಧಿಗೆ ಹೊಸ ದಾರಿಯನ್ನು ತೆರೆಯುವ ಸಾಧ್ಯತೆ ಸೃಷ್ಟಿಸಿದೆ.

ಶಾಸಕರಾದ ಬಿ.ಆರ್.ಪಾಟೀಲ್, ಸುರೇಶ ಬಾಬು, ಭೀಮಣ್ಣ ನಾಯಕ್, ಶ್ರೀನಿವಾಸ ಮಾನೆ, ಪಿ.ಎಂ.ಅಶೋಕ್, ಅಶೋಕ್ ರೈ, ಗುರುರಾಜ್ ಗಂಟಿಹೊಳಿ, ಸುರೇಶ್‌ಶೆಟ್ಟಿ ಹಾಗೂ ದಿನೇಶ್ ಗೂಳಿಗೌಡ ನಿಯೋಗದಲ್ಲಿದ್ದಾರೆ.

ಎಲೆಕ್ಟ್ರಿಕ್, ಸೋಲಾರ್ ವಾಹನಗಳ ಬಳಕೆಗೆ ಒತ್ತು ಸಿಗಲಿ

ಕರ್ನಾಟಕದ ಸುಮಾರು 7 ಕೋಟಿ ಜನಸಂಖ್ಯೆಯಲ್ಲಿ 1.47 ಕೋಟಿ ಜನ ಬೆಂಗಳೂರಲ್ಲೇ ನೆಲೆಸಿದ್ದಾರೆ. ರಾಜ್ಯದಲ್ಲಿ ನಿತ್ಯ 6 ಸಾವಿರ ವಾಹನಗಳು ನೋಂದಣಿಯಾಗುತ್ತಿದ್ದು, ಇದರಲ್ಲಿ 2500 ವಾಹನ ನೋಂದಣಿ ಬೆಂಗಳೂರಲ್ಲೇ ಆಗುತ್ತಿದೆ. ಸ್ಟಾನ್‌ಫೋರ್ಡ್ ವಿಶ್ವವಿದ್ಯಾಲಯದಲ್ಲಿ ಗ್ರಾಮೀಣ ಭಾಗದ ಮಹಿಳೆಯರು, ರೈತರಿಗೆ ಕಡಿಮೆ ವೆಚ್ಚದಲ್ಲಿ ಎಲೆಕ್ಟ್ರಿಕ್ ವಾಹನಗಳನ್ನು ನೀಡುವ ನಿಟ್ಟಿನಲ್ಲಿ ಸಂಶೋಧನೆಗಳು ನಡೆಯುತ್ತಿವೆ. ಕರ್ನಾಟಕದಲ್ಲೂ ಮಾಲಿನ್ಯ ನಿಯಂತ್ರಣಕ್ಕೆ ಆದ್ಯತೆ ನೀಡಬೇಕು, ಎಲೆಕ್ಟ್ರಿಕ್ ಹಾಗೂ ಸೋಲಾರ್ ವಾಹನಗಳ ಬಳಕೆ ಉತ್ತೇಜನಕ್ಕಾಗಿ ಹೊಸ ತಂತ್ರಜ್ಞಾನದೊಂದಿಗೆ ನೀತಿ–ನಿಯಮಗಳನ್ನು ರೂಪಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯರವರು ಹಾಗೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಕಾರ್ಯಪ್ರವೃತ್ತರಾಗಬೇಕು.

-ದಿನೇಶ್ ಗೂಳಿಗೌಡ, ವಿಧಾನಪರಿಷತ್ ಸದಸ್ಯ

ಅಧ್ಯಯನಕ್ಕೆ ವಿಶೇಷ ತಂಡ ರಚಿಸಿ

ಸ್ಟಾನ್‌ಫೋರ್ಡ್ ಯುನಿವರ್ಸಿಟಿ ಸುಮಾರು 8 ಸಾವಿರ ಎಕರೆ ಪ್ರದೇಶದಲ್ಲಿದೆ. ಇಲ್ಲಿ ಸುಮಾರು 9 ಸಾವಿರ ವಿದ್ಯಾರ್ಥಿಗಳಿದ್ದಾರೆ. ಅದು ಅತ್ಯಾಧುನಿಕ ಹಾಗೂ ಮುಂದುವರಿದ ಯೂನಿವರ್ಸಿಟಿಯಾಗಿದ್ದು, ಇಲ್ಲಿಗೆ ಅಧ್ಯಯನಕ್ಕಾಗಿಯೇ ವಿಶೇಷ ತಂಡವನ್ನು ಕಳುಹಿಸಿಕೊಡಬೇಕಿದೆ. ಆ ಮೂಲಕ ಇಲ್ಲಿನ ಆಲೋಚನೆ, ಕಲಿಕಾ ರೀತಿ, ಗ್ರಾಮೀಣ ಜನರ ಆರೋಗ್ಯ, ತಂತ್ರಜ್ಞಾನಗಳ ಬಗ್ಗೆ ಕಲಿಕೆಗೆ ಅನುಕೂಲ ಮಾಡಿಕೊಡಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹಾಗೂ ಐಟಿಬಿಟಿ ಸಚಿವ ಪ್ರಿಯಾಂಕ್ ಖರ್ಗೆ ಅವರಿಗೆ ಮನವಿ ಮಾಡುತ್ತೇನೆ.

-ಮಂಜುನಾಥ್ ಭಂಡಾರಿ, ಶಾಸಕ, ಕೆಪಿಸಿಸಿ ಕಾರ್ಯಾಧ್ಯಕ್ಷ

ಕೊಡಗು ಗೌಡ ಸಮಾಜದಿಂದ ಆಹಾರ ಮೇಳ



ಮೈಸೂರಿನ ವಿಜಯನಗರ 2ನೇ ಹಂತದಲ್ಲಿರುವ ಮೈಸೂರು ಕೊಡಗು ಗೌಡ ಸಮಾಜದಲ್ಲಿ ಆಯೋಜಿಸಿರುವ ಆಹಾರ ಮೇಳವನ್ನು ನಗರಪಾಲಿಕೆ ಮಾಜಿ ಸದಸ್ಯ ಕೆ.ವಿ.ಶ್ರೀಧರ್ ಉದ್ಘಾಟಿಸಿದರು.

ಮೈಸೂರು, ಆ.3(ಎಂಕೆ)– ಕೊಡಗು ಗೌಡ ಸಮುದಾಯದ ವಿಶೇಷ ಸಂಸ್ಕೃತಿ, ಸಂಪ್ರದಾಯ, ಆಹಾರ ಪದ್ಧತಿ ಕ್ರಮಗಳು ಜನಪ್ರಿಯವಾಗಲಿ ಎಂದು ನಗರಪಾಲಿಕೆ ಮಾಜಿ ಸದಸ್ಯ ಕೆ.ವಿ.ಶ್ರೀಧರ್ ಆಶಿಸಿದರು.

ಮೈಸೂರಿನ ವಿಜಯನಗರ 2ನೇ ಹಂತದಲ್ಲಿರುವ ಮೈಸೂರು ಕೊಡಗು ಗೌಡ ಸಮಾಜದಲ್ಲಿ ಆಯೋಜಿಸಿದ್ದ ಆಟಿ ಗೌಜಿ(ಆಹಾರ ಮೇಳ) ಉದ್ಘಾಟಿಸಿ ಮಾತನಾಡಿದ ಅವರು, ಕೊಡಗು ಗೌಡರು ಬಳಸುವ ಕನ್ನಡ ಭಾಷೆಯನ್ನು ಕೇಳುವುದಕ್ಕೆ ಚೆಂದ. ಕೊಡಗು ಗೌಡರ ವಿಶೇಷ ಆಹಾರ ಪದ್ಧತಿ ಎಲ್ಲಾ ಕಡೆಗೂ ಚಿರಪರಿಚಿತವಾಗಿ ಶಾಶ್ವತವಾಗಿರುವಂತೆ ನೋಡಿಕೊಳ್ಳಬೇಕೆಂದು ಕರೆ ನೀಡಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಮೈಸೂರು ಕೊಡಗು ಗೌಡ ಸಮಾಜದ ಅಧ್ಯಕ್ಷ ಕೊಂಬಾರನ ಬಸಪ್ಪ ಮಾತನಾಡಿ, ಕೊಡಗಿನಲ್ಲಿ ಪರಿಸರದಲ್ಲಿ ಸಿಗುವ ಆಹಾರ ಉತ್ಪನ್ನಗಳನ್ನು ಬಳಸಿ ಜನರು ಆರೋಗ್ಯವನ್ನು ಕಾಪಾಡಿಕೊಳ್ಳುತ್ತಾರೆ. ಮೈಸೂರಿನಲ್ಲಿ ನೆಲೆಸಿರುವ ನಮ್ಮ ಸಮುದಾಯದ ಜನರಿಗೆ ಈ ಆರೋಗ್ಯದಾಯಕ ಆಹಾರವನ್ನು ಒದಗಿಸುವ ಉದ್ದೇಶದಿಂದ ಆಟಿ ಗೌಜಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದರು.

ಮಹಿಳಾ ಒಕ್ಕೂಟದ ನಡುಬೆಟ್ಟಿ ಗೀತಾ ಲಕ್ಷ್ಮಣ ಮಾತನಾಡಿ, ಆಟಿ ಗೌಜಿ ಕಾರ್ಯಕ್ರಮದ ಪ್ರಯುಕ್ತ ಹತ್ತಾರು ಮಳಿಗೆಗಳಲ್ಲಿ ಬಗೆ ಬಗೆಯ ಆರೋಗ್ಯದಾಯಕ ಆಹಾರ ಪದಾರ್ಥಗಳನ್ನು ಪ್ರದರ್ಶನ ಮತ್ತು ಮಾರಾಟಕ್ಕೆ ಇಡಲಾಗಿದ್ದು, ಸಮುದಾಯದ ಬಾಂಧವರು ಇದರ ಸದುಪಯೋಗ ಪಡೆದುಕೊಳ್ಳಬೇಕೆಂದು ಕೋರಿದರು.

ವಿಶೇಷ ಖಾದ್ಯಗಳ ಘಮಲು: ಆಹಾರ ಮೇಳದಲ್ಲಿ 18 ಮಳಿಗೆಗಳಿದ್ದು, ಆಟಿ–ಪಾಯಸ, ಪತ್ರೊಡೆ, ಕೂಗಲೆ ಹಿಟ್ಟು ಸೂಸಲೇ ಹಿಟ್ಟು, ಎಳ್ಳು ಮೆಂತೆ ಸೇರಿದಂತೆ ವಿವಿಧ ಬಗೆಯ ಕೊಡಗಿನ ಆಹಾರ ಪದಾರ್ಥಗಳನ್ನು ಪ್ರದರ್ಶನ ಮತ್ತು ಮಾರಾಟಕ್ಕಿಡಲಾಗಿದೆ.

ಮುಖಂಡರಾದ ಕುಂಯ್ಯುಮುಡಿ ರಾಮಪ್ಪ, ನಡುಮನೆ ರುಕ್ಮಿಣಿ, ಕೊಡಗು ಗೌಡ ಸಮಾಜದ ಕಾರ್ಯದರ್ಶಿ ಪೊನ್ನೆಟಿ ನಂದ, ಕೊಡಗು ಗೌಡ ಮಹಿಳಾ ಒಕ್ಕೂಟದ ಕಾರ್ಯದರ್ಶಿ ಕುಂಟುಪಣಿ ಶೀಲ, ನಿರ್ದೇಶಕ ಪಟ್ಟಡ ಶಿವಕುಮಾರ್, ಕರ್ಣಯನ ಸುನಿತಾ, ಹೊಸೂರು ಮಮತ ಮತ್ತಿತರರಿದ್ದರು.

ಸಸಿ ನೆಡುವ ಮೂಲಕ ಶಾಸಕ ಅರವಿಂದ ಬೆಲ್ಲದ್ ಹುಟ್ಟುಹಬ್ಬ ಆಚರಣೆ...



ಕರ್ನಾಟಕ ವಿಧಾನಸಭೆ ವಿರೋಧ ಪಕ್ಷದ ಉಪನಾಯಕರು, ಹುಬ್ಬಳ್ಳಿ–ಧಾರವಾಡ ಪಶ್ಚಿಮ ಕ್ಷೇತ್ರದ ಶಾಸಕರೂ ಆದ ಅರವಿಂದ್ ಬೆಲ್ಲದ್ ಅವರ 56ನೇ ಹುಟ್ಟುಹಬ್ಬದ ಪ್ರಯುಕ್ತ ಭಾನುವಾರ ರಾಮಕೃಷ್ಣನಗರದ ಉದ್ಯಾನವನದಲ್ಲಿ ಸಸಿಗಳನ್ನು ನೆಡುವ ಮೂಲಕ ಆಚರಿಸಲಾಯಿತು. ಮೈಸೂರು ನಗರ ಬಿಜೆಪಿ ಪ್ರಧಾನ ಕಾರ್ಯದರ್ಶಿ ಬಿ.ಎಂ.ರಘು, ಚಾಮುಂಡೇಶ್ವರಿ ಕ್ಷೇತ್ರದ ಅಧ್ಯಕ್ಷ ರಾಕೇಶ್‌ಭಟ್, ಉಪಾಧ್ಯಕ್ಷರಾದ ದಾರಿಪುರ ಸುನಿಲ್‌ಕುಮಾರ್, ಹೆಚ್.ಜಿ.ರಾಜಮಣಿ, ಪಟೇಲ್ ಶಿವು, ಮಾದಳ್ಳಿ ನಂಜುಂಡಸ್ವಾಮಿ, ರಮಾಭಾಯಿ, ರಾಧಾ ಮುತಾಲಿಕ್ ಸೇರಿದಂತೆ ಸ್ಥಳೀಯರು ಈ ವೇಳೆ ಉಪಸ್ಥಿತರಿದ್ದರು.

ಆ.10ರಂದು ಪ್ರಧಾನಿ ನರೇಂದ್ರ ಮೋದಿಯಿಂದ ಬೆಂಗಳೂರಿನ ಮೆಟ್ರೋ ಹಳದಿ ಮಾರ್ಗ ಉದ್ಘಾಟನೆ



ಬೆಂಗಳೂರು, ಆ.3– ಬಹು ನಿರೀಕ್ಷಿತ ಮೆಟ್ರೋ ಹಳದಿ ಮಾರ್ಗ ಉದ್ಘಾಟನೆಗೆ ಕೊನೆಗೂ ಮುಹೂರ್ತ ಫಿಕ್ಸ್ ಆಗಿದ್ದು, ಪ್ರಧಾನಿ ನರೇಂದ್ರ ಮೋದಿ ಆ.10ರಂದು ಮೆಟ್ರೋ ಹಳದಿ ಮಾರ್ಗ ಉದ್ಘಾಟಿಸಲಿದ್ದಾರೆ ಎಂದು ಬಿಜೆಪಿ ಸಂಸದ ತೇಜಸ್ವಿ ಸೂರ್ಯ ಭಾನುವಾರ ಘೋಷಿಸಿದ್ದಾರೆ.

'ಎಕ್ಸ್'ನಲ್ಲಿ ಪೋಸ್ಟ್ ಮಾಡಿರುವ ಅವರು, ಪ್ರಧಾನಿ ನರೇಂದ್ರ ಮೋದಿ ಅವರು ಆ.10 ರಂದು ಮೆಟ್ರೋ ಹಳದಿ ಮಾರ್ಗವನ್ನು ಉದ್ಘಾಟಿಸಲಿದ್ದಾರೆ. ಮೆಟ್ರೋ ಹಳದಿ ಮಾರ್ಗದಿಂದಾಗಿ ಸುಮಾರು ಎಂಟು ಲಕ್ಷ ಪ್ರಯಾಣಿಕರಿಗೆ ಪ್ರಯೋಜನವಾಗಲಿದ್ದು, ಸಿಲ್ಕ್ ಬೋರ್ಡ್ ಜಂಕ್ಷನ್ ಸೇರಿದಂತೆ ಪ್ರಮುಖ ಪ್ರದೇಶಗಳಲ್ಲಿನ ಸಂಚಾರ ದಟ್ಟಣೆಯನ್ನು ಕಡಿಮೆ ಮಾಡುತ್ತದೆ. ಬೆಂಗಳೂರಿನ ಸಂಚಾರ ಸಮಸ್ಯೆಗಳಿಗೆ ಸಾರ್ವಜನಿಕ ಸಾರಿಗೆ ಮಾತ್ರ ದೀರ್ಘಕಾಲೀನ ಪರಿಹಾರವಾಗಿದ್ದು, ಈ ಮಾರ್ಗವನ್ನು ಯಾವುದೇ ವಿಳಂಬವಿಲ್ಲದೆ ಸಾರ್ವಜನಿಕರಿಗೆ ಮುಕ್ತವಾಗಿಸಲು ಮೋದಿಯವರ ವೈಯಕ್ತಿಕ ಪ್ರಯತ್ನವೇ ಸಕಾಲಿಕ ಉದ್ಘಾಟನೆಗೆ ಕಾರಣ ಎಂದು ತೇಜಸ್ವಿ ಸೂರ್ಯ ಹೇಳಿದ್ದಾರೆ.

ಮೆಟ್ರೋ ಹಳದಿ ಮಾರ್ಗ ಸಂಚಾರಕ್ಕೆ ಆ.15ರ ಗಡುವು ನೀಡಲಾಗಿತ್ತು. ಆದರೆ, ಆ.10 ರಂದು ಉದ್ಘಾಟನೆ ನಡೆದರೆ, ಈ ಯೋಜನೆಯು ಗಡುವಿಗಿಂತಲೂ ಮೊದಲೇ ಪೂರ್ಣಗೊಂಡಿದೆ.

ಕೇಂದ್ರ ನಗರ ವ್ಯವಹಾರಗಳ ಸಚಿವ ಮನೋಹರ್ ಲಾಲ್ ಖಟ್ಟರ್ 'ಎಕ್ಸ್'ನಲ್ಲಿ, 'ಭಾರತದ ಗೌರವಾನ್ವಿತ ಪ್ರಧಾನ ಮಂತ್ರಿಗಳು ಬೆಂಗಳೂರು ಮೆಟ್ರೋದ ಆರ್‌ವಿ ರಸ್ತೆಯಿಂದ ಬೊಮ್ಮಸಂದ್ರವರೆಗಿನ 19.15 ಕಿ.ಮೀ ಹಳದಿ ಮಾರ್ಗವನ್ನು ಉದ್ಘಾಟಿಸಲು ಒಪ್ಪಿಕೊಂಡಿದ್ದಾರೆ. ಈ ಮಾರ್ಗದಲ್ಲಿ 16 ನಿಲ್ದಾಣಗಳಿದ್ದು, 5,056.99 ಕೋಟಿ ರೂ ವೆಚ್ಚದಲ್ಲಿ ನಿರ್ಮಾಣಗೊಂಡಿದೆ ಇದರೊಂದಿಗೆ ಹಂತ–3ರ 44.65 ಕಿ.ಮೀ. ಉದ್ದದ ಹೊಸ ಮಾರ್ಗಕ್ಕೆ ಶಂಕುಸ್ಥಾಪನೆ ನೆರವೇರಿಸಲಿದ್ದಾರೆ ಎಂದು ಘೋಷಿಸಲು ನನಗೆ ಸಂತೋಷವಾಗಿದೆ ಎಂದು ಹೇಳಿದರು.

ರಾಜ್ಯಮಟ್ಟದ ಕರಾಟೆ ಪಂದ್ಯಾವಳಿಗೆ ಚಾಲನೆ



ಮಹಾಬೋಧಿ ಶಾಲೆಯಲ್ಲಿ ನಡೆದ ರಾಜ್ಯಮಟ್ಟದ ಕರಾಟೆ ಚಾಂಪಿಯನ್‌ಶಿಪ್ ಪಂದ್ಯಾವಳಿಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಮಾತನಾಡಿದರು.

ಮೈಸೂರು, ಆ.3(ಎಂಕೆ)– ಕರಾಟೆ ಸಾಹಸ ಕ್ರೀಡೆಯಾಗಿದ್ದು, ಸ್ವಯಂ ರಕ್ಷಣೆಗೆ ಸಹಕಾರಿಯಾಗಿದೆ ಹಾಗೆಯೇ ಮಕ್ಕಳಲ್ಲಿ ಶಿಸ್ತು, ಆತ್ಮವಿಶ್ವಾಸ, ಮಾನಸಿಕ ಶಕ್ತಿಯನ್ನು ಬೆಳೆಸುತ್ತದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಹೇಳಿದರು.

ಮೈಸೂರಿನ ಸರಸ್ವತಿಪುರಂನಲ್ಲಿರುವ ಮಹಾಬೋಧಿ ಶಾಲೆಯಲ್ಲಿ ನಡೆದ ರಾಜ್ಯಮಟ್ಟದ ಕರಾಟೆ ಚಾಂಪಿಯನ್‌ಶಿಪ್ ಪಂದ್ಯಾವಳಿಯ ವೇದಿಕೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಬುದ್ಧ ಮತ್ತು ಧಮ್ಮ, ಮಾನವೀಯತೆ, ಕರುಣೆ, ಸಹನೆ ಗುಣವನ್ನು ಮಕ್ಕಳಲ್ಲಿ ಬೆಳೆಸಲು ಈ ಸಂಸ್ಥೆ ಕೆಲಸ ಮಾಡುತ್ತಿದೆ ಎಂದು ಶ್ಲಾಘಿಸಿದರಲ್ಲದೆ ಕರಾಟೆ ಪಂದ್ಯಾವಳಿಯಲ್ಲಿ ವಿಜೇತ ಪಟುಗಳಿಗೆ ಪದಕ ಹಾಗೂ ಸರ್ಟಿಫಿಕೆಟ್ ನೀಡಿ ಅಭಿನಂದಿಸಿದರು.

ಸಾರ್ವಜನಿಕ ಶಿಕ್ಷಣ ಇಲಾಖೆ ಉಪ ನಿರ್ದೇಶಕ ಎಸ್.ಟಿ.ಜವರೇಗೌಡ ಮಾತನಾಡಿ, ಕರಾಟೆಯು ಸ್ವಯಂ ರಕ್ಷಣೆ ಜೊತೆಗೆ ಮಾನಸಿಕ ಮತ್ತು ದೈಹಿಕ ಬೆಳವಣಿಗೆ ಹೆಚ್ಚಿಸುತ್ತದೆ. ವಿದ್ಯಾರ್ಥಿಗಳಲ್ಲಿ ಉತ್ತಮ ವ್ಯಕ್ತಿತ್ವವನ್ನು ರೂಪಿಸುತ್ತದೆ ಎಂದು ಹೇಳಿದರು.

ಕ್ಷೇತ್ರ ಶಿಕ್ಷಣಾಧಿಕಾರಿ ಬಸವರಾಜು ಮಾತನಾಡಿ, ಕರಾಟೆಯು ಮಕ್ಕಳನ್ನು ಪಠ್ಯದ ಜೊತೆಗೆ ಪಠ್ಯೇತರ ಚಟುವಟಿಕೆಯಲ್ಲಿ ಪಾಲ್ಗೊಳ್ಳುವಂತೆ ಮಾಡುತ್ತದೆ. ಕರಾಟೆಯಿಂದ ಏಕಾಗ್ರತೆ, ದೃಢಸಂಕಲ್ಪ, ಸ್ಮರಣ ಶಕ್ತಿ ಹೆಚ್ಚಾಗಲಿದ್ದು, ಕರಾಟೆ ಪಾಠದ ಒಂದು ಭಾಗವಾಗಬೇಕೆಂದು ತಿಳಿಸಿದರು.

ಇದಕ್ಕೂ ಮುನ್ನ ದೀಪ ಬೆಳಗಿಸುವ ಮೂಲಕ ಮಹಾಬೋಧಿ ಶಾಲಾ ಮೈತ್ರಿ ಮಂಡಲದ ನಿರ್ದೇಶಕ ಸೋಭಾನ ಬಂತೇಜಿ ಹಾಗೂ ಪಣ್ಯಬೋದಿ ಪಂದ್ಯಾವಳಿಗೆ ಚಾಲನೆ ನೀಡಿದರು. ಕರ್ನಾಟಕ ರಾಜ್ಯ ಅಲ್ಪಸಂಖ್ಯಾತ ಆಯೋಗದ ಸದಸ್ಯ ಹಾಗೂ ಮಹಾಬೋಧಿ ಮೈತ್ರಿ ಮಂಡಲ ಸಿಇಒ ವಾಂಗ್ಲಾಸ್ ಜ್ಯೋತಿ, ಜೆಕೆಎಸ್ ಶೋತೋಜುಕು ಪ್ರತಿನಿಧಿ ಸುದೀಪ್ ಟಿ ಸಿರಿಥಿಂಕ್, ಅಧ್ಯಕ್ಷ ಸಿ.ಕೆ.ವಿಜಯನ್, ಮೈಸೂರು ಕರಾಟೆ ಅಸೋಸಿಯೇಷನ್ ಅಧ್ಯಕ್ಷ ಎಸ್.ಸುನಿಲ್ ಕುಮಾರ್, ಕಾರ್ಯದರ್ಶಿ ಭಾರತಿ ಆನಂದ್, ಶಾಲೆಯ ಶಿಕ್ಷಣ ಸಂಯೋಜಕ ವೆಂಕಟೇಶ್ವರಲು, ಪ್ರಾಂಶುಪಾಲರಾದ ಅನ್ನಪೂರ್ಣ, ಉಪ ಪ್ರಾಂಶುಪಾಲ ದ್ವಾರಕೀಶ್, ಕರಾಟೆ ತರಬೇತಿದಾರ ಆಕರ್ಷ್ ಅರಸ್, ಶಿಕ್ಷಕಿಯರಾದ ಮಾಲಿನಿ, ಪ್ರಿಯಾಂಕ ಮತ್ತಿತರರಿದ್ದರು.

ನಕ್ಕರೆ ಅದೇ ಸ್ವರ್ಗ

ಗುಂಡ : ಒಬ್ಬ ಲಾರಿ ಡ್ರೈವರ್ ಒನ್‌ವೇನಲ್ಲಿ ಹೋದ್ರು ಟ್ರಾಫಿಕ್ ಪೊಲೀಸ್ ಹಿಡಿಯೋಲ್ಲ ಯಾಕೆ?

ತಿಮ್ಮ : ಲಂಚ ಕೊಟ್ಟಿರಬೇಕು, ಇಲ್ಲ ಟ್ರಾಫಿಕ್ ಪೊಲೀಸ್‌ಗೆ ಪರಿಚಯ ಇರಬೇಕು!

ಗುಂಡ : ಅಲ್ಲ, ಲಾರಿ ಡ್ರೈವರ್ ನಡ್ಕೊಂಡು ಹೋಗ್ತಾ ಇದ್ದಿದ್ದು!

ಮೈಸೂರು ಮಿತ್ರ

ಸೋಮವಾರ, 4 ಆಗಸ್ಟ್ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತ ವಾಹಿನಿ.........

ನಗು ಮತ್ತು ಮೌನ ನಮ್ಮ ಎರಡು ದೊಡ್ಡ ಆಯುಧಗಳು.
ನಗು ಯಾವುದೇ ಸಮಸ್ಯೆಯನ್ನು ಪರಿಹರಿಸುತ್ತದೆ.
ಮೌನ ಯಾವುದೇ ಸಮಸ್ಯೆ ಉದ್ಭವಿಸದಂತೆ ತಡೆಯುತ್ತದೆ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { 'ಅನ್ನ ಹಾಕಿ ಸಾಕು ಅನ್ನಿಸಬಹುದು, ದುಡ್ಡು ಕೊಟ್ಟು ಸಾಕು ಅನ್ನಿಸೋಕಾಗಲ್ಲ'

ನಿಮ್ಮ ಪತ್ರಗಳು

ಅತ್ಯಾಚಾರಿಗಳಿಗೆ ಎಚ್ಚರಿಕೆಯ ಗಂಟೆ

ಮಾನ್ಯರೆ,

ರಾಜ್ಯಾದ್ಯಂತ ತೀವ್ರ ಕುತೂಹಲ ಕೆರಳಿಸಿದ್ದ ಹಾಸನದ ಮಾಜಿ ಸಂಸದ ಪ್ರಜ್ವಲ್ ರೇವಣ್ಣ, ಮನೆಗೆಲಸದ ಮಹಿಳೆಯೋರ್ವಳ ಮೇಲೆ ನಡೆಸಿದ ಅತ್ಯಾಚಾರ ಪ್ರಕರಣಕ್ಕೆ ಸಂಬಂಧಿಸಿದಂತೆ, ಬೆಂಗಳೂರಿನ ಜನಪ್ರತಿನಿಧಿಗಳ ನ್ಯಾಯಾಲಯ ಪ್ರಕಟಿಸಿರುವ ತೀರ್ಪು ಮತ್ತು ಶಿಕ್ಷೆಯ ಪ್ರಮಾಣ ಚಾರಿತ್ರಿಕವಾಗಿದೆ. ಬಹುಶಃ ಅತ್ಯಾಚಾರ ಅಪರಾಧಕ್ಕೆ ರಾಜ್ಯದಲ್ಲಿ ಗರಿಷ್ಠ ಶಿಕ್ಷೆ ವಿಧಿಸಿರುವುದು ವಿರಳವೆನ್ನಬಹುದು. ನ್ಯಾಯಾಧೀಶರಾದ ಸಂತೋಷ ಗಜಾನನ ಭಟ್ ನೀಡಿರುವ ಈ ಮಹತ್ವದ ತೀರ್ಪು ರಾಜ್ಯಾದ್ಯಂತ ಮೆಚ್ಚುಗೆ ಪಡೆದಿದೆ. ಪ್ರಜ್ವಲ್ ರೇವಣ್ಣನವರಿಗೆ ಜೀವಾವಧಿ ಶಿಕ್ಷೆಯ ಜೊತೆಗೆ ರೂ 11.60 ಲಕ್ಷ ದಂಡ ವಿಧಿಸಿ, ಅದರ ಪೈಕಿ ಸಂತ್ರಸ್ತೆಗೆ ರೂ.11.25 ಲಕ್ಷ ನೀಡಬೇಕೆಂದು ಹೇಳಿರುವುದು ಸಹ ತೀರ್ಪಿನ ಉತ್ತಮ ಅಂಶವಾಗಿದೆ.

ಪ್ರಜ್ವಲ್ ರೇವಣ್ಣ ವಿರುದ್ಧ ಭಾರತ ದಂಡ ಸಂಹಿತೆ ಸೇರಿದಂತೆ ವಿವಿಧ ಕಾಯ್ದೆಗಳ 8 ಸೆಕ್ಷನ್‌ಗಳ ಅಡಿಯಲ್ಲಿ ಶಿಕ್ಷೆ ವಿಧಿಸಲಾಗಿದೆ. ಪ್ರತ್ಯೇಕ ಸೆಕ್ಷನ್‌ಗಳ ಅಡಿಯಲ್ಲಿ ಜೈಲು ಶಿಕ್ಷೆಯನ್ನು ವಿಧಿಸಲಾಗಿದ್ದರೂ ಅವುಗಳನ್ನೆಲ್ಲಾ ಒಂದೇ ಬಾರಿಗೆ ಅನುಭವಿಸಬೇಕಾಗಿರುವುದರಿಂದ ಗರಿಷ್ಠ ಶಿಕ್ಷೆಯನ್ನು ವಿಧಿಸಲಾಗಿದೆ ಯೆಂದು ನ್ಯಾಯಾಧೀಶರು ತಮ್ಮ ತೀರ್ಪಿನಲ್ಲಿ ಉಲ್ಲೇಖಿಸಿದ್ದಾರೆ.

ತೀರ್ಪಿನ ವಿರುದ್ಧ ರಾಜ್ಯ ಹೈಕೋರ್ಟ್ ಮತ್ತು ಸರ್ವೋಚ್ಚ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸುವ ಅವಕಾಶ ಅಪರಾಧಿ ಪ್ರಜ್ವಲ್ ರೇವಣ್ಣ ಅವರಿಗಿದೆ. ಈ ಶಿಕ್ಷೆಯ ಅನ್ವಯ ಸನ್ನಡತೆ ಆಧಾರ ಹಾಗೂ ರಾಜ್ಯ ಸರ್ಕಾರಕ್ಕೆ ಇರುವ ಯಾವುದೇ ವಿಶೇಷಾಧಿಕಾರ ಪ್ರಯೋಗಿಸಿ, ಅವರನ್ನು ಜೈಲಿನಿಂದ ಬಿಡುಗಡೆಗೊಳಿಸಲು ಅವಕಾಶ ಇಲ್ಲದ ಕಾರಣ ಅವರು ಜೀವನಪರ್ಯಂತ ಜೈಲುವಾಸ ಅನುಭವಿಸಲೇಬೇಕಾಗಿದೆ.

ಸರ್ಕಾರ ಮತ್ತು ಸಾರ್ವಜನಿಕ ವಲಯದಲ್ಲಿರುವಂತಹ ಪ್ರಭಾವಿ ವ್ಯಕ್ತಿಗಳು ನಡೆಸುವ ಅತ್ಯಾಚಾರ, ಕೊಲೆ ಮುಂತಾದ ಹೀನಕೃತ್ಯಗಳಲ್ಲಿ ತೊಡಗುವಂತಹವರಿಗೆ ಈ ತೀರ್ಪು ಎಚ್ಚರಿಕೆಯ ಗಂಟೆಯಾಗಿದೆ. ಅಪರಾಧಿ ಎಷ್ಟೇ ಪ್ರಭಾವಶಾಲಿಯಾದರೂ ಸದೃಢ ನ್ಯಾಯಾಂಗ ಅದನ್ನು ಲೆಕ್ಕಕ್ಕೆ ತೆಗೆದುಕೊಳ್ಳುವುದಿಲ್ಲವೆಂದು ಈ ತೀರ್ಪು ಸಾರಿ ಹೇಳಿದೆ. ಇಂತಹ ಮಹತ್ವಪೂರ್ಣ ತೀರ್ಪನ್ನು ನೀಡಿದ ಗೌರವಾನ್ವಿತ ನ್ಯಾಯಮೂರ್ತಿ ಸಂತೋಷ ಗಜಾನನ ಭಟ್‌ರವರಿಗೆ ಅಭಿನಂದನೆಗಳು.

– ಕೆ.ವಿ.ವಾಸು, ವಕೀಲರು–ನೋಟರಿ, ಮೈಸೂರು.

ಟ್ರಂಪ್ ಅವರು ಒಬ್ಬ ಕುರುಡ, ಅಜ್ಞಾನಿ

ಮಾನ್ಯರೆ,

ಭಾರತದ ಆರ್ಥಿಕತೆ ಸತ್ತಿದೆ ಎಂದು ಹೇಳಿರುವ ಟ್ರಂಪ್ ಅವರ ನಡೆಗೆ ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ, ಟ್ರಂಪ್ ಅವರು ಕುರುಡರಾಗಿರಬೇಕು. ಇಲ್ಲವೇ ಅಜ್ಞಾನಿಗಳಾಗಿರಬೇಕು ಎಂದು ಪತ್ರಿಕಾ ಹೇಳಿಕೆ ಬಿಡುಗಡೆ ಮಾಡಿರುವುದು ತುಂಬಾ ಶ್ಲಾಘನೀಯ. ಭಾರತದಲ್ಲಿ ಒಬ್ಬ ಸಣ್ಣ ವ್ಯಾಪಾರಿ ಹಾಗೂ ಬಡರೈತ ಕೂಡ ತನ್ನ ವ್ಯವಹಾರವನ್ನು ಘನತೆ, ಸಮಗ್ರತೆ ಮತ್ತು ಮಾನವೀಯತೆಯಿಂದ ನಡೆಸುತ್ತಿದ್ದಾನೆ ಎಂದು ಹೇಳಿರುವುದನ್ನು ಪ್ರತಿಯೊಬ್ಬರೂ ಮೆಚ್ಚುವಂತದ್ದು. ಟ್ರಂಪ್ ಕುರಿತು ಆಧುನಿಕ ಇತಿಹಾಸದಲ್ಲಿ ಇಷ್ಟೊಂದು ಅಸ್ಥಿರ, ಅನಾಗರಿಕ ಮತ್ತು ಬೇಜವಾಬ್ದಾರಿಯುತ ರಾಷ್ಟ್ರ ಮುಖ್ಯಸ್ಥರನ್ನು ನಾನು ಕಂಡಿಲ್ಲ. ಟ್ರಂಪ್ ಭಾರತದೊಂದಿಗೆ ಮಾತ್ರವಲ್ಲ, ಜಗತ್ತಿನ ಪ್ರತೀ ದೇಶದೊಂದಿಗೆ ಕೆಟ್ಟದಾಗಿ ವರ್ತಿಸಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ಅವರ ನೇತೃತ್ವದಲ್ಲಿ ಭಾರತ ನಮ್ಮ ರಾಷ್ಟ್ರೀಯ ಹಿತಾಸಕ್ತಿ ರಾಜಿ ಮಾಡಿಕೊಂಡಿಲ್ಲ ಎಂಬ ಬಗ್ಗೆ ನನಗೆ ಅತೀವ ಸಂತೋಷ ಮತ್ತು ಹೆಮ್ಮೆ ಇದೆ ಎಂದು ಹೇಳಿರುವ ದೇವೇಗೌಡರ ಹೇಳಿಕೆ ವಾಸ್ತವ ಸಂಗತಿ **–ಬೆಸಗರಹಳ್ಳಿ ರವಿಪ್ರಸಾದ್, ಮೈಸೂರು.**

ಹಳೆ ಕೆಸರೆಯ ಸಮಸ್ಯೆ ನಿವಾರಿಸಿದ ಸಿದ್ದಲಿಂಗಪುರ ಗ್ರಾಪಂಗೆ ಅಭಿನಂದನೆಗಳು

ಮಾನ್ಯರೆ,

ಮೈಸೂರು ಹಳೇ ಕೆಸರೆ ಸಿದ್ದಲಿಂಗಪುರ ಗ್ರಾಪಂ ವ್ಯಾಪ್ತಿಗೆ ಸೇರಿದ್ದು, ಬಿಎಂಆರ್ ಬಡಾವಣೆ ಸೇರಿದಂತೆ ಸುತ್ತ–ಮುತ್ತಲ ರಸ್ತೆಬದಿ ಹಾಗೂ ಬಡಾವಣೆಯಾದ್ಯಂತ ಭಾರಿ ಪ್ರಮಾಣದಲ್ಲಿ ಗಿಡ–ಗಂಟಿಗಳು, ಮುಳ್ಳಿನ ಪೊದೆ ಬೆಳೆದಿದ್ದು ಸಾರ್ವಜನಿಕರು ಓಡಾಡಲು ಕಷ್ಟಪಡಬೇಕಾಗಿತ್ತು. ಜೊತೆಗೆ ಬೀದಿದೀಪಗಳು ಇರಲಿಲ್ಲ. ನೀರಿನ ಸೌಲಭ್ಯ ಕೂಡ ಇರಲಿಲ್ಲ. ಇದರಿಂದ ಸಾರ್ವಜನಿಕರು ಮೂಲಸೌಕರ್ಯಗಳಿಲ್ಲದೆ ಪರಿತಪಿಸುವ ಪರಿಸ್ಥಿತಿ ನಿರ್ಮಾಣವಾಗಿತ್ತು. ಈ ಬಗ್ಗೆ ಸಿದ್ದಲಿಂಗಪುರ ಗ್ರಾಪಂಗೆ ಮನವಿ ಸಲ್ಲಿಸಿ ಸಮಸ್ಯೆಯನ್ನು ನಿವಾರಿಸುವಂತೆ ಮನವಿ ಮಾಡಿದೆವು. ಮನವಿಗೆ ಸ್ಪಂದಿಸಿದ ಗ್ರಾಮ ಪಂಚಾಯಿತಿ ಅಧ್ಯಕ್ಷರು ತಾವೇ ನಿಂತು ಇದನ್ನೆಲ್ಲ ಸ್ವಚ್ಛ ಮಾಡಿಸಿರುತ್ತಾರೆ. ಜೊತೆಗೆ ನೀರಿನ ಸೌಲಭ್ಯ ಮತ್ತು ಲೈಟಿನ ವ್ಯವಸ್ಥೆ ಕೂಡಾ ಮಾಡಿದ್ದಾರೆ. ಸಮಸ್ಯೆ ಪರಿಹರಿಸಲು ಸಹಕರಿಸಿದ ಪಂಚಾಯಿತಿ ಕಾರ್ಮಿಕರಿಗೆ, ಪಂಚಾಯಿತಿ ಎಲ್ಲಾ ಸದಸ್ಯರಿಗೆ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಿಗೆ ಧನ್ಯವಾದಗಳು. ಹಾಗೆಯೇ ಬಡಾವಣೆಯ ಡಾಂಬರು ರಸ್ತೆ ಮಳೆಯಿಂದ ಕಿತ್ತು ಹೋಗಿದ್ದು, ಕಾಮಗಾರಿಗಳು ಆಗಬೇಕಾಗಿವೆ. ದಯಮಾಡಿ ಪರಿಶೀಲಿಸಬೇಕೆಂದು ವಿನಂತಿಸುತ್ತೇನೆ. **–ಕನ್ನಡ ಸುರೇಶ್, ಹಳೆ ಕೆಸರೆ, ಮೈಸೂರು.**

ವಚನ: ಮಂತ್ರ ಘೋಷ

ಭದ್ರ ಕನ್ನಡ; 'ಶಿವ ಪ್ರಕಾಶ' ಪರಿವೇಷ
ಸುತ್ತಿ ಮುತ್ತಿದೆ? ಕ್ಷುದ್ರವೇನು? ವಿಶ್ವ ವಿಶೇಷ
ವಚನ ವಾಙ್ಮಯ: ಬರಿಯ ಮಾತಲ್ಲ; 'ಅಹುದಹುದು'
ಎಂದು ಮೆಚ್ಚಿತು ಲಿಂಗ! ವರ್ತಮಾನವೆ....?
ಕಾಲತ್ರಯದ ತವಕ ತಲ್ಲಣವ ತಳಮಳವ
ಇಲ್ಲವೆನೆ ತಣ್ಣಗಾಗಿಸುವಂಥ ತಾಕತ್ತು!
ಇಂದಿಗೂ ಎಂದಿಗೂ ಪ್ರಸ್ತುತವೆ, ಪಥ್ಯವೇ?!
ಬರಿಯ ಭರವಸೆಯಲ್ಲ, ಭೇಷಜದ ಪರಿಶೆ ಇದುವೆ;
ದಿವ್ಯ 'ಶೂನ್ಯ ಚಿಕಿತ್ಸೆ ಆದಿ ವ್ಯಾಧಿ ಚಯಕ್ಕೆ!
ಸ್ವಾತಂತ್ರ್ಯ ಸಮತೆ ಸೋದರತೆ ಮುಪ್ಪುರಿಗೊಂಡ
ಮುಪ್ಪು ಸಾವುಗಳಿರದ ಪ್ರೋಜ್ವಲ ಪ್ರಜಾಸತ್ತೆ!
ಇಲ್ಲ ಮದ್ದುಂಟು; ದಿವ್ಯೌಷಧ ಪರಂಪರೆಯ,
ಪುಣ್ಯ **ಕಾಯಕ** ರೂಪಿ; ಧನ್ವಂತರೀ ಧನ್ಯ!
ಸಪ್ತಶೀಲದ ಇಂದ್ರಧನು ಎಸವ ಬಾನಿನಲಿ;
ಶ್ರೀಕಂಠ ಕೃಪೆಯಿಂದ ಸರ್ವೋದಯ, ಅಂತೆ
ಅಂತ್ಯೋದಯದ ಸಿದ್ಧಿ. ಎಲ್ಲಿ ತಲ್ಲಣ? ಕೇಳಿ–
ಬರುತಿದೋ, ಅದೋ, 'ಅಭೀ': ಘೋಷ: ಮಂತ್ರಾಳಿ!!

–ಸಿಪಿಕೆ, ಹಿರಿಯ ಸಾಹಿತಿ, ಮೈಸೂರು.



ಜಿ. ಎಲ್. ತ್ರಿಪುರಾಂತಕ
ಮೊ: 96866–77284

ಅರಿವು

ಸಾವು ಸಹ ಸಂಡೆಗಾಗಿಯೇ ಕಾಯಬೇಕೆ...?

ಈ ಭೂಮಿಯ ಮೇಲೆ ಎಲ್ಲಾ ಜೀವಿಗಳಿಗೂ ಹುಟ್ಟು–ಸಾವು ಸಹಜವಾದ ಪ್ರಕ್ರಿಯೆ. ಹುಟ್ಟು ಖುಷಿ ಕೊಟ್ಟರೆ, ಸಾವು ದುಃಖ ತರುತ್ತದೆ. ಹುಟ್ಟಿದಾಕ್ಷಣ ಪಯಣ ಸಾವಿನ ಕಡೆಗೆ ಎಂಬುದು ಸತ್ಯ. ಅಂತಿಮವಾಗಿ ಈ ಭೂಮಿಯನ್ನು ತೊರೆದು ಹೋಗಲೇಬೇಕು ಎಂಬುದು ಅಂತಿಮ ಸತ್ಯ. ಹಾಗೆಯೆ ಹುಟ್ಟು ಹಾಗೂ ಸಾವಿನ ಸಮಯ ನಿಶ್ಚಯ ಮನುಷ್ಯನ ಕೈಯಲ್ಲಿ ಇಲ್ಲ ಎಂದು ಹೇಳಲಾಗುತ್ತಿತ್ತು. ಹಿಂದೆ ಹುಟ್ಟು ಹಾಗೂ ಸಾವುಗಳು ಮನೆಯಲ್ಲಿ ಸಂಭವಿಸುತ್ತಿದ್ದವು. ಹಾಗಾಗಿ ಸಮಯ ನಿಗದಿ ಮಾಡಲು ಸಾಧ್ಯವಿರಲಿಲ್ಲ. ಆದರೆ ಇಂದಿನ ಆಧುನಿಕ ಪ್ರಪಂಚದಲ್ಲಿ ಬಹುಪಾಲು ಹುಟ್ಟು ಹಾಗು ಸಾವುಗಳು ಆಸ್ಪತ್ರೆಯಲ್ಲಿಯೇ ಆಗುತ್ತಿವೆ. ಹಾಗಾಗಿ ಮನುಷ್ಯನೆ ಇವುಗಳಿಗೆ ಸಮಯ ನಿಗದಿ ಮಾಡಬಹುದು. ಮನೆಯವರ ಆಣತಿಯಂತೆ ಗರ್ಭಿಣಿಗೆ ವೈದ್ಯರು ಸಿಜೇರಿಯನ್ ಮಾಡಿದರೆ ಅದೇ ಮಗು ಹುಟ್ಟಿದ ಸಮಯ, ರೋಗಿಗೆ ವೈದ್ಯರು ವೆಂಟಿಲೇಟರ್ ತೆಗೆದರೆ ಅದೇ ಸಾವಿನ ಸಮಯ (ಎಲ್ಲಾ ರೋಗಿಗಳಿಗೂ ಅನ್ವಯಿಸದು).



ಹುಟ್ಟು ಹಾಗೂ ಸಾವು ಸಹಜ ಪ್ರಕ್ರಿಯೆಗಳಾದರೂ ಅವುಗಳನ್ನು ಭಿನ್ನ ರೀತಿಯಲ್ಲಿ ಆಚರಿಸಲಾಗುತ್ತದೆ. ಈ ಸಮಯದಲ್ಲಿ ಸಂಬಂಧಿಕರು ಹಾಗೂ ಸ್ನೇಹಿತರು ಸೇರಿ ಹುಟ್ಟಿನ ಸಂಭ್ರಮ ಹಂಚಿಕೊಳ್ಳುವಂತೆ ಸಾವಿನ ದುಃಖವನ್ನು ಹಂಚಿಕೊಳ್ಳುವುದು ಸಹಜ. ಮನುಷ್ಯನ ಕಷ್ಟಸುಖಗಳಲ್ಲಿ ಬಂಧುಬಾಂಧವರು ಭಾಗಿಯಾದಾಗ ಮಾತ್ರ ಆ ಮನೆಯವರಿಗೆ ಒಂದರಲ್ಲಿ ಸಂತೋಷ ಹೆಚ್ಚಾದರೆ, ಮತ್ತೊಂದರಲ್ಲಿ ದುಃಖ ಕಡಿಮೆಯಾಗುತ್ತದೆ. ಇಂತಹ ಸಂದರ್ಭದಲ್ಲಿ ಬಳಗದ ಮಂದಿ ಸಮಯ ಹೊಂದಿಸಿಕೊಂಡು ಬಂಧುಗಳ ಹತ್ತಿರದಲ್ಲಿದ್ದು ಅವರಿಗೆ ಒತ್ತಾಸೆಯಾಗಿ ನಿಲ್ಲುವುದು ಸಾಮಾನ್ಯ.

ಇಂದಿನ ಸ್ಪರ್ಧಾಯುಗದಲ್ಲಿ ಜನರಿಗೆ ಯಾವುದಕ್ಕೂ ಸಮಯವಿಲ್ಲ, ಹುಟ್ಟು ಹಾಗೂ ಸಾವಿಗೂ ಕೂಡ. ಹಿಂದೆ ಎಲ್ಲರ ಬಳಿ ವಾಚ್ ಇರಲಿಲ್ಲ. ಆದರೆ ಎಲ್ಲರ ಬಳಿ ಟೈಮ್ ಇರುತ್ತಿತ್ತು. ಇಂದು ಎಲ್ಲರ ಬಳಿ ವಾಚ್ ಇದೆ, ಆದರೆ ಯಾರ ಬಳಿಯೂ ಸಮಯವಿಲ್ಲ. ಶುಭ ಕಾರ್ಯಕ್ಕೆ ಆಹ್ವಾನವಿದ್ದರೆ ಅಲ್ಲಿಗೆ ಮುಖ ತೋರಿಸಲು ಹೋಗುತ್ತಾರೆ. ಹತ್ತಿರದವರು ಯಾರಾದರೂ ನಿಧನ ಹೊಂದಿದರೆ ಮುಖ ನೋಡಲು ಹೋಗುತ್ತಾರೆ. ಭಾಗಿಯಾಗಬೇಕು ಎನ್ನುವುದಕ್ಕಿಂತ ಹಾಜರಿ ಹಾಕಬೇಕು ಎಂಬ ತವಕವಿರುತ್ತದೆ. ಸಂತೋಷವನ್ನೇ ಆಗಲಿ, ದುಃಖವನ್ನೇ ಆಗಲಿ ಹಂಚಿಕೊಳ್ಳುವ ಸಮಯವಾಗಲಿ, ಸಂಯಮವಾಗಲಿ ಇರುವುದಿಲ್ಲ. ನಮ್ಮ ದೇಶದಲ್ಲೂ ಅನೇಕು ಪಾಶ್ಚಾತ್ಯ ಸಂಸ್ಕೃತಿಯಾದ ವೀಕೆಂಡ್ ಎಮೋಶನ್ಸ್‌ಗೆ ತುತ್ತಾಗಿದ್ದಾರೆ. ಕೆಲವು ಅಗತ್ಯಗಳನ್ನು ವಾರಾಂತ್ಯದಲ್ಲಿ ಪೂರೈಸಿಕೊಳ್ಳುವುದು, ಹಾಗೆಯೆ ಭಾವನೆಗಳನ್ನು ಸಹ ವಾರಾಂತ್ಯಕ್ಕೆ ಮುಂದೂಡಿಕೊಳ್ಳುವುದು ಸಾಮಾನ್ಯವಾಗುತ್ತಿದೆ.

ಉದ್ಯೋಗಿಗಳಿಗೆ ಸಾವಿನ ಸುದ್ದಿ ಬಂದಾಗ ಒಂದು ರೀತಿಯ ಆತಂಕ ಉಂಟಾಗುತ್ತದೆ. ಹತ್ತಿರದವರನ್ನು ಕಳೆದುಕೊಂಡೆವೆಲ್ಲಾ ಎನ್ನುವಷ್ಟೇ ಕಚೇರಿಗೆ ರಜೆ ಹಾಕಬೇಕಲ್ಲ ಎಂಬ ದುಮ್ಮಾನವಿರುತ್ತದೆ. ವಾರಾಂತ್ಯದ ಬದಲು ವಾರದ ದಿನಗಳಲ್ಲಿ ಸಾವಿನ ಸುದ್ದಿ ಬಂದರೆ, ಅಯ್ಯೋ, ಸಂಡೆಯಾದರೂ ಸಾಯಬಾರದಿತ್ತೇ? ಎಂದುಕೊಳ್ಳುವವರು ಕಡಿಮೆ ಏನಿಲ್ಲ. ಅಷ್ಟಾಗಿಯೂ ಸಂಡೆಯೇ ತೀರಿಕೊಂಡರೆ ಅಂತಿಮ ದರ್ಶನಕ್ಕೆ ಹೋಗಿ, ಮುಖ ನೋಡಿ ಮರಳುವವರು ಅನೇಕ. ಸಾವಿನ ಮನೆಯಲ್ಲಿ ದುಃಖದಲ್ಲಿರುವವರಿಗೆ ನಾಲ್ಕು ಸಾಂತ್ವನದ ಮಾತುಗಳನ್ನಾಡುವ ವ್ಯವದಾನವಿರುವುದಿಲ್ಲ. ತೀರ ಹತ್ತಿರದವರಾಗಿದ್ದು, ಶವ ಸಂಸ್ಕಾರದವರೆವಿಗೆ ಇರಬೇಕಾದ ಸಂದರ್ಭ ಒದಗಿ ಬಂದಲ್ಲಿ, ಬೇಗ ಸಂಸ್ಕಾರ ಪ್ರಕ್ರಿಯೆ ಪೂರೈಸುವಂತೆ ಒತ್ತಾಯಿಸುವವರು ಸಹ ಇದ್ದಾರೆ. ಎಲ್ಲವೂ ಯಾಂತ್ರಿಕವಾಗಿರುವಂತೆ ಶುಭಾಶಯಗಳು ಹಾಗೂ ಸಾಂತ್ವನಗಳು ಸಹ ಯಾಂತ್ರಿಕವಾಗುತ್ತಿರುವುದು ವಿಪರ್ಯಾಸ. ಕೆಲವರಿಗೆ ಸಂಡೆ ಸಾವಿನ ಸುದ್ದಿ ಬಂದರೂ ಸಹ ಬೇಸರವಾಗುತ್ತದೆ. ಅಂದು ಪೂರ್ವ ನಿರ್ಧಾರಿತ ಕಾರ್ಯಕ್ರಮಗಳಿರುತ್ತವೆ. ಅವುಗಳೆಲ್ಲಾ ಏರುಪೇರಾಗುತ್ತವೆ ಎಂಬ ಅಸಹನೀಯ ಭಾವ ಕಾಡುತ್ತದೆ. ಇವರಿಗೆ ಅಪವಾದ ಎನ್ನುವಂತೆ ಕೆಲವರು ಸಾವಿನ ಮನೆಯಲ್ಲಿ ಸಕಾಲದಲ್ಲಿ ನೆರವಿಗೆ ಬಂದು, ಅಂತಿಮ ಕಾರ್ಯಗಳು ಮುಗಿಯುವವರೆವಿಗೆ ಇದ್ದು ಅವರಿಗೆ ಒಂದು ಸಮಾಧಾನ ಭಾವ ಹೊಂದುವಂತೆ ನಿಸ್ವಾರ್ಥವಾಗಿ ಸೇವೆ ಮಾಡುತ್ತಾರೆ.

ಅಮೇರಿಕಾ ದೇಶದ ಅನುಭವ ಹಂಚಿಕೊಳ್ಳುತ್ತಿದ್ದ ಸ್ನೇಹಿತರೊಬ್ಬರು, ಅಲ್ಲಿ ವಾರದ ದಿನಗಳಲ್ಲಿ ಯಾರಾದರೂ ಮೃತಪಟ್ಟರೆ, ಅಂತಿಮ ದರ್ಶನ ಹಾಗೂ ಅಂತ್ಯಸಂಸ್ಕಾರಕ್ಕೆ ಹಾಜರಾಗಲು ಬಂಧುಗಳಿಗೆ ಕಷ್ಟವಾಗುತ್ತದೆ ಎನ್ನುವ ಕಾರಣಕ್ಕೆ ಮೃತ ದೇಹವನ್ನು ವಾರಾಂತ್ಯದವರೆವಿಗೆ ಶವಾಗಾರದಲ್ಲಿರಿಸುತ್ತಾರೆ. ವಾರಾಂತ್ಯ ಬಂದಾಗ ಶವಾಗಾರದಿಂದ ಮನೆಗೆ ತಂದು ಬಂಧುಗಳ ಅಂತಿಮ ದರ್ಶನಕ್ಕೆ ಇರಿಸಿ ನಂತರ ಶವಸಂಸ್ಕಾರ ಮಾಡುತ್ತಾರೆ ಎಂದು ಹೇಳಿದರು. ನಮ್ಮ ದೇಶದಲ್ಲಿಯೂ ವಯೋಸಹಜ ಕಾಯಿಲೆಗಳಿಂದ ಬಳಲುವ ಹಿರಿಯರು ವೆಂಟಿಲೇಟರ್ ಸಹಾಯದಿಂದ ಆಸ್ಪತ್ರೆಯಲ್ಲಿ ಉಸಿರಾಡುತ್ತಿದ್ದರೆ, ಅನುಕೂಲಕರ ದಿನದಂತೆ ವೆಂಟಿಲೇಟರ್ ಸಂಪರ್ಕ ಕಡಿತಗೊಳಿಸುವಂತೆ ಮನೆಯವರು ತಿಳಿಸುತ್ತಾರೆ. ಆ ನಂತರ ಮುಂದಿನ ಪ್ರಕ್ರಿಯೆಗಳು ನಡೆಯುತ್ತವೆ.

ಮನುಷ್ಯ ಹೆಚ್ಚೆಚ್ಚು ವಿದ್ಯಾವಂತನಾದಷ್ಟು, ಬುದ್ಧಿವಂತನಾದಷ್ಟು ತುಂಬಾ ಪ್ರಾಕ್ಟಿಕಲ್ ಆಗಿ ಚಿಂತಿಸುವುದು ಸಹಜ. ಆದರೆ ಮನುಷ್ಯ ಮೂಲಭೂತವಾಗಿ ಸಂಘಜೀವಿ. ಅವನು ಭಾವಜೀವಿ, ಎಷ್ಟೇ ಹಣವಿದ್ದರೂ, ಕಷ್ಟ ಅಂತಾ ಬಂದಾಗ ಹತ್ತಿರದಲ್ಲಿ ಹಣದಷ್ಟೇ ಜನರನ್ನು ಬಯಸುತ್ತಾನೆ. ತನ್ನ ಬಂಧುಬಳಗ ಕಂಡು ಅವನು ಒಂದು ಸಮಾಧಾನ ಭಾವ ಹೊಂದುತ್ತಾನೆ. ಎಷ್ಟೇ ದೊಡ್ಡ ಬಂಗಲೆಯಲ್ಲಿದ್ದರೂ, ಸಂಪತ್ತು ಇದ್ದರೂ, ಸಂತಸದಲ್ಲಿ ಸಡಗರ ಪಡಲು ಜನರಿಲ್ಲದಿದ್ದರೆ, ಕಷ್ಟದಲ್ಲಿ ದುಃಖ ಹಂಚಿಕೊಳ್ಳಲು ಜನರಿಲ್ಲದಿದ್ದರೆ ಒಂದು ಅನಾಥ ಭಾವ ಕಾಡುತ್ತದೆ.

> “ಹಿಂದೆ ಸಾರಿಗೆ ವ್ಯವಸ್ಥೆ ಉತ್ತಮವಾಗಿಲ್ಲದ ಕಾಲದಲ್ಲಿ ಬಾಂಧವ್ಯಗಳು ಗಟ್ಟಿಯಾಗಿದ್ದವು. ಎಲ್ಲದಕ್ಕೂ ಸಮಯ ಹೊಂದಿಸಿಕೊಳ್ಳುತ್ತಿದ್ದರು. ಸಾವು ನೋವುಗಳಿಗೆ ಪ್ರಥಮ ಆದ್ಯತೆ ನೀಡುತ್ತಿದ್ದರು. ಇಂದಿನ ಸ್ಪರ್ಧಾಯುಗದಲ್ಲಿ ಜನ ಸಮಯ ಹೊಂದಿಸಿಕೊಳ್ಳುವುದರಲ್ಲಿ ಹೆಣಗಾಡುತ್ತಿದ್ದಾರೆ. ಜನರ ಮೇಲಿನ ಆಸಕ್ತಿಗಿಂತ ಸ್ವಆಸಕ್ತಿ ಹೆಚ್ಚಾಗುತ್ತಿದೆ. ಸಂಬಂಧಿಕರೊಬ್ಬರು ಕಾಯಿಲೆಯಿಂದ ನರಳುತ್ತಿದ್ದಾರೆ ಎಂದರೆ ಹೋಗಿ ನೋಡುವಷ್ಟು ಸಮಯ ಹೊಂದಿರುವುದಿಲ್ಲ. ಆದ್ಯತೆ ಮೇರೆಗೆ ಸಮಯ ಹೊಂದಾಣಿಕೆ ಆಗುತ್ತಿದೆ. ಎಲ್ಲವೂ ಒಂದು ರೀತಿಯ ವ್ಯಾಪಾರಿ ಮನಸ್ಥಿತಿಯಲ್ಲಿ ನಿರ್ಧರಿಸಲಾಗುತ್ತಿದೆ ಅನಿಸುತ್ತಿದೆ. ಲಾಭ ಇದ್ದ ಕಡೆ ಸಮಯ ಕೊಡುವುದು, ಲಾಭ ಇಲ್ಲದ ಕಡೆ ಲಕ್ಷ್ಯವನ್ನೇ ಕೊಡದೆ ಇರುವುದು. ಹಣವಂತರಾದರೆ ಸಂಬಂಧಿಗಳೆನ್ನುವುದು, ಬಡವರಾದರೆ ಎಷ್ಟೇ ಹತ್ತಿರದ ರಕ್ತ ಸಂಬಂಧಿಗಳಾಗಿದ್ದರೂ, ಸಂಬಂಧವಿಲ್ಲದಂತೆ ವ್ಯವಹರಿಸುವ ಜಾಣತನ ಮೈಗೂಡುತ್ತಿದೆ.

ಹಿಂದೆ ಸಾರಿಗೆ ವ್ಯವಸ್ಥೆ ಉತ್ತಮವಾಗಿಲ್ಲದ ಕಾಲದಲ್ಲಿ ಬಾಂಧವ್ಯಗಳು ಗಟ್ಟಿಯಾಗಿದ್ದವು. ಎಲ್ಲದಕ್ಕೂ ಸಮಯ ಹೊಂದಿಸಿಕೊಳ್ಳುತ್ತಿದ್ದರು. ಸಾವು ನೋವುಗಳಿಗೆ ಪ್ರಥಮ ಆದ್ಯತೆ ನೀಡುತ್ತಿದ್ದರು. ರಕ್ತ ಸಂಬಂಧಿಗಳೆ ಸಂಬಂಧ ಎಳೆಯನ್ನು ತೆಳು ಮಾಡಿಕೊಳ್ಳುತ್ತಿದ್ದಾರೆ. ಅಷ್ಟೊಂದು ಗಟ್ಟಿತನ ಉಳಿಸಿಕೊಳ್ಳುತ್ತಿಲ್ಲ. ಒಂದು ರೀತಿಯ ಅನಾರೋಗ್ಯಕರ ಅಂತರ ಕಾಪಾಡಿಕೊಳ್ಳುತ್ತಿದ್ದಾರೆ. ಇಂದಿನ ಸ್ಪರ್ಧಾಯುಗದಲ್ಲಿ ಜನ ಸಮಯ ಹೊಂದಿಸಿಕೊಳ್ಳುವುದರಲ್ಲಿ ಹೆಣಗಾಡುತ್ತಿದ್ದಾರೆ. ಜನರ ಮೇಲಿನ ಆಸಕ್ತಿಗಿಂತ ಸ್ವಆಸಕ್ತಿ ಹೆಚ್ಚಾಗುತ್ತಿದೆ. ಸಂಬಂಧಿಕರೊಬ್ಬರು ಕಾಯಿಲೆಯಿಂದ ನರಳುತ್ತಿದ್ದಾರೆ ಎಂದರೆ ಹೋಗಿ ನೋಡುವಷ್ಟು ಸಮಯ ಹೊಂದಿರುವುದಿಲ್ಲ. ಆದ್ಯತೆ ಮೇರೆಗೆ ಸಮಯ ಹೊಂದಾಣಿಕೆ ಆಗುತ್ತಿದೆ. ಎಲ್ಲವೂ ಒಂದು ರೀತಿಯ ವ್ಯಾಪಾರಿ ಮನಸ್ಥಿತಿಯಲ್ಲಿ ನಿರ್ಧರಿಸಲಾಗುತ್ತಿದೆ ಅನಿಸುತ್ತಿದೆ. ಲಾಭ ಇದ್ದ ಕಡೆ ಸಮಯ ಕೊಡುವುದು, ಲಾಭ ಇಲ್ಲದ ಕಡೆ ಲಕ್ಷ್ಯವನ್ನೇ ಕೊಡದೆ ಇರುವುದು. ಹಣವಂತರಾದರೆ ಸಂಬಂಧಿಗಳೆನ್ನುವುದು, ಬಡವರಾದರೆ ಎಷ್ಟೇ ಹತ್ತಿರದ ಸಂಬಂಧಿಗಳಾಗಿದ್ದರೂ, ಸಂಬಂಧವಿಲ್ಲದಂತೆ ವ್ಯವಹರಿಸುವ ಜಾಣತನ ಮೈಗೂಡುತ್ತಿದೆ.

ಇಂದು ಹಳ್ಳಿಗಳಲ್ಲಿ ನಿಧನ ಹೊಂದಿದವರಿಗೆ ಬಿದುರು/ಮರದ ಚಟ್ಟ ಕಟ್ಟಲು ಜನ ಸಹಕಾರವಿಲ್ಲದ ಕಾರಣಕ್ಕೆ ಸಿದ್ಧಪಡಿಸಿದ ಕಬ್ಬಿಣದ/ಸ್ಟೀಲ್ ಚಟ್ಟಗಳ ಬಳಕೆ ಶುರುವಾಗಿದೆ. ನಗರ ಪ್ರದೇಶಗಳಲ್ಲಿ ಸ್ಮಶಾನವು ದೂರ ಇರುವುದರಿಂದ ಶವ ಸಾಗಿಸುವ ವಾಹನ ಬಳಕೆ ಇರುವುದು ಸಾಮಾನ್ಯ. ಆದರೆ ಹಳ್ಳಿಗಳಲ್ಲಿಯೂ ಶವ ಹೊರಲು ಜನ ಕಡಿಮೆಯಾಗುತ್ತಿರುವ ಕಾರಣಕ್ಕೆ ವಾಹನಗಳ ಮೇಲೆ ಅವಲಂಬಿತವಾಗುತ್ತಿರುವುದನ್ನು ಕಾಣಬಹುದು. ಮುಂದೆ ಇನ್ನು ಏನು ವ್ಯವಸ್ಥೆ ಉಂಟಾಗುತ್ತದೆಯೋ? ದೇವರೆ ಬಲ್ಲ.

ಮನುಷ್ಯನಿಗೆ ಜಾಣತನ ಅಗತ್ಯ, ಆದರೆ ಸ್ವಾರ್ಥದ ಚಾಣಾಕ್ಷತನ ಅನಗತ್ಯ. ಎಲ್ಲದರಲ್ಲೂ ಬುದ್ಧಿವಂತಿಕೆ ತೋರುವ ಅಗತ್ಯವಿಲ್ಲ. ಜಗತ್ತನ್ನು ನೋಡುದ ದೃಷ್ಟಿಕೋನ ಬದಲಿಸಿಕೊಳ್ಳಬೇಕು. ಎಲ್ಲವನ್ನು ಪ್ರಾಕ್ಟಿಕಲ್ ದೃಷ್ಟಿಯ ಮಿದುಳಿನಿಂದಲೇ ನೋಡಬಾರದು, ಬಾಂಧವ್ಯದ ದೃಷ್ಟಿಯ ಹೃದಯದಿಂದಲೂ ನೋಡಬೇಕು. ಸಂಬಂಧಗಳು ವ್ಯವಹಾರ ಹಾಗೂ ವ್ಯಾಪಾರದ ವಸ್ತುಗಳಲ್ಲ. ವೃತ್ತಿ ಬದುಕು ಹಾಗೂ ವೈಯಕ್ತಿಕ ಬದುಕಿಗೆ ಒಂದು ಗೆರೆ ಎಳೆದುಕೊಳ್ಳಬೇಕು. ಎಷ್ಟೇ ಖ್ಯಾತಿ ಹಾಗೂ ಹಣ ಗಳಿಸಿದ್ದರೂ, ತನ್ನ ಬಂಧು ಬಳಗದ ಸಂಪರ್ಕ ಕಡಿದುಕೊಳ್ಳಬಾರು. ಗಾಳಿಪಟ ಎಷ್ಟೇ ಮೇಲೆ ಏರಿದರೂ ದಾರದಿಂದ ಬೇರ್ಪಡದೆ ಸಂಪರ್ಕ ಹೊಂದಿರುತ್ತದೆಯೋ ಹಾಗೆ ಸಂಬಂಧಗಳ ಜೊತೆ ಬಾಂಧವ್ಯ ಹೊಂದಿರಬೇಕು. ತಾನು ಮೇಲೆ ಏರಿಯಾಯಿತು ಎಂದು ಭಾವಿಸಿ ದಾರದ ಸಂಪರ್ಕ ಕಡಿದುಕೊಂಡರೆ, ಕೆಲವೇ ಕ್ಷಣಗಳಲ್ಲಿ ಅದು ನೆಲ ಮುಟ್ಟುತ್ತದೆ. ಹಾಗೂ ಸಂಬಂಧಗಳು ಸಹ ನೆಲಕಚ್ಚಿಬಿಡುತ್ತವೆ.

ಇಂದಿನ ಜೀವನ ಜಂಜಾಟದಲ್ಲಿ ಸಮಯ ಹೊಂದಾಣಿಕೆ ಎಂಬುದು ಒಂದು ಸವಾಲಿನ ಸಂಗತಿಯಾಗಿದೆ. ಹರ್ಷದ ಕೂಳಿಗೆ ಎಷ್ಟೋ ಜನ ವರ್ಷದ ಕೂಳಿಗೆ ಮಾನ್ಯತೆ ನೀಡುತ್ತಿಲ್ಲ. ತಾನು ಹಾಗೂ ತನ್ನ ಕುಟುಂಬದ ಸೌಖ್ಯವಷ್ಟೇ ಮುಖ್ಯ ಎಂಬ ಸ್ವಾರ್ಥ ತೊಡೆದು ನನ್ನ ಬಂಧು ಬಳಗದ ಖುಷಿಯಲ್ಲಿ ತನ್ನ ಖುಷಿಯೂ ಅಡಗಿದೆ ಎಂದು ಭಾವಿಸಬೇಕು. ಕಷ್ಟದಲ್ಲಿರುವವರನ್ನು / ಕಾಯಿಲೆ ಬಿದ್ದವರನ್ನು ಸಮಯ ಹೊಂದಿಸಿಕೊಂಡು ಹೋಗಿ ನೋಡಬೇಕು. ಅವರಿಗೆ ಸಮಾಧಾನದ ನಾಲ್ಕು ಮಾತನಾಡಬೇಕು. ಸಾವಿನ ದಿನವೂ ಅಷ್ಟೇ, ಯಾವುದೇ ಲೆಕ್ಕಾಚಾರವಿಲ್ಲದೆ, ನಿಧನ ಹೊಂದಿದವರ ಮೇಲಿನ ಗೌರವದಿಂದ ಸಂಯಮದಿಂದ ಅಂತಿಮ ದರ್ಶನದಲ್ಲಿ ಪಾಲ್ಗೊಳ್ಳಬೇಕು. ಸ್ಮಶಾನದಲ್ಲಿ ಎಷ್ಟೇ ವೈರಾಗ್ಯ ಮೂಡಿದರೂ, ಮರುದಿನ ಅದೇ ಜನ ಎನ್ನುವಂತಾಗಬಾರದು.

ಹೂರಣ: **ಸಾವಿರ ಕಾರಣವಿದ್ದರೂ ಸಂಬಂಧಿಗಳ ಕಷ್ಟದಲ್ಲಿ ಪಾಲ್ಗೊಳ್ಳುವುದು ಮಾನವ ಧರ್ಮ**

ಸೆ.22ರಿಂದ 25ರವರೆಗೆ ದಸರಾ ಕ್ರೀಡಾಕೂಟ, ಆ.25ರೊಳಗೆ ತಾಲೂಕು; ಸೆ.1ರೊಳಗೆ ಜಿಲ್ಲಾ; ಸೆ.10ರೊಳಗೆ ವಿಭಾಗಮಟ್ಟದ ಕ್ರೀಡಾಕೂಟ


ಮೈಸೂರು, ಆ.3(ಎಸ್‌ಪಿಎನ್)– 2025–26ನೇ ಸಾಲಿನ ದಸರಾ ಕ್ರೀಡಾಕೂಟದ ಸ್ಪರ್ಧೆಗಳನ್ನು ಸೆ.22ರಿಂದ 25ರವರೆಗೆ ಮೈಸೂರಿನ ಚಾಮುಂಡಿವಿಹಾರ ಕ್ರೀಡಾಂಗಣದಲ್ಲಿ ಏರ್ಪಡಿಸಲಾಗಿದೆ ಎಂದು ಯುವ ಸಬಲೀಕರಣ–ಕ್ರೀಡಾ ಇಲಾಖೆ ಆಯುಕ್ತರು ಸುತ್ತೋಲೆ ಹೊರಡಿಸಿದ್ದಾರೆ.

ತಾಲೂಕು ಮಟ್ಟದ ದಸರಾ ಕ್ರೀಡಾ ಸ್ಪರ್ಧೆಗಳನ್ನು ಆ.25ರೊಳಗೆ, ಜಿಲ್ಲಾ ಮಟ್ಟದ ದಸರಾ ಕ್ರೀಡಾ ಕೂಟ ಸೆ.1ರೊಳಗಾಗಿ, ವಿಭಾಗದ ಮಟ್ಟದ ದಸರಾ ಕ್ರೀಡಾಕೂಟವನ್ನು ಸೆ.10ರೊಳಗೆ ಬೆಂಗಳೂರು ನಗರ ಮತ್ತು ಗ್ರಾಮಂತರ ವಿಭಾಗ, ಕಲ್ಬುರ್ಗಿ, ಮೈಸೂರು ವಿಭಾಗ ಹಾಗೂ ಬೆಳಗಾವಿ ವಿಭಾಗ ಎಂದು ಐದು ವಿಭಾಗಗಳಾಗಿ ವಿಂಗಡಿಸಿ ಕ್ರೀಡಾಪಟುಗಳಿಗೆ ಅವಕಾಶ ಕಲ್ಪಿಸಲಾಗಿದೆ.

ವಿಭಾಗಮಟ್ಟದ ಕ್ರೀಡಾ ಸ್ಪರ್ಧೆಗಳನ್ನು ಸಂಬಂಧಪಟ್ಟ(ಕಲ್ಬುರ್ಗಿ ವಿಭಾಗ, ಮೈಸೂರು ವಿಭಾಗ, ಬೆಳಗಾವಿ ವಿಭಾಗ, ಬೆಂಗಳೂರು ನಗರ ಹಾಗೂ ಬೆಂಗಳೂರು ಗ್ರಾಮಾಂತರ ವಿಭಾಗ) ಉಪ, ಸಹಾಯಕ ನಿರ್ದೇಶಕರು ಸಕಾಲಕ್ಕೆ ಏರ್ಪಡಿಸಿ ವಿವರವಾದ ಫಲಿತಾಂಶದ ಪಟ್ಟಿಯನ್ನು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರು, ಬೆಂಗಳೂರಿನ ಆಯುಕ್ತರ ಕಚೇರಿ ಸೆ.15ರೊಳಗೆ ಕಳುಹಿಸಬೇಕು ಹಾಗೂ ಸಂಬಂಧಿತ ಇಲಾಖಾ ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡತಕ್ಕದ್ದು ಎಂದು ತಿಳಿಸಿದ್ದಾರೆ.

ತಾಲೂಕು ಮತ್ತು ಜಿಲ್ಲಾಮಟ್ಟದ ಕ್ರೀಡಾಕೂಟದ ಸ್ಪರ್ಧೆಗಳನ್ನು ಸುವ್ಯವಸ್ಥಿತ ಹಾಗೂ ಶಿಷ್ಟಾಚಾರದನುಸಾರ ಏರ್ಪಡಿಸಲು ಜಿಲ್ಲೆಯ ಜಿಲ್ಲಾಧಿಕಾರಿ, ಜಿಪಂ ಸಿಇಓ ಸೇರಿದಂತೆ ಇತರೆ ಹಿರಿಯ ಅಧಿಕಾರಿಗಳ ಉಸ್ತುವಾರಿಯಲ್ಲಿ ಏರ್ಪಡಿಸತಕ್ಕದ್ದು, ತಾಲೂಕು ಮತ್ತು ಜಿಲ್ಲಾ ಮಟ್ಟದ ಕ್ರೀಡಾಕೂಟದ ಸಂಘಟನೆಗೆ ಅಗತ್ಯವಿರುವ ಅನುದಾನವನ್ನು ಜಿಲ್ಲಾ ಪಂಚಾಯತ್ ಖಾತೆ ಭರಿಸತಕ್ಕದ್ದು ಹಾಗೂ ಇದಕ್ಕೆ ಅಗತ್ಯ ಕ್ರಿಯಾಯೋಜನೆಗಳನ್ನು ಮಾರ್ಪಾಡು ಮಾಡಿಕೊಳ್ಳುವಂತೆ ಜಿಲ್ಲಾ ಮತ್ತು ತಾಲೂಕು ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ವಿಭಾಗದ ಮಟ್ಟದ ದಸರಾ ಕ್ರೀಡಾಕೂಟವನ್ನು ವಿವಿಧ ಜಿಲ್ಲೆಗಳಲ್ಲಿ ಗುಂಪುವಾರು ಹಾಗೂ ಜಿಲ್ಲಾವಾರು ಆಯೋಜಿಸಲು ಸೂಚಿಸಿದೆ.



ಅಥ್ಲೆಟಿಕ್ ಸ್ಪರ್ಧೆ(ಪುರುಷರಿಗೆ)ಯಲ್ಲಿ 100 ಮೀ, 200 ಮೀ, 400 ಮೀ, 800 ಮೀ, 1500 ಮೀ ಓಟ, 10 ಸಾವಿರ ಮೀ. ಓಟ, ಉದ್ದಜಿಗಿತ, ಎತ್ತರ ಜಿಗಿತ, ಟ್ರಿಪಲ್ ಜಂಪ್, ಜಾವಲಿನ್ ಥ್ರೋ, ಡಿಸ್ಕಸ್ ಥ್ರೋ, 110 ಮೀ ಹರ್ಡಲ್ಸ್, 4x100 ಮೀ ರಿಲೇ, 4x400 ಮೀ ರಿಲೇಯಲ್ಲಿ ಆಸ್ತಕರು ಭಾಗವಹಿಸಬಹುದು. ಅಥ್ಲೆಟಿಕ್ ಸ್ಪರ್ಧೆ(ಮಹಿಳೆಯರಿಗೆ)ಯಲ್ಲಿ 100 ಮೀ, 200 ಮೀ, 400 ಮೀ, 800 ಮೀ, 1500 ಮೀ ಓಟ, 10 ಸಾವಿರ ಮೀ. ಓಟ, ಉದ್ದಜಿಗಿತ, ಎತ್ತರ ಜಿಗಿತ, ಟ್ರಿಪಲ್ ಜಂಪ್, ಜಾವಲಿನ್ ಥ್ರೋ, ಡಿಸ್ಕಸ್ ಥ್ರೋ, 110 ಮೀ ಹರ್ಡಲ್ಸ್, 4x100 ಮೀ ರಿಲೇ, 4x400 ಮೀ ರಿಲೇಯಲ್ಲಿ ಆಸ್ತಕರು ಭಾಗವಹಿಸಬಹುದು.

ಸಾಂಪ್ರದಾಯಿಕ ಯೋಗಾಸನ ಸ್ಪರ್ಧೆ: ದಸರಾ ಕ್ರೀಡಾಕೂಟದ ತಾಲೂಕು ಮಟ್ಟದಲ್ಲಿ ವೀರಭದ್ರಾಸನ, ಜಾನು ಶಿರ್ಷಾಸನ, ಹಲಾಸನ, ಧನುರಾಸನ. ಜಿಲ್ಲಾ ಮಟ್ಟದಲ್ಲಿ ಪಾದ ಹಸ್ತಾಸನ, ಆಕರ್ಣ ಧನುರಾಸನ, ಊರ್ಧ್ವ ಧನುರಾಸನ, ಅರ್ಧ ಮತ್ಸ್ಯೇಂದ್ರಾಸನ. ವಿಭಾಗಮಟ್ಟದಲ್ಲಿ ಕೂರ್ಮಾಸನ, ಬಕಾಸನ, ರಾಜಕಪೋತಾಸನ, ನಟರಾಜಾಸನ. ರಾಜ್ಯ ಮಟ್ಟದಲ್ಲಿ ಊರ್ಧಮುಖ ಪಶ್ಚಿಮೋತ್ತಾನಾಸನ, ಟಿಟ್ಟಿಭಾಸನ, ಶಲಭ ವೃಶ್ಚಿಕಾಸನ, ಪೂರ್ಣ ಮತ್ಸ್ಯೇದ್ರಾಸನ ಕಡ್ಡಾಯವಾಗಿ ಆಯೋಜಿಸುವಂತೆ ಸೂಚಿಸಲಾಗಿದೆ. ಸ್ಪರ್ಧಿಗಳು ಆಯಾಮಟ್ಟಗಳಲ್ಲಿ ಈ ಮೇಲಿನ 4 ಕಡ್ಡಾಯ ಆಸನಗಳನ್ನು ಆಯ್ಕೆ ಮಾಡಿ ಜೊತೆಗೆ 3 ಐಚ್ಛಿಕ ಆಸನ ಪ್ರದರ್ಶಿಸಬೇಕು. ತಾಲೂಕು ಮತ್ತು ಜಿಲ್ಲಾ ಮಟ್ಟದಲ್ಲಿ ಕಡ್ಡಾಯ ಆಸನ ಮತ್ತು ಐಚ್ಛಿಕ ಆಸನಗಳ ಅಂತಿಮ ಸ್ಥಿತಿಯಲ್ಲಿ ಕ್ರೀಡಾಪಟುಗಳ 10 ಸೆಕೆಂಡ್‌ಗಳ ಕಾಲ, ಹಾಗೂ ವಿಭಾಗ ಮಟ್ಟ ಹಾಗೂ ರಾಜ್ಯ ಮಟ್ಟದಲ್ಲಿ 5 ಸೆಕೆಂಡುಗಳ ಅಂತಿಮ ಸ್ಥಿತಿಯಲ್ಲಿ ನಿಲ್ಲಬೇಕು ಎಂದು ಸೂಚಿಸಿದ್ದಾರೆ. ಕಲಾತ್ಮಕ ಯೋಗಾಸನ(ವೈಯಕ್ತಿಕ), ಕಲಾತ್ಮಕ ಯೋಗಾಸನ(ಜೋಡಿ), ತಾಳಬದ್ಧ ಯೋಗಾಸನ(ಜೋಡಿ) ಸ್ಪರ್ಧೆಯನ್ನು ಏರ್ಪಡಿಸಲಾಗಿದೆ.

ತಾಲೂಕು ಮಟ್ಟದಲ್ಲಿ ಅಥ್ಲೆಟಿಕ್ಸ್, ವಾಲಿಬಾಲ್, ಫುಟ್ಬಾಲ್, ಖೋ–ಖೋ, ಕಬಡ್ಡಿ, ಥ್ರೋಬಾಲ್, ಯೋಗಾಸನ, ಜಿಲ್ಲಾ ಮತ್ತು ವಿಭಾಗ ಮಟ್ಟದಲ್ಲಿ ಅಥ್ಲೆಟಿಕ್ಸ್, ವಾಲಿಬಾಲ್, ಫುಟ್ಬಾಲ್, ಖೋಖೋ, ಕಬಡ್ಡಿ, ಬಾಸ್ಕೆಟ್ ಬಾಲ್, ಕುಸ್ತಿ, ಬ್ಯಾಡ್ಮಿಂಟನ್, ಹಾಕಿ, ಹ್ಯಾಂಡ್‌ಬಾಲ್, ಟೇಬಲ್ ಟೆನ್ನಿಸ್, ಥ್ರೋಬಾಲ್, ಬಾಲ್ ಬ್ಯಾಡ್ಮಿಂಟನ್, ಯೋಗಾಸನ ಸ್ಪರ್ಧೆಗಳನ್ನು ಏರ್ಪಡಿಸಲಾಗಿದ್ದು, ಟೆನ್ನಿಸ್, ನೆಟ್‌ಬಾಲ್, ಈಜು ಸ್ಪರ್ಧೆಗಳನ್ನು **ಜಿಲ್ಲಾ ಮಟ್ಟದಲ್ಲಿ** ಆಯ್ಕೆ ಮಾಡಬೇಕಾದ ಕ್ರೀಡೆಗಳು.

ರಾಜ್ಯಮಟ್ಟದಲ್ಲಿ ಅಥ್ಲೆಟಿಕ್ಸ್, ವಾಲಿಬಾಲ್, ಫುಟ್ಬಾಲ್, ಖೋ ಖೋ, ಕಬಡ್ಡಿ, ಬಾಸ್ಕೆಟ್ ಬಾಲ್, ಕುಸ್ತಿ, ಬಾಲ್ ಬ್ಯಾಡ್ಮಿಂಟನ್, ಟೇಬಲ್ ಟೆನ್ನಿಸ್, ಈಜು, ಹಾಕಿ, ಹ್ಯಾಂಡ್‌ಬಾಲ್, ಜೂಡೋ, ಟೆಬಲ್ ಟೆನ್ನಿಸ್, ಜಿಮ್ನಾಸ್ಟಿಕ್ಸ್, ಟೆನ್ನಿಸ್, ಆರ್ಚರಿ(ಬಿಲ್ಲುಗಾರಿಕೆ), ಸೈಕ್ಲಿಂಗ್, ಬಾಕ್ಸಿಂಗ್, ವುಷು, ಟೆಕ್ವಾಂಡೋ, ನೆಟ್‌ಬಾಲ್, ಭಾರ ಎತ್ತುವುದು, ಫೆನ್ಸಿಂಗ್(ಕತ್ತಿವರಸೆ), ಥ್ರೋಬಾಲ್, ಬ್ಯಾಡ್ಮಿಂಟನ್, ಯೋಗಾಸನ, ಶೂಟಿಂಗ್ ಸ್ಪರ್ಧೆ.

ಸ್ಪರ್ಧೆಗಳ ಆಯೋಜನೆಗೆ ಸಾಮಾನ್ಯ ಮಾರ್ಗಸೂಚಿ: ತಾಲೂಕು ಮಟ್ಟದಲ್ಲಿ ನಡೆದ ಕ್ರೀಡೆಗಳಲ್ಲಿ ವೈಯಕ್ತಿಕ ಸ್ಪರ್ಧೆಗಳಲ್ಲಿ ಪ್ರಥಮ ಮತ್ತು ದ್ವಿತೀಯ ಸ್ಥಾನ ಪಡೆದ ಕ್ರೀಡಾಪಟುಗಳು ಹಾಗೂ ಗುಂಪು ಕ್ರೀಡೆಗಳಲ್ಲಿ ಪ್ರಥಮ ಸ್ಥಾನ ಪಡೆದ ಕ್ರೀಡಾಪಟುಗಳಿಗೆ ಜಿಲ್ಲಾಮಟ್ಟದಲ್ಲಿ ಭಾಗಿಯಾಗಲು ಅವಕಾಶವಿದೆ. ಜಿಲ್ಲಾ ಮಟ್ಟದಲ್ಲಿ ನಡೆದ ಕ್ರೀಡೆಗಳಲ್ಲಿ ವೈಯಕ್ತಿಕ ಸ್ಪರ್ಧೆಗಳಲ್ಲಿ ಪ್ರಥಮ ಮತ್ತು ದ್ವಿತೀಯ ಸ್ಥಾನ ಪಡೆದ ಕ್ರೀಡಾಪಟುಗಳು ಹಾಗೂ ಗುಂಪು ಕ್ರೀಡೆಗಳಲ್ಲಿ ಪ್ರಥಮ ಸ್ಥಾನಪಡೆದ ಕ್ರೀಡಾಪಟುಗಳಿಗೆ ವಿಭಾಗ ಮಟ್ಟದಲ್ಲಿ ಭಾಗವಹಿಸಲು ಅವಕಾಶವಿರುತ್ತದೆ. ವಿಭಾಗದಿಂದ ವಿಜೇತರಾದವರನ್ನು ರಾಜ್ಯಮಟ್ಟದ ದಸರಾ ಕ್ರೀಡಾಕೂಟದ ಸ್ಪರ್ಧೆಗಳನ್ನು ಕಳುಹಿಸಿಕೊಡುವ ಜವಾಬ್ದಾರಿ ಆಯಾಯ ಜಿಲ್ಲೆಯ ಯುವ ಸಬಲೀಕರಣ–ಕ್ರೀಡಾ ಇಲಾಖೆ ಉಪನಿರ್ದೇಶಕರು, ಸಹಾಯಕ ನಿರ್ದೇಶಕರದ್ದಾಗಿರುತ್ತದೆ. ಒಟ್ಟಿನಲ್ಲಿ ತಾಲೂಕು, ಜಿಲ್ಲಾ ಮತ್ತು ವಿಭಾಗದ ಮಟ್ಟದ ದಸರಾ ಕ್ರೀಡಾಕೂಟಕ್ಕೆ ಸಂಬಂಧಿಸಿದಂತೆ ಸ್ಪರ್ಧವಾರು ಫಲಿತಾಂಶ ಪಟ್ಟಿಯನ್ನು ಕೇಂದ್ರ ಕಚೇರಿಗೆ ಸಲ್ಲಿಸಬೇಕು. ವಿಭಾಗದ ಮಟ್ಟ ಕ್ರೀಡಾಕೂಟ ಆಯೋಜಿಸುವ ಬಗ್ಗೆ ಪ್ರತ್ಯೇಕ ಸುತ್ತೋಲೆಯಲ್ಲಿ ತಿಳಿಸಲಾಗುವುದು

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರು ಮಿತ್ರ ಸೋಮವಾರ 4 ಆಗಸ್ಟ್ 2025

ಹೃದಯಾಘಾತ; ವಿಶೇಷ ಅಧ್ಯಯನ ನಡೆಸಿ: ನಡ್ಡಾಗೆ ಸಂಸದ ಶ್ರೇಯಸ್ ಪಟೇಲ್ ಮನವಿ



ನವದೆಹಲಿಯಲ್ಲಿ ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ಜೆ.ಪಿ. ನಡ್ಡಾ ಅವರನ್ನು ಸಂಸದ ಶ್ರೇಯಸ್ ಪಟೇಲ್ ಭೇಟಿಯಾಗಿ ಕ್ಷೇತ್ರದ ವಿವಿಧ ಬೇಡಿಕೆಗಳ ಈಡೇರಿಕೆ ಸಂಬಂಧ ಮನವಿ ಸಲ್ಲಿಸಿದರು.

ಹಾಸನ: ಜಿಲ್ಲೆಯಲ್ಲಿ ಹೃದಯಾಘಾತದಿಂದ ಸಾವುಗಳು ಸಂಭವಿಸುತ್ತಿದ್ದು, ಹೃದಯಾಘಾತ ಮರಣ ತಡೆಗೆ ಭಾರತೀಯ ವೈದ್ಯಕೀಯ ಸಂಶೋಧನಾ ಮಂಡಳಿ ವಿಶೇಷ ಅಧ್ಯಯನ ಪ್ರಾರಂಭಿಸಬೇಕು. ಕೇಂದ್ರ ಸರ್ಕಾರ ರಾಷ್ಟ್ರೀಯ ಮಿಷನ್ ಆರಂಭಿಸುವಂತೆ ಸಂಸದ ಶ್ರೇಯಸ್ ಪಟೇಲ್ ಮನವಿ ಮಾಡಿದರು.

ನವದೆಹಲಿಯಲ್ಲಿರುವ ಸಂಸದರು, ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ಜೆ.ಪಿ.ನಡ್ಡಾ ಅವರನ್ನು ಭೇಟಿಯಾಗಿ ಕ್ಷೇತ್ರದ ವಿವಿಧ ಬೇಡಿಕೆಗಳ ಈಡೇರಿಕೆ ಸಂಬಂಧ ಮನವಿ ಸಲ್ಲಿಸಿದರು.

ಯುವಕರಲ್ಲಿ ಹೃದಯಾಘಾತ ಪ್ರಕರಣ ದಿನದಿಂದ ದಿನಕ್ಕೆ ಹೆಚ್ಚುತ್ತಿದ್ದು, ಆತಂಕ ಹುಟ್ಟಿಸಿದೆ. ಆರೋಗ್ಯವಾಗಿರುವ ಅನೇಕ ಯುವಕರು ಹೃದಯ ಸಂಬಂಧಿ ತೊಂದರೆಗಳಿಂದ ಅಕಾಲಿಕ ಮರಣ ಹೊಂದುತ್ತಿದ್ದಾರೆ. ಕುಟುಂಬ ಮತ್ತು ಸಮುದಾಯದ ಮೇಲೆ ಆಘಾತಕಾರಿ ಪರಿಣಾಮ ಬೀರಿದೆ ಎಂದು ತಿಳಿಸಿದರು.

ಕರ್ನಾಟಕ ಹಾಗೂ ವಿಶೇಷವಾಗಿ ಹಾಸನ ಕ್ಷೇತ್ರದಲ್ಲಿ ಇತ್ತೀಚಿನ ವರ್ಷಗಳಲ್ಲಿ ಹೃದಯಾಘಾತ ಪ್ರಕರಣಗಳು ಹೆಚ್ಚಾಗಿ ವರದಿಯಾಗಿವೆ ಎಂದ ಅವರು, ಶಿಕ್ಷಣ ಸಂಸ್ಥೆಗಳು ಮತ್ತು ಕೈಗಾರಿಕಾ ಉದ್ಯೋಗ ಸ್ಥಳಗಳಲ್ಲಿ 40 ವರ್ಷ ವಯೋಮಿತಿಯ ಎಲ್ಲರಿಗೆ ಕಡ್ಡಾಯ ಹೃದಯ ತಪಾಸಣೆ ನಡೆಸಬೇಕು. ಆಕಸ್ಮಿಕ ಹೃದಯಸ್ತಂಭನ ತಡೆಗೆ ರಾಷ್ಟ್ರೀಯ ಡಿಜಿಟಲ್ ರಿಜಿಸ್ಟರ್ ಸ್ಥಾಪನೆ ಮಾಡಬೇಕು. ಸಂಗ್ರಹಿತ ಮಾಹಿತಿಯಿಂದ ಸಂಶೋಧನೆ ಮತ್ತು ತಡೆಗಟ್ಟುವ ಕಾರ್ಯತಂತ್ರಗಳು ರೂಪಿಸಲು ಸಹಕಾರ ನೀಡಬೇಕು ಎಂದು ಕೋರಿದರು.

ಆಯುಷ್ಮಾನ್ ಭಾರತ ಆರೋಗ್ಯ ಮೂಲ ಸೌಕರ್ಯ ಮಿಷನ್ ಅಡಿಯಲ್ಲಿ ಹೃದಯ ತಪಾಸಣಾ ವಾಹನಗಳನ್ನು ಮಂಜೂರು ಮಾಡಬೇಕು. ಹಾಸನ ಸೇರಿದಂತೆ ಆಯ್ದ ಪೈಲಟ್ ಜಿಲ್ಲೆಗಳಲ್ಲಿ ಈ ಯೋಜನೆ ಪ್ರಾರಂಭಿಸುವ ಮೂಲಕ ತ್ವರಿತ ಚಿಕಿತ್ಸೆಗೆ ನೆರವಾಗಬೇಕು ಎಂದು ಆಗ್ರಹಿಸಿದರು.

ಅರಸೀಕೆರೆ, ಕಡೂರಿನಲ್ಲಿ ಎಂಸಿಎಚ್ ಆಸ್ಪತ್ರೆ ಅಗತ್ಯ

“ಹಾಸನ ಜಿಲ್ಲೆಯ ಅರಸೀಕೆರೆ ಮತ್ತು ಚಿಕ್ಕಮಗಳೂರು ಜಿಲ್ಲೆಯ ಕಡೂರು ತಾಲೂಕಿನಲ್ಲಿ ಪ್ರತ್ಯೇಕ 100 ಹಾಸಿಗೆಗಳ ಮೆಟರನಲ್ ಅಂಡ್ ಚೈಲ್ಡ್ ಹೆಲ್ತ್ (ಎಂಸಿಎಚ್) ಆಸ್ಪತ್ರೆ ತೆರೆಯುವ ಅವಶ್ಯಕತೆ ಇದೆ. ಅರಸೀಕೆರೆ ತಾಲೂಕು ಅಧಿಕ ಜನಸಂಖ್ಯೆ ಹೊಂದಿದ್ದು, ನಗರದಲ್ಲಿ ಎಂಸಿಎಚ್ ಆಸ್ಪತ್ರೆ ಇಲ್ಲ. ಗರ್ಭಿಣಿಯರು ಹಾಗೂ ಬಾಣಂತಿಯರು ಅಗತ್ಯ ಚಿಕಿತ್ಸೆಗಾಗಿ ಹಾಸನ ಅಥವಾ ಖಾಸಗಿ ಆಸ್ಪತ್ರೆಗಳತ್ತ ಮುಖ ಮಾಡುವಂತಾಗಿದೆ. ಕಡೂರು ತಾಲೂಕಿನ ಸ್ಥಿತಿಯೂ ಇದೇ ರೀತಿಯಾಗಿದೆ. ಸಮರ್ಪಕ ತಾಯಿ ಮತ್ತು ಮಕ್ಕಳ ಆರೋಗ್ಯ ಆಸ್ಪತ್ರೆ ಇಲ್ಲ. ಮಹಿಳೆಯರು ತುರ್ತು ಸಂದರ್ಭದಲ್ಲಿ ತಕ್ಷಣ ಚಿಕಿತ್ಸೆ ಪಡೆಯಲು ದೂರದ ಊರಿಗೆ ಪ್ರಯಾಣಿಸಬೇಕಾಗಿದೆ. **–ಶ್ರೇಯಸ್ ಪಟೇಲ್**

ಮೈಸೂರಲ್ಲಿ ರಾಜ್ಯಮಟ್ಟದ ಗುರು ಶ್ರೇಷ್ಠ ಪ್ರಶಸ್ತಿ ಪ್ರದಾನ



ರಾಜ್ಯದ ವಿವಿಧ ಜಿಲ್ಲೆಗಳ ಸಿಬಿಎಸ್‌ಇ ಶಾಲೆಗಳಲ್ಲಿನ ಕನ್ನಡ ಶಿಕ್ಷಕರಿಗೆ ಮೈಸೂರಲ್ಲಿ ಭಾನುವಾರ ಪರೀಕ್ಷಾ ಸ್ಫೂರ್ತಿ ಫೌಂಡೇಶನ್ ವತಿಯಿಂದ 'ರಾಜ್ಯಮಟ್ಟದ ಗುರು ಶ್ರೇಷ್ಠ ಪ್ರಶಸ್ತಿ–2025' ಪ್ರದಾನ ಮಾಡಲಾಯಿತು.

ಮೈಸೂರು, ಆ.3(ಎಂಕೆ)–ರಾಜ್ಯದ ವಿವಿಧ ಜಿಲ್ಲೆಗಳ ಸಿಬಿಎಸ್‌ಇ ಶಾಲೆಗಳಲ್ಲಿನ 170 ಮಂದಿ ಕನ್ನಡ ಶಿಕ್ಷಕರಿಗೆ ಪರೀಕ್ಷಾ ಸ್ಫೂರ್ತಿ ಫೌಂಡೇಶನ್ ವತಿಯಿಂದ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಸಹಯೋಗದೊಂದಿಗೆ 'ರಾಜ್ಯಮಟ್ಟದ ಗುರು ಶ್ರೇಷ್ಠ ಪ್ರಶಸ್ತಿ–2025' ಪ್ರದಾನ ಮಾಡಲಾಯಿತು.

ಮೈಸೂರಿನ ಸರಸ್ವತಿಪುರಂನ ಜೆಎಸ್‌ಎಸ್ ಮಹಿಳಾ ಕಾಲೇಜಿನ ನವಜ್ಯೋತಿ ಸಭಾಂಗಣದಲ್ಲಿ ಭಾನುವಾರ ನಡೆದ ಸಮಾರಂಭದಲ್ಲಿ ಕನ್ನಡ ಶಿಕ್ಷಕರಿಗೆ ಶಾಸಕ ಟಿ.ಎಸ್.ಶ್ರೀವತ್ಸ ಪ್ರಶಸ್ತಿ ಪ್ರದಾನ ಮಾಡಿದರು.

ಬಳಿಕ ಮಾತನಾಡಿದ ಅವರು, ಕನ್ನಡಕ್ಕೆ ಸರಿ–ಸಮಾನವಾದ ಮತ್ತೊಂದು ಭಾಷೆಯೇ ಇಲ್ಲ. ನಮ್ಮೆಲ್ಲರಿಗೂ ಕನ್ನಡವೇ ಸ್ಫೂರ್ತಿ. ಕನ್ನಡ ಭಾಷೆ ತೆಗೆದುಕೊಂಡಷ್ಟು ಜ್ಞಾನಪೀಠ ಪ್ರಶಸ್ತಿಗಳನ್ನು ಬೇರೆ ಯಾವ ಭಾಷೆಯೂ ತೆಗೆದುಕೊಂಡಿಲ್ಲ. ತಮಿಳುನಾಡಿನ ನಟನೊಬ್ಬ ತಲೆಕೆಟ್ಟು ಮಾತನಾಡಿದ್ದು, ಬಿಟ್ಟರೆ ಎಲ್ಲಾ ಕಡೆಯೂ ಕನ್ನಡಕ್ಕೆ ಮಹತ್ವದ ಸ್ಥಾನವಿದೆ. ಕನ್ನಡದ ಭಾಷೆಯ ಜಾನಪದಕ್ಕೆ ಬಹುದೊಡ್ಡ ಇತಿಹಾಸವಿದೆ ಎಂದರು.

ಜನರಿಗೆ ಬಹಳ ಸುಲಭವಾಗಿ ಅರ್ಥವಾಗುವ ಭಾಷೆ ಕನ್ನಡ. ಸಾಹಿತ್ಯ, ಚಿತ್ರರಂಗ, ಸುಗಮ ಸಂಗೀತ ಸೇರಿದಂತೆ ಎಲ್ಲಾ ಪ್ರಥಮಗಳಿಗೂ ಮೈಸೂರು ಸಾಕ್ಷಿಯಾಗಿದೆ. ಮೈಸೂರು ಸಣ್ಣ ಪತ್ರಿಕೆಗಳ ತವರೂರು ಎಂಬುದೇ ನಮ್ಮ ಹೆಮ್ಮೆಯಾಗಿದೆ. ಕನ್ನಡ ಎಂದರೆ ಮೂಗು ಮುರಿಯುವ ಸಂದರ್ಭದಲ್ಲಿ ಕನ್ನಡದ ಕಂಪನ್ನು ಮಕ್ಕಳ ಹೃದಯಕ್ಕೆ ಮುಟ್ಟಿಸುತ್ತಿರುವ ಕನ್ನಡ ಶಿಕ್ಷಕರಿಗೆ ಧನ್ಯವಾದ ಎಂದು ಶ್ಲಾಘಿಸಿದರು.

ಸಮಾರಂಭ ಉದ್ಘಾಟಿಸಿದ ವಿಧಾನಪರಿಷತ್ ಸದಸ್ಯ ಕೆ.ವಿವೇಕಾನಂದ ಮಾತನಾಡಿ, ಕನ್ನಡ ಶಾಲೆಗಳೇ ಕಣ್ಮರೆಯಾಗುತ್ತಿರುವ ಸಂದರ್ಭದಲ್ಲಿ ಸಿಬಿಎಸ್‌ಇ ಪಠ್ಯಕ್ರಮ ಶಾಲೆಗಳಲ್ಲಿನ ಮಕ್ಕಳು ಕನ್ನಡ ವಿಷಯದಲ್ಲಿ ನೂರಕ್ಕೆ ನೂರು ಅಂಕ ಗಳಿಸಲು ಶ್ರಮಿಸಿದ ಕನ್ನಡ ಶಿಕ್ಷಕರ ಕಾರ್ಯ ಮೆಚ್ಚುವಂತಹದ್ದು ಎಂದು ಗುಣಗಾನ ಮಾಡಿದರು.

ಸರ್ಕಾರಿ ಶಾಲೆಗಳು ಬಹುತೇಕ ಮುಚ್ಚಲಿವೆ...!

“ಮುಂದಿನ 10 ವರ್ಷದಲ್ಲಿ ಸರ್ಕಾರಿ ಶಾಲೆಗಳು ಬಹುತೇಕ ಮುಚ್ಚಲಿವೆ. ನಾನು ಓದಿದ ಸರ್ಕಾರಿ ಶಾಲೆಯೇ ಮುಚ್ಚಿಹೋಗಿದೆ. ಮಕ್ಕಳ ಪೋಷಕರು ಸಹ ನಮ್ಮ ಮಕ್ಕಳು ಸರ್ಕಾರಿ ಶಾಲೆಯಲ್ಲಿ ಯಾಕೆ ಓದಬೇಕು. ಖಾಸಗಿ ಶಾಲೆಯಲ್ಲೇ ಓದಲಿ ಎಂದು ಹೇಳುತ್ತಿರುವುದು ವಿಪರ್ಯಾಸ.

– ಕೆ.ವಿವೇಕಾನಂದ, ವಿಧಾನಪರಿಷತ್ ಸದಸ್ಯ

ಪುಸ್ತಕಗಳ ಬಿಡುಗಡೆ: ಇದೇ ವೇಳೆ 'ಪರೀಕ್ಷಾ ಸ್ಫೂರ್ತಿ' ಹಾಗೂ 'ಕನ್ನಡ ವ್ಯಾಕರಣ ಸಂಪದ' ಪುಸ್ತಕಗಳನ್ನು ಬಿಡುಗಡೆ ಮಾಡಲಾಯಿತು.

ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾಲೇಜು ಶಿಕ್ಷಣ ವಿಭಾಗದ ಉಪ ನಿರ್ದೇಶಕ ನಿರಂಜನ ಮೂರ್ತಿ, ಪುಸ್ತಕವನ್ನು ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮುಡ್ಡೀಕೆರೆ ಗೋಪಾಲ್ ಬಿಡುಗಡೆಗೊಳಿಸಿದರು. ಇಫೀಮೆಡ್ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಎ. ಸುಧೀಂದ್ರ, ಪರೀಕ್ಷಾ ಸ್ಫೂರ್ತಿ ಫೌಂಡೇಶನ್ ಅಧ್ಯಕ್ಷ ಯೋಗೇಶ್ ಚುಂಚನಹಳ್ಳಿ, ಪದಾಧಿಕಾರಿಗಳಾದ ಸೋಮಶೇಖರ್, ಗುರುಪ್ರಸಾದ್, ರಮೇಶ್, ಬಾಗಳಿ ಮಹೇಶ್, ಹರೀಶ್ ನಾಯಕ್, ಮಂಜುನಾಥ್, ಪದ್ಮಕುಮಾರಿ, ಶೋಭಾ ನಾಗಭೂಷಣ್, ರೇಖಾ, ರೂಪ, ದಿವ್ಯ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ನಾವು ಪಡೆದ ಶಿಕ್ಷಣವನ್ನು ಬೇರೆಯವರಿಗೆ ವರ್ಗಾವಣೆ ಮಾಡಿದಾಗಲೇ ಪ್ರತಿಭೆಗೆ ಫಲ

ವಿಧಾನಪರಿಷತ್ ಸದಸ್ಯ ಅಡಗೂರು ಹೆಚ್.ವಿಶ್ವನಾಥ್ ಅಭಿಮತ



ಮೈಸೂರಿನ ಗಾಂಧಿನಗರದಲ್ಲಿ ಮೈಸೂರು ಸಿಟಿ ಗಾಂಧಿನಗರ ಆದಿ ಕರ್ನಾಟಕ ಅಭಿವೃದ್ಧಿ ಸಂಘದ ವತಿಯಿಂದ ಭಾನುವಾರ ಆಯೋಜಿಸಿದ್ದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಎಂಎಲ್‌ಸಿ ಹೆಚ್.ವಿಶ್ವನಾಥ್, ಶಾಸಕ ತನ್ವೀರ್ ಸೇಠ್ ಇನ್ನಿತರರಿದ್ದರು.

ಮೈಸೂರು, ಆ.3(ಎಂಕೆ)– ನಾವು ಪಡೆದ ಶಿಕ್ಷಣವನ್ನು ಬೇರೆಯವರಿಗೆ ವರ್ಗಾವಣೆ ಮಾಡಿದಾಗಲೇ ನಮ್ಮಲ್ಲಿನ ಪ್ರತಿಭೆಗೆ ಫಲ ದೊರೆತಂತೆ ಎಂದು ವಿಧಾನಪರಿಷತ್ ಸದಸ್ಯ ಅಡಗೂರು ಹೆಚ್.ವಿಶ್ವನಾಥ್ ಅಭಿಪ್ರಾಯಪಟ್ಟರು.

ಮೈಸೂರಿನ ಗಾಂಧಿನಗರದಲ್ಲಿ ಮೈಸೂರು ಸಿಟಿ ಗಾಂಧಿನಗರ ಆದಿ ಕರ್ನಾಟಕ ಅಭಿವೃದ್ಧಿ ಸಂಘದ ವತಿಯಿಂದ ಆಯೋಜಿಸಿದ್ದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ವಿದ್ಯೆಯನ್ನು ವಿನಯದಿಂದ ಪಡೆದಾಗ ಮಾತ್ರವೇ ನಮ್ಮಲ್ಲಿನ ವಿದ್ಯೆ ಸಾರ್ಥಕವಾಗುತ್ತದೆ ಎಂದರು.

ವಿದ್ಯಾರ್ಥಿಗಳು ಅಂಕ ಗಳಿಕೆಯ ಜೊತೆಗೆ ಸಾಮಾನ್ಯ ಜ್ಞಾನವನ್ನು ಹೊಂದಬೇಕು. ಜೀವನದಲ್ಲಿ ಸಂಸ್ಕಾರವನ್ನು ರೂಢಿಸಿಕೊಂಡರಷ್ಟೇ ಆ ಮೂಲಕ ಉತ್ತಮ ನಾಗರಿಕರಾಗಲು ಸಾಧ್ಯ. ನಮ್ಮ ಜೀವನದಲ್ಲಿ ಶಿಸ್ತು, ಸಹನೆ, ಸಂಯಮವನ್ನು ಪಾಲಿಸಿಕೊಂಡು ಬಂದಾಗ ವಿದ್ಯಾರ್ಥಿಗಳು ಯಶಸ್ಸನ್ನು ಕಾಣಲು ಸಾಧ್ಯ ಎಂದು ತಿಳಿಸಿದರು.

ಶಾಸಕ ತನ್ವೀರ್ ಸೇಠ್ ಮಾತನಾಡಿ, ವಿದ್ಯೆ ಯಾವುದೇ ಸಮುದಾಯದ ಅಥವಾ ಯಾರೊಬ್ಬರ ಸ್ವತ್ತಲ್ಲ. ಅದು ಸಾಧಕರಿಗೆ ಒಲಿಯುತ್ತದೆ. ಬಡತನದಿಂದ ಹೊರಬರಲು, ಸಮಾಜದ ಮುಖ್ಯವಾಹಿನಿಗೆ ಸೇರ್ಪಡೆಗೊಳ್ಳಲು ಶಿಕ್ಷಣ ಪ್ರಮುಖವಾದ ಸಾಧನವಾಗಿದ್ದು, ಅದನ್ನು ಗಳಿಸಿದರೆ ಸಮಾಜದಲ್ಲಿ ಗೌರವ, ಸ್ಥಾನ–ಮಾನ ದೊರೆಯುತ್ತದೆ ಎಂದು ಕಿವಿಮಾತು ಹೇಳಿದರು.

ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿ ಪರೀಕ್ಷೆಗಳಲ್ಲಿ ಹೆಚ್ಚು ಅಂಕ ಗಳಿಸಿದ 30ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲಾಯಿತು. ಪಾಲಿಕೆ ಮಾಜಿ ಸದಸ್ಯ ಪಿ.ಶ್ರೀಕಂಠಮೂರ್ತಿ, ಮೈಸೂರು ಸಿಟಿ ಗಾಂಧಿನಗರ ಆದಿ ಕರ್ನಾಟಕ ಅಭಿವೃದ್ಧಿ ಸಂಘದ ಉಪಾಧ್ಯಕ್ಷ ಚೆಲುವರಾಜ್, ಪ್ರಧಾನ ಕಾರ್ಯದರ್ಶಿ ಕೆವಿಶ್ವರಾಜ್, ಖಜಾಂಚಿ ಬಿ.ಸಾಗರ್, ಸಮಿತಿ ಸದಸ್ಯ ಮೋಹನ್ ಕುಮಾರ್ ಮತ್ತಿತರರಿದ್ದರು.

ಸಕಾಲಕ್ಕೆ ವಿದ್ಯಾರ್ಥಿವೇತನವಿಲ್ಲ...!

“ಈ ಸರ್ಕಾರದಲ್ಲಿ ತನ್ವೀರ್ ಸೇಠ್ ಹೆಂಡತಿಗೂ 2 ಸಾವಿರ ರೂ. ಬರುತ್ತದೆ. ನನ್ನ ಹೆಂಡತಿಗೂ 2 ಸಾವಿರ ರೂ. ಬರುತ್ತಿದೆ. ವಿದ್ಯಾರ್ಥಿ ವೇತನ ಮಾತ್ರ ಸಕಾಲಕ್ಕೆ ನೀಡುತ್ತಿಲ್ಲ. ನಾನು ಶಿಕ್ಷಣ ಸಚಿವನಾಗಿದ್ದಾಗ ದಲಿತ ಸಮುದಾಯದವರು ಶಾಲೆಯನ್ನು ತೆರೆದರೆ ಅವರಿಗೆ ಮೊದಲ ವರ್ಷದಲ್ಲಿಯೇ ಅನುದಾನ ಕೊಡಿಸುತ್ತಿದ್ದೆ. **–ಎಹೆಚ್.ವಿಶ್ವನಾಥ್, ವಿಧಾನಪರಿಷತ್ ಸದಸ್ಯ**

ಶತಮಾನೋತ್ಸವ ಸಂಭ್ರಮದಲ್ಲಿ ಮೈಸೂರಿನ ಎ.ಶಂಕರ ಚೆಟ್ಟಿ ಅಂಡ್ ಸನ್ಸ್ ಜ್ಯುವೆಲರ್ಸ್

ಗ್ರಾಹಕರಿಗೆ ರಿಯಾಯಿತಿ, ಲೋಗೋ ಬಿಡುಗಡೆ

ಮೈಸೂರು, ಆ.3(ಜಿಎ)–ಮೈಸೂರಿನ ಕೆ.ಆರ್.ವೃತ್ತದಲ್ಲಿರುವ ಎ.ಶಂಕರ ಚೆಟ್ಟಿ ಅಂಡ್ ಸನ್ಸ್ ಜ್ಯುವೆಲರ್ಸ್ 100 ವರ್ಷ ಪೂರೈಸಿದ್ದು, ಶತಮಾನೋತ್ಸವ ಅಂಗವಾಗಿ ಆ.9ರವರೆಗೆ 100 ದಿನಗಳ ಸಂಭ್ರಮಾಚರಣೆ ಮಾಡಲಾಗುತ್ತಿದೆ ಎಂದು ಸಂಸ್ಥೆಯ ಪಾಲುದಾರ ಆದರ್ಶ್ ಕೆ.ಮೂರ್ತಿ ತಿಳಿಸಿದರು.

ಎ.ಶಂಕರ ಚೆಟ್ಟಿ ಅಂಡ್ ಸನ್ಸ್ ಜ್ಯುವೆಲರ್ಸ್ ಆವರಣದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 100 ವರ್ಷಗಳ ಹಿಂದೆ ಆರಂಭವಾದ ನಮ್ಮ ಶಂಕರ ಚೆಟ್ಟಿ ಅಂಡ್ ಸನ್ಸ್ ಜ್ಯುವೆಲರ್ಸ್ ಶತಮಾನೋತ್ಸವ ಆಚರಿಸಿಕೊಳ್ಳುತ್ತಿದೆ. ಸಾಮಾನ್ಯರಿಂದ ರಾಜವಂಶಸ್ಥರ ನೆಚ್ಚಿನ ಸಂಸ್ಥೆ ನಮ್ಮದಾಗಿದ್ದು, ಜನರ ನಂಬಿಕೆ, ವಿಶ್ವಾಸದಿಂದ ಇಲ್ಲಿವರೆಗೂ ಬೆಳೆದು ಬಂದಿದೆ. ಶತಮಾನೋತ್ಸವ ಅಂಗವಾಗಿ 100 ದಿನಗಳವರೆಗೆ ಸಂಭ್ರಮಾಚರಣೆ ಮಾಡಲಾಗುತ್ತಿದೆ ಎಂದರು.

ಆಕರ್ಷಕ ರಿಯಾಯಿತಿ: ಶತಮಾನೋತ್ಸವ ಅಂಗವಾಗಿ ಆ.9ರವರೆಗೆ ಚಿನ್ನಾಭರಣ ಖರೀದಿಸುವ ಗ್ರಾಹಕರಿಗೆ ವಿಶೇಷ ರಿಯಾಯಿತಿ ನೀಡಲಾಗುತ್ತಿದೆ. ಪ್ರತಿ ಗ್ರಾಂ ಚಿನ್ನ ಖರೀದಿಗೆ 600 ರೂ, ಪ್ರತಿ ಕ್ಯಾರೆಟ್ ವಜ್ರಕ್ಕೆ 1 ಸಾವಿರ, ಕೆ.ಜಿ. ಬೆಳ್ಳಿಯ ಖರೀದಿಗೆ 1 ಸಾವಿರ ರೂ ರಿಯಾಯಿತಿ ನೀಡಲಾಗುತ್ತಿದೆ. ಜತೆಗೆ 5 ಸಾವಿರಕ್ಕಿಂತ ಮೇಲ್ಪಟ್ಟು ಚಿನ್ನಾಭರಣ ಖರೀದಿಸಿದ ಗ್ರಾಹಕರಿಗೆ ಕೂಪನ್ ನೀಡಲಾಗುತ್ತಿದ್ದು, ವಿಜೇತರಿಗೆ 100 ವಜ್ರದ ಉಂಗುರ, 1 ವಜ್ರದ ನೆಕ್ಲೆಸ್, ಗೋಲ್ಡ್ ಬಂಪರ್ ಬಹುಮಾನ, 5 ಕೆಜಿ ಬೆಳ್ಳಿ ಗೆಲ್ಲುವ ಅವಕಾಶವಿದೆ. ಆ.9ರಿಂದ ರಿಯಾಯಿತಿ ಬದಲಾಗುತ್ತದೆ. ಎ.ಶಂಕರ ಚೆಟ್ಟಿ ಅಂಡ್ ಸನ್ಸ್ ಆ್ಯಪ್ ಡೌನ್‌ಲೋಡ್ ಮಾಡಿಕೊಂಡರೆ ಉಚಿತವಾಗಿ 1 ಗ್ರಾಂ ಬೆಳ್ಳಿ ನೀಡಲಾಗುತ್ತದೆ. ಜತೆಗೆ ಆ್ಯಪ್‌ನಲ್ಲಿ ಹೂಡಿಕೆಯನ್ನೂ ಮಾಡಬಹುದು ಎಂದರು. ಗೋಷ್ಠಿಯಲ್ಲಿ ಪಾಲುದಾರರಾದ ಎ.ಜಿ.ಕೃಷ್ಣಮೂರ್ತಿ, ಲಕ್ಷ್ಮೀ ಮೂರ್ತಿ, ಪಲ್ಲವಿ ಉಪಸ್ಥಿತರಿದ್ದರು.



ಎ.ಶಂಕರ ಚೆಟ್ಟಿ ಅಂಡ್ ಸನ್ಸ್ ಜ್ಯುವೆಲರ್ಸ್ ಆವರಣದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಸಂಸ್ಥೆಯ ಪಾಲುದಾರ ಆದರ್ಶ್ ಕೆ.ಮೂರ್ತಿ ಮಾತನಾಡಿದರು.

ಇನ್ನರ್‌ವ್ಹೀಲ್ ಮೈಸೂರಿನ ನೂತನ ಪದಾಧಿಕಾರಿಗಳು



ಇನ್ನರ್‌ವ್ಹೀಲ್ ಕ್ಲಬ್ ಆಫ್ ಮೈಸೂರಿನ ನೂತನ ಪದಾಧಿಕಾರಿಗಳು.

ಮೈಸೂರು,ಆ.3–ಇನ್ನರ್‌ವ್ಹೀಲ್ ಕ್ಲಬ್ ಆಫ್ ಮೈಸೂರಿನ ನೂತನ ಪದಾಧಿಕಾರಿಗಳ ಪದಗ್ರಹಣ ಹಾಗೂ ಕ್ಲಬ್‌ನ 60ನೇ ವರ್ಷದ (ವಜ್ರ ಮಹೋತ್ಸವ) ವಾರ್ಷಿಕೋತ್ಸವವನ್ನು ನಿಕಟಪೂರ್ವ ಜಿಲ್ಲಾಧ್ಯಕ್ಷೆ (ಪಿಡಿಸಿ) ಗೀತಾ ಕುಟ್ಟಪ್ಪ ಉದ್ಘಾಟಿಸಿದರು.

ಸುಮತಿ ಘನತೆ ನೂತನ ಅಧ್ಯಕ್ಷರಾಗಿ, ಕಾರ್ಯದರ್ಶಿಯಾಗಿ ಡಾ.ದೀಪಾ ಶೇಖರ್ ಅಧಿಕಾರ ಸ್ವೀಕರಿಸಿದರು.

ಇದೇ ವೇಳೆ ಎನ್.ಆರ್.ಫೌಂಡೇಷನ್‌ನ ಸುಲೋಚನಾ ಗುರು ಅವರು 7 ಮಹಿಳಾ ಆಟೋಚಾಲಕರಿಗೆ ಆರ್ಥಿಕ ನೆರವು ನೀಡಿದರು. ಕಲ್ಪನಾ ಪ್ರಸಾದ್ ಅವರು 10 ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಸಹಾಯ ನೀಡಿದರು. ವಜ್ರ ಮಹೋತ್ಸವದ ಅಂಗವಾಗಿ ಕ್ಲಬ್‌ನಿಂದ ಹಲವಾರು ಯೋಜನೆಗಳನ್ನು ಕೈಗೆತ್ತಿಕೊಳ್ಳಲು ಯೋಜಿಸಲಾಯಿತು. ಇದೇ ವೇಳೆ ಕ್ಲಬ್‌ನ ಪ್ರಥಮ ಜಿಲ್ಲಾ ಅಧ್ಯಕ್ಷ, ಇನ್ನರ್‌ವ್ಹೀಲ್ ಕ್ಲಬ್ಸ್ ಆಫ್ ಇಂಡಿಯಾ, ಶ್ರೀಲಂಕಾದ ಮಾಜಿ ಅಸೋಸಿಯೇಷನ್ ಅಧ್ಯಕ್ಷ ಶೀಲಾ ಇರಾನಿ ಅವರಿಗೆ ನುಡಿ ನಮನ ಸಲ್ಲಿಸಲಾಯಿತು.

ನಾಲ್ವಡಿ ಕೃಷ್ಣರಾಜ ಒಡೆಯರ್‌ಗೆ ಸಿದ್ದರಾಮಯ್ಯ ಹೋಲಿಕೆ ಹೇಳಿಕೆ ಖಂಡಿಸಿ

ಡಾ.ಯತೀಂದ್ರ ವಿರುದ್ಧ ರಾಜ್ಯ ಭೀಮ್‌ಸೇನೆ ಪ್ರತಿಭಟನೆ



ನಾಲ್ವಡಿ ಕೃಷ್ಣರಾಜ ಒಡೆಯರ್ ಕುರಿತು ಎಂಎಲ್‌ಸಿ ಡಾ.ಯತೀಂದ್ರ ಹೇಳಿಕೆ ಖಂಡಿಸಿ ಕರ್ನಾಟಕ ರಾಜ್ಯ ಭೀಮ್ ಸೇನೆ ವತಿಯಿಂದ ಭಾನುವಾರ ಪುರಭವನದ ಮುಂಭಾಗದ ಅಂಬೇಡ್ಕರ್ ಪ್ರತಿಮೆ ಬಳಿ ಪ್ರತಿಭಟನೆ ನಡೆಸಲಾಯಿತು.

ಮೈಸೂರು, ಆ.3(ಜಿಎ)– ನಾಲ್ವಡಿ ಕೃಷ್ಣರಾಜ ಒಡೆಯರ್ ಅವರನ್ನು ಮುಖ್ಯಮಂತ್ರಿ ಸಿದ್ದರಾಮಯ್ಯರಿಗೆ ಹೋಲಿಕೆ ಮಾಡಿ ಎಂಎಲ್‌ಸಿ ಡಾ.ಯತೀಂದ್ರ ನೀಡಿದ್ದ ಹೇಳಿಕೆ ಖಂಡಿಸಿ ಕರ್ನಾಟಕ ರಾಜ್ಯ ಭೀಮ್ ಸೇನೆ ವತಿಯಿಂದ ಪುರಭವನದ ಮುಂಭಾಗದ ಅಂಬೇಡ್ಕರ್ ಪ್ರತಿಮೆ ಬಳಿ ಪ್ರತಿಭಟನೆ ನಡೆಸಲಾಯಿತು.

ರಾಜಾಡಳಿತದಲ್ಲಿದ್ದ ನಾಲ್ವಡಿ ಅವರಿಗೆ ಸಿದ್ದರಾಮಯ್ಯ ಅವರನ್ನು ಹೋಲಿಕೆ ಮಾಡುವುದು ಸರಿಯಲ್ಲ. ಮಲ್ಲಿಕಾರ್ಜುನ ಖರ್ಗೆ, ಡಾ.ಜಿ.ಪರಮೇಶ್ವರ್ ಅವರನ್ನು ತುಳಿದು ಮುಖ್ಯಮಂತ್ರಿಯಾದ ಸಿದ್ದರಾಮಯ್ಯ ಅವರಿಗೆ ನಾಲ್ವಡಿಯವರಿಗೆ ಸರಿಸಾಟಿಯಾಗಬಲ್ಲ ಯಾವ ಯೋಗ್ಯತೆಯೂ ಇಲ್ಲ ಎಂದು ಪ್ರತಿಭಟನಾಕಾರರು ಕಿಡಿಕಾರಿದರು.

ನಾಲ್ವಡಿ ಅವರು ಅಸ್ಪೃಶ್ಯರಿಗೆ 800 ಶಾಲೆ ತೆರೆದಿದ್ದರು. ಮೊರಾರ್ಜಿ ದೇಸಾಯಿ, ಏಕಲವ್ಯ ವಸತಿ ಶಾಲೆಗಳಲ್ಲಿ ಈ ವರ್ಷ 37,686 ವಿದ್ಯಾರ್ಥಿಗಳು ಎಸ್‌ಎಸ್‌ಎಲ್‌ಸಿಯಲ್ಲಿ ಪಾಸಾಗಿದ್ದಾರೆ. ಇಷ್ಟು ವರ್ಷ ವಸತಿ ಸಹಿತ ಶಾಲೆಯಲ್ಲಿ ಓದಿರುವ ವಿದ್ಯಾರ್ಥಿ ಪಿಯುಸಿ ತರಗತಿಗಳನ್ನು ಅದೇ ವಸತಿ ಶಾಲೆಗಳಲ್ಲಿ ಓದಿದರೆ ಆ ವಿದ್ಯಾರ್ಥಿ ಉನ್ನತ ಮಟ್ಟಕ್ಕೆ ತಲುಪುತ್ತಾರೆ ಎಂಬ ವಿವೇಚನೆಯಿಲ್ಲದ ಸಿದ್ದರಾಮಯ್ಯ 7 ಶಾಲೆಗಳನ್ನು ಉನ್ನತೀಕರಿಸಿ ಪಿಯುಸಿಗೆ 5176 ಮಕ್ಕಳು ಮಾತ್ರ ದಾಖಲಾಗಿದ್ದಾರೆ. ಉಳಿದ 32000 ವಿದ್ಯಾರ್ಥಿಗಳು ಬೇರೆ ಕಾಲೇಜುಗಳಿಗೆ ದಾಖಲಾಗುತ್ತಿದ್ದಾರೆ. ಸಿದ್ದರಾಮಯ್ಯ ಅವರಿಗೆ ನಿಜವಾಗಲೂ ಆ ವಿದ್ಯಾರ್ಥಿಗಳ ಮೇಲೆ ಕಾಳಜಿ ಇದ್ದಿದ್ದರೆ ನಾಲ್ವಡಿ ಅವರಂತೆ ಶೈಕ್ಷಣಿಕ ಅಭಿವೃದ್ಧಿಗೆ ಶ್ರಮಿಸುತ್ತಿದ್ದರು. 426 ಶಾಲೆಗಳನ್ನು ಅಭಿವೃದ್ಧಿಪಡಿಸಿ ಪಿಯುಸಿ ತರಗತಿಗಳನ್ನು ಅದೇ ವಸತಿಸಹಿತ ಶಾಲೆಗಳಲ್ಲಿ ತೆರೆಯುತ್ತಿದ್ದರು. ವಿದ್ಯಾರ್ಥಿಗಳಿಗೆ ತೊಂದರೆ ಕೊಡುತ್ತಿರಲಿಲ್ಲ ಎಂದು ಆಕ್ರೋಶ ಹೊರಹಾಕಿದರು.

ನಾಲ್ವಡಿ ಅವರು ತಮ್ಮ ಮನೆಯಲ್ಲಿದ್ದ ಆಭರಣಗಳನ್ನು ಮಾರಾಟ ಮಾಡಿ ಕೆಆರ್‌ಎಸ್ ಆಣೆಕಟ್ಟೆ ಕಟ್ಟಿದರು. ಆದರೆ, ನೀವು ಎಸ್‌ಸಿಪಿ, ಟಿಎಸ್‌ಪಿ ಅನುದಾನ ಸುಮಾರು 50000 ಕೋಟಿಯನ್ನು ಗ್ಯಾರಂಟಿಗಳಿಗೆ ಕೊಟ್ಟಿದ್ದೀರಿ. ನಾಲ್ವಡಿ ಅವರು ಮೈಸೂರು, ಬೆಂಗಳೂರು ಗ್ರಾಮಾಂತರ, ಕೋಲಾರ, ತುಮಕೂರು ಇನ್ನಿತರ ಕರ್ನಾಟಕದ ಭಾಗದಲ್ಲಿ ಲಕ್ಷಾಂತರ ಜನಕ್ಕೆ ಸ್ವಾಭಿಮಾನದ ಬದುಕು ಕಟ್ಟಿಕೊಳ್ಳಲು ಎಕರೆಗಟ್ಟಲೆ ಭೂಮಿಯನ್ನು ದಾನವಾಗಿ ನೀಡಿದ್ದಾರೆ. ನಿಮ್ಮ ತಂದೆಯ ಸರ್ಕಾರ ಎಸ್‌ಸಿ, ಎಸ್‌ಟಿ ಅಭಿವೃದ್ಧಿ ನಿಗಮಗಳಲ್ಲಿರುವ ಭೂ ಖರೀದಿ ಯೋಜನೆಗೆ ಹಣವನ್ನೇ ನೀಡದೆ ವಂಚನೆ ಮಾಡಿದ್ದಾರೆ. ಇಂತಹ ಸಾವಿರಾರು ಯೋಜನೆಗಳನ್ನು ತಂದು ಮೈಸೂರು ಸಂಸ್ಥಾನವನ್ನು ನಂ.1 ಸ್ಥಾನಕ್ಕೆ ಕೊಂಡೊಯ್ದಂತಹ ನಾಲ್ವಡಿ ಕೃಷ್ಣರಾಜ ಒಡೆಯರ್ ಕೊಡುಗೆಗಳು ನಮ್ಮ ಕರ್ನಾಟಕಕ್ಕೆ ಅಗಣಿತವಾದದ್ದು. ಹೀಗಾಗಿ ಕೂಡಲೇ ಯತೀಂದ್ರ ಸಿದ್ದರಾಮಯ್ಯ ಅವರು ಅವರ ಬಗ್ಗೆ ತಿಳಿದುಕೊಳ್ಳದೆ ಮತ್ತೊಮ್ಮೆ ಮಾತನಾಡಬಾರದು. ಕೂಡಲೇ ಕ್ಷಮೆ ಯಾಚಿಸಬೇಕೆಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ರಾಜ್ಯಾಧ್ಯಕ್ಷ ಎಸ್.ಸರ್ವೇಶ್, ಶಿವಣ್ಣ, ಮಲ್ಲೇಶ್, ಹರೀಶ್ ಮತ್ತಿತರರು ಪಾಲ್ಗೊಂಡಿದ್ದರು.

ಆಧ್ಯಾತ್ಮ, ಧರ್ಮ 'ಹಿಂದುತ್ವ'ದ ಮೂಲ ಸಂಗತಿ

- ಪ್ರಜ್ಞಾ ಪ್ರವಾಹ ಅಖಿಲ ಭಾರತೀಯ ಸಹ ಸಂಯೋಜಕ ರಘುನಂದನ
- 'ಹಿಂದುತ್ವ–ವರ್ತಮಾನದ ಸಂದರ್ಭದಲ್ಲಿ ಹಿಂದುತ್ವದ ಪ್ರಸ್ತುತತೆ' ಪುಸ್ತಕ ಬಿಡುಗಡೆ



ಮೈಸೂರಿನ ಮಾಧವ ಕೃಪಾದಲ್ಲಿ 'ಹಿಂದುತ್ವ' ಪುಸ್ತಕ ಬಿಡುಗಡೆ ಮಾಡಲಾಯಿತು. (ಎಡದಿಂದ) ಪ್ರಜ್ಞಾ ಪ್ರವಾಹ ಅಖಿಲ ಭಾರತೀಯ ಸಹ ಸಂಯೋಜಕ ರಘುನಂದನ, ವಿಜಯವಿಠ್ಠಲ ವಿದ್ಯಾಸಂಸ್ಥೆಗಳ ಕಾರ್ಯದರ್ಶಿ ವಾಸುದೇವ ಭಟ್ ಚಿತ್ರದಲ್ಲಿದ್ದಾರೆ.

ಮೈಸೂರು,ಆ.3(ಪಿಎಂ)– ಆಧ್ಯಾತ್ಮ ಮತ್ತು ಧರ್ಮ, ಹಿಂದುತ್ವ ಮೂಲ ಸಂಗತಿ ಎಂದು ಪ್ರಜ್ಞಾ ಪ್ರವಾಹ ಅಖಿಲ ಭಾರತೀಯ ಸಹ ಸಂಯೋಜಕ ರಘುನಂದನ ಹೇಳಿದರು.

ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ಮಾಧವ ಕೃಪಾದಲ್ಲಿ ಮಂಥನ ಮೈಸೂರು ವೇದಿಕೆ ವತಿಯಿಂದ ಹಮ್ಮಿಕೊಂಡಿದ್ದ 'ಹಿಂದುತ್ವ–ವರ್ತಮಾನದ ಸಂದರ್ಭದಲ್ಲಿ ಹಿಂದುತ್ವದ ಪ್ರಸ್ತುತತೆ' ಪುಸ್ತಕ ಬಿಡುಗಡೆ ಹಾಗೂ ಸಂವಾದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಧರ್ಮ, ಸಂಸ್ಕೃತಿ ಮತ್ತು ಸಮಾಜದ ಸಮಾಗಮವೇ ಹಿಂದುತ್ವ. ಆಧ್ಯಾತ್ಮ ಎಂಬುದು ಹಿಂದುತ್ವದ ಮುಖ್ಯ ಅಂಶ. ಆಧ್ಯಾತ್ಮವು ವೈಯಕ್ತಿಕವಾಗಿ ತನ್ನನ್ನು ತಾನು ಅರಿಯಲು ಸಹಕಾರಿಯಾಗುತ್ತದೆ. ಧರ್ಮವು ತಾನಲ್ಲದೆ, ಸುತ್ತಮುತ್ತಲ ವಾತಾವರಣ ಹಾಗೂ ಅದರೊಂದಿಗೆ ವ್ಯಕ್ತಿಯೊಬ್ಬ ನಡೆದುಕೊಳ್ಳುವ ರೀತಿ ನೀತಿಯನ್ನು ಪ್ರತಿನಿಧಿಸುತ್ತದೆ. ಆಧ್ಯಾತ್ಮ ನಮ್ಮ ಸಮಸ್ತ ತತ್ವಜ್ಞಾನದಲ್ಲಿ ಚರ್ಚೆಯಾಗಿರುವ ವಿಷಯ. ಭಾರತ ಮೂಲದ ಎಲ್ಲಾ ರೀತಿಯ ತತ್ವಜ್ಞಾನವು ನಾನು ಯಾರು ಎಂಬುದಕ್ಕೆ 'ಆತ್ಮ' ಎಂದು ಉಲ್ಲೇಖಿಸಿವೆ. ಸಾಕಷ್ಟು ಜನರು, ಆತ್ಮವನ್ನು ವಸ್ತುವೆಂದು ಭಾವಿಸಿ ಅದು ಕೈಗೆ ಸಿಗಬೇಕು ಹಾಗೂ ಕಾಣಬೇಕು ಎಂದುಕೊಳ್ಳುತ್ತಾರೆ. ಆದರೆ ಇದು ಕಾಣುವ–ಕೇಳುವ ವಿಷಯವಲ್ಲ. ಇದೊಂದು ತತ್ವ ಎಂದು ವಿಶ್ಲೇಷಿಸಿದರು.

ಕೇವಲ 80 ಪುಟಗಳ ಈ ಪುಸ್ತಕವು ಹಿಂದುತ್ವದ ಪ್ರಸ್ತುತಿ ಹಾಗೂ ಪ್ರಸ್ತುತತೆಯನ್ನು ಅನಾವರಣಗೊಳಿಸುತ್ತದೆ. ವಿಷಯಕ್ಕೆ ತಕ್ಕಂತೆ ಹೇಳಬೇಕಾದ ಮೂಲಭೂತ ಸಂಗತಿಗಳನ್ನು ಇಲ್ಲಿ ಹೇಳಲಾಗಿದೆ. ನನ್ನ ಅಭಿಪ್ರಾಯದಲ್ಲಿ ನಾವು ಖಂಡನೆ ಮಾಡುವುದಕ್ಕಿಂತ ಮುಂಚೆ ಮಂಡನೆಯನ್ನು ಸರಿಯಾಗಿ ಮಾಡಬೇಕು. ಹೇಳುವುದು ಸ್ಪಷ್ಟವಾಗಿರಬೇಕು. ಹಿಂದೂ ಅರ್ಥಶಾಸ್ತ್ರ ಪುಸ್ತಕ ಕುರಿತು ಒಬ್ಬ ವಿದ್ಯಾರ್ಥಿ ಹಿಂದೂ ಎಕಾನಮಿಕ್ಸ್ ಹೇಗೆ ಇರಲು ಸಾಧ್ಯವೆಂದು ಪ್ರಶ್ನೆ ಮಾಡಿದ್ದ. ಅದೇ ರೀತಿಯಾದರೆ 'ಹಿಂದೂ ಊಟ' ಎಂದು ಮಾಡುತ್ತೀರಿ ಎಂದಿದ್ದ. ಅಂದರೆ ಎಕಾನಮಿಕ್ಸ್‌ನಲ್ಲಿ 'ಹಿಂದೂ ಎಕಾನಮಿಕ್ಸ್' ಎಂದೇನು ಇಲ್ಲ ಎಂಬುದು ಆತನ ನಿಲುವು. ಆದರೆ ಸ್ವಲ್ಪ ಎಕಾನಮಿಕ್ ಪ್ರಗತಿ ಕುಂಠಿತವಾದರೆ 'ಹಿಂದೂ ರೇಟ್' ಎಂದು ಬಳಸುತ್ತಾರೆ. ಅಂದರೆ ಟೀಕಿಸಲು ಹಿಂದು ಉಂಟು. ಮೆಚ್ಚಿಕೊಳ್ಳಲು ಹಿಂದು ಬೇಕಾಗಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಅಂದರೆ ಅರ್ಥಶಾಸ್ತ್ರದಲ್ಲೂ ಹಿಂದೂ ಚಿಂತನೆ ಇದೆ ಎಂಬುದನ್ನು ಒಪ್ಪಿಕೊಳ್ಳುವುದಿಲ್ಲ. ಆದರೆ ಟೀಕೆ ಮಾಡಲು ಹಿಂದೂ ಬಳಸಿಕೊಳ್ಳುತ್ತಾರೆ. ಹಿಂದುತ್ವ ನಂಬಿದ ನಮಗೆ ವಿಶ್ವಾಸ ಇರಬೇಕು. ಹಿಂದು ಶಬ್ದದ ಬಗ್ಗೆ ನಮಗೆ ಎಂದೂ ಗೊಂದಲವಿಲ್ಲ. ನಾವು 'ಹಿಂದು' ಎಂದು ಹೇಳಲು ಶುರು ಮಾಡಿದಾಗ, ಕೆಲವರು 'ಹಿಂದುಯಿಸಂ' ಎನ್ನುವುದು ಸರಿ. ಆದರೆ 'ಹಿಂದುತ್ವ' ಎನ್ನುವುದು ಸರಿ ಇಲ್ಲ ಎಂದರು. ಕೆಲ ವರ್ಷಗಳ ನಂತರ, ಅವರು 'ಹಿಂದು ಧರ್ಮ ಸರಿ. ಆದರೆ ಹಿಂದುತ್ವ ಸರಿ ಇಲ್ಲ' ಎಂದರು. ನಂತರದ ದಿನಗಳಲ್ಲಿ ವಿವೇಕಾನಂದರು ಪ್ರತಿಪಾದಿಸಿದ ಹಿಂದುತ್ವ ಸರಿ ಇದೆ. ಆದರೆ ಆರ್‌ಎಸ್‌ಎಸ್ ಹಿಂದುತ್ವ ಸರಿಯಲ್ಲ ಎಂದು ಹೇಳಲು ಶುರು ಮಾಡಿದರು. ಅಂದರೆ ಇಲ್ಲಿ ಅವರು ಸೋಲೊಪ್ಪಿಕೊಳ್ಳಲಾಗದೇ ಆರ್‌ಎಸ್‌ಎಸ್ ಹಿಂದುತ್ವವೇ ಬೇರೆ. ವಿವೇಕಾನಂದರ ಹಿಂದುತ್ವವೇ ಬೇರೆ ಎನ್ನುವ ಮೂಲಕ ಗೊಂದಲಗಳನ್ನು ಸೃಷ್ಟಿಸುತ್ತಾರೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಅವರಿಗೂ ಗೊಂದಲ ಇಲ್ಲ, ನಮಗೂ ಗೊಂದಲ ಇಲ್ಲ. ಆದರೆ ಅವರು ಒಪ್ಪಿಕೊಳ್ಳಲು ತಯಾರಿಲ್ಲ. ಯಾವುದೇ ಶಬ್ದವಾಗಲಿ ಕಾಲಮಾನಕ್ಕೆ ತಕ್ಕಂತೆ ಅರ್ಥಗಳು ಬದಲಾಗುತ್ತದೆ. ಹಿಂದುತ್ವಕ್ಕೆ ಸಾಮಾನ್ಯವಾಗಿ ಪರ್ಯಾಯವಾಗಿ ಬಳಸುವ ಶಬ್ದಗಳೆಂದರೆ ಆರ್ಯ, ಸನಾತನ ಎನ್ನುವುದಾಗಿದೆ ಎಂದು ಹೇಳಿದರು.

ಇಂದು 'ಹಿಂದು' ಎನ್ನುವ ಶಬ್ದಕ್ಕೆ ಭೂಮಿಗಿಂತ ದೊಡ್ಡ ವಿಸ್ತಾರವಾದ ಅರ್ಥವಿದೆ. ಯಾರುಬೇಕಾದರೂ ಹಿಂದು ಆಗಬಹುದು. ಭಾರತೀಯ ಅಲ್ಲದಿದ್ದರೂ ಹಿಂದು ಆಗಬಹುದು. ಹಾಗಾಗಿ ಹಿಂದು ಎನ್ನುವುದಕ್ಕೆ ದೊಡ್ಡದಾದ ತತ್ವ, ಚಿಂತನಾ ಕ್ರಮದ ನಡವಳಿಕೆಯ ಸ್ವರೂಪವೂ ಇದೆ. ಈ ಚಿಂತನೆ ಮತ್ತು ಜೀವನಕ್ರಮಕ್ಕೆ ಧರ್ಮ ಮತ್ತು ಸಂಸ್ಕೃತಿ ಎಂದು ಕರೆಯುತ್ತೇವೆ. ಎಲ್ಲಾ ಕಾಲಕ್ಕೆ ಸಲ್ಲುವುದೇ ಧರ್ಮ. ಸನಾತನ ಎನ್ನುವುದು ಧರ್ಮದ ಗುಣವೇ ಹೊರತು ಧರ್ಮದ ಹೆಸರಲ್ಲ ಎಂದರು. ಇದಕ್ಕೂ ಮುನ್ನ ಪುಸ್ತಕ ಬಿಡುಗಡೆ ಮಾಡಲಾಯಿತು. ವಿಜಯ ವಿಠ್ಠಲ ವಿದ್ಯಾಸಂಸ್ಥೆಗಳ ಕಾರ್ಯದರ್ಶಿ ವಾಸುದೇವಭಟ್ ಮತ್ತಿತರರು ಹಾಜರಿದ್ದರು.

ಮೈಸೂರು ಮಿತ್ರ ಸೋಮವಾರ 4 ಆಗಸ್ಟ್ 2025

ನಾಳೆ ಮತ ಕಳ್ಳತನ ವಿರುದ್ಧ ಬೆಂಗಳೂರಲ್ಲಿ ಬೃಹತ್ ಪ್ರತಿಭಟನೆ

ಜಿಲ್ಲೆಯಿಂದ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಲು ಉಸ್ತುವಾರಿ ಸಚಿವ ಚಲುವರಾಯಸ್ವಾಮಿ ಮನವಿ

ಮಂಡ್ಯ,ಆ.3– ಲೋಕಸಭಾ ಚುನಾವಣೆಯಲ್ಲಿ ಮತ ಕಳ್ಳತನ ನಡೆದಿರುವ ಕುರಿತು ರಾಹುಲ್ ಗಾಂಧಿ ನೇತೃತ್ವದಲ್ಲಿ ಆ.5ರಂದು ಬೆಳಿಗ್ಗೆ 11ಕ್ಕೆ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಬೃಹತ್ ಪ್ರತಿಭಟನೆ ನಡೆಸಲಾಗುವುದು ಎಂದು ಜಿಲ್ಲಾ ಉಸ್ತುವಾರಿ ಸಚಿವ ಎನ್. ಚಲುವರಾಯಸ್ವಾಮಿ ಹೇಳಿದರು.



ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡುತ್ತಿರುವ ಸಚಿವ ಚಲುವರಾಯಸ್ವಾಮಿ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪ್ರತಿಭಟನೆಯಲ್ಲಿ ಕಾಂಗ್ರೆಸ್ ರಾಜ್ಯ ಉಸ್ತುವಾರಿ ಸುರ್ಜೇವಾಲ, ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸೇರಿದಂತೆ ಎಲ್ಲ ಸಚಿವರು, ಶಾಸಕರು ಸೇರಿದಂತೆ ರಾಜ್ಯಾದ್ಯಂತ ಕಾಂಗ್ರೆಸ್ ನಾಯಕರು, ಮಾಜಿ ಶಾಸಕರು, ಸಚಿವರು, ಮುಖಂಡರು, ಕಾರ್ಯಕರ್ತರು ಭಾಗವಹಿಸಲಿದ್ದಾರೆ ಎಂದು ತಿಳಿಸಿದರು.

ಜಿಲ್ಲೆಯಿಂದ ಪಕ್ಷದ ಪ್ರತಿಯೊಬ್ಬ ಕಾರ್ಯಕರ್ತರು ಭಾಗವಹಿಸಬೇಕು. ಜಿಲ್ಲೆಯಿಂದ ಕನಿಷ್ಠ 5 ಸಾವಿರ ಜನರು ಪ್ರತಿಭಟನೆಯಲ್ಲಿ ಭಾಗಿಯಾಗಲಿದ್ದಾರೆ. ರಾಜ್ಯಾದ್ಯಂತ ಸುಮಾರು 70 ಸಾವಿರದಿಂದ 1 ಲಕ್ಷ ಮಂದಿ ಭಾಗವಹಿಸುವ ಸಾಧ್ಯತೆ ಇದೆ. ಹೆಚ್ಚಿನ ಸಂಖ್ಯೆಯಲ್ಲಿ ಯುವಕರು ಭಾಗಿಯಾಗಿ ರಾಷ್ಟ್ರದ ಸ್ಥಿತಿಗತಿಯ ಕುರಿತು ತಿಳಿದುಕೊಳ್ಳಬೇಕು ಎಂದರು.

ರಾಹುಲ್ ಗಾಂಧಿಯವರು ಮತ ಕಳ್ಳತನದ ಕುರಿತಾಗಿ ಗಂಭೀರ ಚರ್ಚೆ ನಡೆಸಲಿದ್ದಾರೆ. ಮತ ಕಳ್ಳತನದ ಕುರಿತಾಗಿ ದಾಖಲೆಯ ಸಮೇತ ಸತ್ಯ ಬಿಚ್ಚಿಡಲಿದ್ದಾರೆ. ರಾಷ್ಟ್ರದಲ್ಲಿ ಬಿಜೆಪಿ ಅಧಿಕಾರದಲ್ಲಿರುವುದರಿಂದ ಚುನಾವಣಾ ಆಯೋಗ ಅದರ ದುರುಪಯೋಗ ಮಾಡಿಕೊಳ್ಳುತ್ತಿದ್ದಾರೆ. ಈ ಹಿಂದೆಯೂ ಚುನಾವಣಾ ಆಯೋಗದ ವಿರುದ್ಧ ಆರೋಪ ಮಾಡಿದ್ದೇವೆ. ಆಗ ಯಾರು ಅಷ್ಟೊಂದು ಗಂಭೀರವಾಗಿ ಪರಿಗಣಿಸಿಲ್ಲ. ನಮ್ಮವರು ಸ್ವಲ್ಪ ಉದಾಸೀನ ತೋರಿದ್ದರಿಂದ ಹಾಗೂ ಚುನಾವಣಾ ಆಯೋಗದಿಂದ ಅಕ್ರಮ ನಡೆಯಲ್ಲ ಎಂಬ ನಂಬಿಕೆ ಇತ್ತು. ಆದರೆ ಈಗ ಚುನಾವಣೆಯಲ್ಲಿ ಅಕ್ರಮವಾಗಿರುವುದು ಕಂಡು ಬಂದಿದೆ ಎಂದು ಹೇಳಿದರು.

ಚುನಾವಣಾ ಆಯೋಗವನ್ನು ಬಳಸಿಕೊಂಡಿರುವುದು ಪ್ರಜಾಪ್ರಭುತ್ವಕ್ಕೆ ಮಾರಕ. ಪ್ರಜಾಪ್ರಭುತ್ವ ಉಳಿಯಬೇಕು ಎಂದರೆ ಆಡಳಿತದಲ್ಲಿ ಪಾರದರ್ಶಕತೆ ಕಾಪಾಡಬೇಕಾಗಿದೆ. ಇವಿಎಂ ಯಂತ್ರದ ಅನುಮಾನವೇ ಬೇರೆ ಮತಪಟ್ಟಿ ಅಕ್ರಮವೇ ಬೇರೆ ಎಂದು ತಿಳಿಸಿದರು.

ರಾಜ್ಯದಲ್ಲಿ ಪೂರ್ಣ ಪ್ರಮಾಣದ ರೈತರ ಆತ್ಮಹತ್ಯೆಯನ್ನು ನಿಲ್ಲಿಸಬೇಕು ಅಂದುಕೊಂಡಿದ್ದೇವೆ ಅದಕ್ಕಾಗಿಯೇ ನಾವು ಐದು ಗ್ಯಾರಂಟಿ ಕೊಟ್ಟಿದ್ದೇವೆ. ಆದರೂ ಆತ್ಮಹತ್ಯೆ ಪ್ರಕರಣಗಳು ಮುಂದುವರೆಯುತ್ತಿವೆ. ಯಾವ ಕಾರಣಕ್ಕಾಗಿ ಆತ್ಮಹತ್ಯೆ ಆಗುತ್ತಿವೆ ಎಂಬುದು ನಿಖರವಾಗಿ ತಿಳಿದುಬಂದಿಲ್ಲ. ಈ ಕುರಿತು ಪೊಲೀಸರಿಂದ ಒಂದು ತಂಡ ರಚಿಸಿ ತನಿಖೆ ಮಾಡಿಸಿದ್ದೇವೆ. ಇದರ ಬಗ್ಗೆ ಮುಖ್ಯಮಂತ್ರಿಯೊಂದಿಗೆ ಚರ್ಚೆ ನಡೆಸಲಾಗುವುದು ಎಂದು ಹೇಳಿದರು.

ಮುಖ್ಯಮಂತ್ರಿಗಳು ಖಾಸಗಿ ಸಂಸ್ಥೆಯಿಂದ ತನಿಖೆ ನಡೆಸಲು ಸೂಚನೆ ನೀಡಿದ್ದಾರೆ. ಪ್ರಸ್ತುತ ರೈತ ಆತ್ಮಹತ್ಯೆ ಪ್ರಕರಣಗಳ ಸಂಖ್ಯೆ ಕಡಿಮೆ ಆಗಿದೆ. ಆದರೆ ಕಡಿಮೆ ಆಗಿರೋದು ಖುಷಿ ತಂದಿಲ್ಲ. ರೈತರ ಆತ್ಮಹತ್ಯೆ ಸಂಪೂರ್ಣ ನಿಲ್ಲಬೇಕು ಎಂದರು.

ರಾಜ್ಯ ಸರ್ಕಾರಕ್ಕೆ ರಸಗೊಬ್ಬರ ಕಳುಹಿಸುವುದು ಕೇಂದ್ರ ಸರ್ಕಾರ. ರಸಗೊಬ್ಬರ ತಯಾರಿಕೆ ಮಾಡುವ, ದರ ನಿಗದಿ, ಆಮದು ಮಾಡಿಕೊಳ್ಳುವ ಅಧಿಕಾರ ಕೇಂದ್ರ ಸರ್ಕಾರಕ್ಕಿದೆ. ವಿರೋಧ ಪಕ್ಷದ ನಾಯಕ ಆರ್. ಅಶೋಕ್ ಅವರಿಗೆ ಇದರ ಕುರಿತಾಗಿ ಸಾಮಾನ್ಯ ಜ್ಞಾನ ಇಲ್ಲ. ಕೇಂದ್ರದಿಂದ ರಾಜ್ಯ ಸರ್ಕಾರಕ್ಕೆ ನೀಡಬೇಕಿದ್ದ 1.25 ಸಾವಿರ ಮೆಟ್ರಿಕ್ ಟನ್ ರಸಗೊಬ್ಬರವನ್ನು ಕೇಂದ್ರ ನೀಡಿಲ್ಲ. ಇದರಿಂದ ಸಣ್ಣ ಪ್ರಮಾಣದಲ್ಲಿ ರಸಗೊಬ್ಬರ ವಿತರಣೆಯಲ್ಲಿ ವಿಳಂಬವಾಗಿದೆ ಅಷ್ಟೇ ಎಂದರು.

ಸುದ್ದಿಗೋಷ್ಠಿಯಲ್ಲಿ ಚೆಸ್ಕಾಂ ಅಧ್ಯಕ್ಷ ಹಾಗೂ ಶಾಸಕ ಎ.ಬಿ.ರಮೇಶ ಬಂಡಿಸಿದ್ದೇಗೌಡ, ಮೈಷುಗರ್ ಅಧ್ಯಕ್ಷ ಸಿ.ಡಿ.ಗಂಗಾಧರ್, ಜಿಲ್ಲಾ ಮಹಿಳಾ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷೆ ಶುಭಾದಾಯಿನಿ, ಜಿಲ್ಲಾ ಕಾಂಗ್ರೆಸ್ ಕಾರ್ಯಾಧ್ಯಕ್ಷ ಚಿದಂಬರ್ ಸೇರಿದಂತೆ ಮತ್ತಿತರರಿದ್ದರು.

ಗ್ಯಾರಂಟಿ ಕೊಟ್ಟರೂ ನಿಲ್ಲದ ರೈತರ ಆತ್ಮಹತ್ಯೆ ತನಿಖೆಗೆ ಪೊಲೀಸರ ತಂಡ ರಚನೆ

ಮಂಡ್ಯ, ಆ.3– ರಾಜ್ಯದಲ್ಲಿ ಪೂರ್ಣ ಪ್ರಮಾಣದ ರೈತರ ಆತ್ಮಹತ್ಯೆಯನ್ನು ನಿಲ್ಲಿಸಬೇಕು ಅಂದುಕೊಂಡಿದ್ದೇವೆ. ಅದಕ್ಕಾಗಿಯೇ ನಾವು ಐದು ಗ್ಯಾರಂಟಿ ಕೊಟ್ಟಿದ್ದೇವೆ. ಆದರೂ ಆತ್ಮಹತ್ಯೆ ಪ್ರಕರಣಗಳು ಮುಂದುವರೆಯುತ್ತಿವೆ. ಯಾವ ಕಾರಣಕ್ಕಾಗಿ ಆತ್ಮಹತ್ಯೆ ಆಗುತ್ತಿವೆ ಎಂಬುದು ನಿಖರವಾಗಿ ತಿಳಿದುಬಂದಿಲ್ಲ. ಈ ಕುರಿತು ಪೊಲೀಸರಿಂದ ಒಂದು ತಂಡ ರಚಿಸಿ ತನಿಖೆ ಮಾಡಿಸಿದ್ದೇವೆ. ಇದರ ಬಗ್ಗೆ ಮುಖ್ಯಮಂತ್ರಿಯೊಂದಿಗೆ ಚರ್ಚೆ ನಡೆಸಲಾಗುವುದು ಎಂದು ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ಹೇಳಿದರು.

ಮಂಡ್ಯ ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮುಖ್ಯಮಂತ್ರಿಗಳು ಖಾಸಗಿ ಸಂಸ್ಥೆಯಿಂದ ತನಿಖೆ ನಡೆಸಲು ಸೂಚನೆ ನೀಡಿದ್ದಾರೆ. ಪ್ರಸ್ತುತ ರೈತ ಆತ್ಮಹತ್ಯೆ ಪ್ರಕರಣಗಳ ಸಂಖ್ಯೆ ಕಡಿಮೆ ಆಗಿದೆ. ಆದರೆ ಕಡಿಮೆ ಆಗಿರೋದು ಖುಷಿ ತಂದಿಲ್ಲ. ರೈತರ ಆತ್ಮಹತ್ಯೆ ಸಂಪೂರ್ಣ ನಿಲ್ಲಬೇಕು ಎಂದರು. ರಾಜ್ಯ ಸರ್ಕಾರಕ್ಕೆ ರಸಗೊಬ್ಬರ ಕಳುಹಿಸುವುದು ಕೇಂದ್ರ ಸರ್ಕಾರ. ರಸಗೊಬ್ಬರ ತಯಾರಿಕೆ ಮಾಡುವ, ದರ ನಿಗದಿ, ಆಮದು ಮಾಡಿಕೊಳ್ಳುವ ಅಧಿಕಾರ ಕೇಂದ್ರ ಸರ್ಕಾರಕ್ಕಿದೆ. ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಅವರಿಗೆ ಇದರ ಕುರಿತಾಗಿ ಸಾಮಾನ್ಯ ಜ್ಞಾನ ಇಲ್ಲ ಕೇಂದ್ರದಿಂದ ರಾಜ್ಯ ಸರ್ಕಾರಕ್ಕೆ ನೀಡಬೇಕಿದ್ದ 1.25 ಸಾವಿರ ಮೆಟ್ರಿಕ್ ಟನ್ ರಸಗೊಬ್ಬರವನ್ನು ಕೇಂದ್ರ ನೀಡಿಲ್ಲ. ಇದರಿಂದ ಸಣ್ಣ ಪ್ರಮಾಣದಲ್ಲಿ ರಸಗೊಬ್ಬರ ವಿತರಣೆಯಲ್ಲಿ ವಿಳಂಬವಾಗಿದೆ ಅಷ್ಟೇ ಎಂದು ಸ್ಪಷ್ಟಪಡಿಸಿದರು.

ಬಡ ವಿದ್ಯಾರ್ಥಿಗಳಿಗೆ ಅನುಕೂಲ ಕಲ್ಪಿಸಲಿ

ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ವಿತರಿಸಿದ ಬಿಜೆಪಿ ಯುವ ಮುಖಂಡ ಸಚ್ಚಿದಾನಂದ



ಸರ್ಕಾರಿ ಕೋಟಾದ ವೈದ್ಯಕೀಯ ವಿಭಾಗದಲ್ಲಿ ಪ್ರವೇಶಾತಿ ಪಡೆದ ಆರ್.ಧ್ರುತಿ ಅವರಿಗೆ ಲ್ಯಾಪ್‌ಟಾಪ್ ವಿತರಿಸಲಾಯಿತು.

ಮಂಡ್ಯ: ವೈದ್ಯಕೀಯ ಸೇರಿದಂತೆ ಉನ್ನತ ವ್ಯಾಸಂಗ ಮಾಡುವ ಆರ್ಥಿಕವಾಗಿ ಹಿಂದುಳಿದಿರುವ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತಹ ಸೌಲಭ್ಯವನ್ನು ರಾಜ್ಯ ಸರ್ಕಾರ ಕಲ್ಪಿಸಿಕೊಡಬೇಕು ಎಂದು ಬಿಜೆಪಿ ಯುವ ಮುಖಂಡ ಇಂಡುವಾಳು ಸಚ್ಚಿದಾನಂದ ಒತ್ತಾಯಿಸಿದರು.

ಶ್ರೀರಂಗಪಟ್ಟಣ ವಿಧಾನಸಭಾ ಕ್ಷೇತ್ರದ ತಾಲೂಕಿನ ಕಾರಸವಾಡಿ ಗ್ರಾಮದಲ್ಲಿ ಎನ್. ಶಂಕರೇಗೌಡ ಚಾರಿಟಬಲ್ ಟ್ರಸ್ಟ್‌ನಿಂದ ಲ್ಯಾಪ್‌ಟಾಪ್ ವಿತರಿಸಿ ಮಾತನಾಡಿದ ಅವರು, ಉನ್ನತ ಶಿಕ್ಷಣ ಎನ್ನುವುದು ಬಡ ವಿದ್ಯಾರ್ಥಿಗಳಿಗೆ ಗಗನಕುಸುಮವಾಗಿದೆ ಎಂದರು.

ದುಬಾರಿ ಶುಲ್ಕ, ಪರೀಕ್ಷಾ ಶುಲ್ಕ, ಕಲಿಕಾ ವಸ್ತುಗಳ ಬೆಲೆ ಹೆಚ್ಚಳದಿಂದ ಬಡ ವಿದ್ಯಾರ್ಥಿಗಳಿಗೆ ಹೊರೆಯಾಗಿದೆ. ಇದರಿಂದಾಗಿ ಹಲವರು ವಿದ್ಯಾಭ್ಯಾಸದಿಂದ ವಿಮುಖರಾಗುತ್ತಿದ್ದಾರೆ. ಆದ್ದರಿಂದ ಸರ್ಕಾರ ಇಂತಹ ವಿದ್ಯಾರ್ಥಿಗಳಿಗಾಗಿ ವಿಶೇಷ ಕಾರ್ಯಕ್ರಮ ರೂಪಿಸಬೇಕು. ಇನ್ನು ಶ್ರೀರಂಗಪಟ್ಟಣ ವಿಧಾನಸಭಾ ಕ್ಷೇತ್ರದಲ್ಲಿ ಸರ್ಕಾರಿ ಕೋಟಾದಲ್ಲಿ ವೈದ್ಯಕೀಯ ಸೀಟು ಪಡೆದಿರುವಂತಹ ವಿದ್ಯಾರ್ಥಿಗಳಿಗೆ ನಮ್ಮ ಟ್ರಸ್ಟ್‌ನಿಂದ ಲ್ಯಾಪ್‌ಟಾಪ್ ವಿತರಿಸಲಾಗುತ್ತಿದೆ. ಇದರಿಂದ ವಿದ್ಯಾರ್ಥಿಗಳಿಗೆ ಕೊಂಚ ಮಟ್ಟದ ನೆರವಾಗಲಿದೆ ಎಂದರು.

ಕಾರಸವಾಡಿ ಗ್ರಾಮದ ಅಣ್ಣಾಜಣ್ಣ, ಪಾಪಣ್ಣ, ರಾಮಕೃಷ್ಣ, ಬಿಜೆಪಿ ಮುಖಂಡರಾದ ಕೆ.ಟಿ.ಕೃಷ್ಣೇಗೌಡ, ಹನುಮಂತಣ್ಣ, ಸೋಮಣ್ಣ, ಕೆ.ಎಸ್.ಪ್ರಕಾಶ್, ಪ್ರಿತೇಶ್, ಧೂಮಣ್ಣರ ರಮೇಶ್, ನಂದೀಶ್, ವಿನಾಯಕ ಬಡಾವಣೆ ರಾಜೇಶ್, ಎಲ್‌ಐಸಿ ಸಣ್ಣೇಗೌಡ ಇತರರಿದ್ದರು. ಕಾರಸವಾಡಿ ಗ್ರಾಮದ ಡಿ.ರಾಜಣ್ಣ ಎಂಬುವರ ಮಗಳು ಆರ್.ಧ್ರುತಿ ವೈದ್ಯಕೀಯ ವಿಭಾಗದಲ್ಲಿ ಸರ್ಕಾರಿ ಕೋಟಾದಲ್ಲಿ ಪ್ರವೇಶಾತಿ ಪಡೆದ ಹಿನ್ನೆಲೆಯಲ್ಲಿ ಇದೇ ವೇಳೆ ಉತ್ತಮ ಗುಣಮಟ್ಟದ ಲ್ಯಾಪ್‌ಟಾಪ್ ವಿತರಿಸಲಾಯಿತು.

ನಿವೃತ್ತ ಎಇಇಗೆ ಅಭಿನಂದನೆ



ಶ್ರೀರಂಗಪಟ್ಟಣ ಪಟ್ಟಣದ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯಲ್ಲಿ ಸಹಾಯಕ ಕಾರ್ಯಪಾಲಕ ಅಭಿಯಂತರರಾಗಿ ಸೇವೆ ಸಲ್ಲಿಸಿ ನಿವೃತ್ತರಾದ ರಾಮಕೃಷ್ಣೇಗೌಡ ಅವರನ್ನು ವಿವಿಧ ಇಲಾಖೆ ಅಧಿಕಾರಿಗಳು, ಗುತ್ತಿಗೆದಾರರು ಹಾಗೂ ಸಹೋದ್ಯೋಗಿಗಳು ಅಭಿನಂದಿಸಿದರು. ಈ ವೇಳೆ ವಿವಿಧ ಇಲಾಖೆ ಅಧಿಕಾರಿಗಳು, ಗುತ್ತಿಗೆದಾರರು, ಸಹೋದ್ಯೋಗಿಗಳು ಸೇರಿದಂತೆ ನೂರಾರು ಮಂದಿ ಸಾರ್ವಜನಿಕರು ಕಾರ್ಯಕ್ರಮದಲ್ಲಿ ಭಾಗವಹಿಸಿ, ರಾಮಕೃಷ್ಣೇಗೌಡ ಅವರನ್ನು ಅಭಿನಂದಿಸಿ, ಅವರ ನಿವೃತ್ತಿ ಜೀವನ ಉತ್ತಮವಾಗಿರಲಿ ಎಂದು ಶುಭಹಾರೈಸಿದರು.

ಇಂದು ವಿದ್ಯುತ್ ವ್ಯತ್ಯಯ

ಮಂಡ್ಯ, ಆ.3– ಚಿಕ್ಕ ಮಂಡ್ಯ ವಿದ್ಯುತ್ ವಿತರಣಾ ಕೇಂದ್ರದಿಂದ ಹೊರಡುವ ಪಣಕನಹಳ್ಳಿ, ಗೊರವಾಲೆ ಎನ್.ಜೆ.ವೈ ಮಾರ್ಗ ಮತ್ತು ಸಂಪಹಳ್ಳಿ ಐ.ಪಿ ಮಾರ್ಗದಲ್ಲಿ ತುರ್ತು ಕಾರ್ಯನಿರ್ವಹಣೆ ಹಮ್ಮಿಕೊಂಡಿರುವುದರಿಂದ ಆಗಸ್ಟ್ 4 ರಂದು ಬೆಳಿಗ್ಗೆ 9 ರಿಂದ ಸಂಜೆ 6 ಗಂಟೆಯವರೆಗೆ ವಿದ್ಯುತ್ ವ್ಯತ್ಯಯ ಉಂಟಾಗಲಿದೆ.

ಗ್ರಾಮಾಂತರ ಪ್ರದೇಶಗಳಾದ ಸಂಪಹಳ್ಳಿ, ಗೊರವಾಲೆ, ಬಿ. ಹೊಸಹಳ್ಳಿ, ಬೀರಗೌಡನಹಳ್ಳಿ, ಶಂಭೂನಹಳ್ಳಿ, ಕೋಣನಹಳ್ಳಿ, ಪಣಕನಹಳ್ಳಿ, ಹೊಳಲು, ಎಂ.ಜಿ. ಬಡಾವಣೆ, ತಂಡಸನಹಳ್ಳಿ, ಸಿದ್ದಯ್ಯನಕೊಪ್ಪಲು, ವೈ.ಯರಹಳ್ಳಿ, ಅವ್ವೇರಹಳ್ಳಿ, ಸಂಪಹಳ್ಳಿ ಐ.ಪಿ ಮಾರ್ಗ ಹಾಗೂ ಈ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯ ಉಂಟಾಗಲಿದ್ದು ಸಾರ್ವಜನಿಕರು ಸಹಕರಿಸಬೇಕಾಗಿದೆ ಎಂದು ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮದ ಪ್ರಕಟಣೆ ತಿಳಿಸಿದೆ.

8.5 ಮೆಟ್ರಿಕ್ ಟನ್ ರಸಗೊಬ್ಬರ ಪೂರೈಕೆ: ಸಂಸದ ಡಾ.ಸಿ.ಎನ್.ಮಂಜುನಾಥ್

ಮದ್ದೂರು: ರಸಗೊಬ್ಬರ ಸಮಸ್ಯೆ ಕುರಿತು ರಾಜ್ಯದ ಎಲ್ಲಾ ಸಂಸದರು ಹೋಗಿ ಕೇಂದ್ರ ರಸಗೊಬ್ಬರ ಸಚಿವ ಜೆ.ಪಿ.ನಡ್ಡಾರನ್ನು ಭೇಟಿ ಮಾಡಿ ಮನವರಿಕೆ ಮಾಡಿದ್ದು, ರಾಜ್ಯಕ್ಕೆ ಕೇಂದ್ರದಿಂದ ಬರಬೇಕಾದ ಯೂರಿಯಾ, ಡಿಎಪಿ 8.5 ಮೆಟ್ರಿಕ್ ಟನ್ ರಸಗೊಬ್ಬರ ರೈತರಿಗೆ ಪೂರೈಕೆ ಮಾಡಲಾಗಿದೆ ಎಂದು ಬೆಂಗಳೂರು ಗ್ರಾಮಾಂತರ ಸಂಸದ ಡಾ.ಸಿ.ಎನ್.ಮಂಜುನಾಥ್ ತಿಳಿಸಿದರು.



ಮಂಡ್ಯ ಜಿಲ್ಲೆಯ ಮದ್ದೂರು ಪಟ್ಟಣದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಈ ಬಾರಿ ಮುಂಗಾರು ಬೇಗ ಬಂದು ಉತ್ತಮ ಮಳೆಯಾಗಿದೆ. ಕೃಷಿ ಚಟುವಟಿಕೆಯೂ ವೇಗ ಪಡೆದುಕೊಂಡಿದೆ. ನಮ್ಮ ರಾಜ್ಯದ ರಸಗೊಬ್ಬರ ಬೇಡಿಕೆ 7 ಲಕ್ಷ ಮೆಟ್ರಿಕ್ ಟನ್ ಇತ್ತು. ಈಗಾಗಲೇ 8.5 ಲಕ್ಷ ಟನ್ ಪೂರೈಕೆಯಾಗಿದೆ. ಇನ್ನು ರಾಜ್ಯಕ್ಕೆ 1.35 ಲಕ್ಷ ಮೆಟ್ರಿಕ್ ಟನ್ ಬೇಕಿದೆ. ಪ್ರತಿ ದಿನ 16 ಸಾವಿರ ಮೆಟ್ರಿಕ್ ಟನ್ ರಸಗೊಬ್ಬರ ಪೂರೈಕೆ ಮಾಡಲಾಗುತ್ತಿದೆ ಎಂದು ಹೇಳಿದರು.

ಪ್ರತಿ ವರ್ಷ ರಸಗೊಬ್ಬರ ಕೊರತೆ ಸಮಸ್ಯೆ ಎದುರಾಗುತ್ತಿದೆ. ಇದನ್ನು ತಪ್ಪಿಸಲು ಮೊದಲು ಕಾಳಸಂತೆಯಲ್ಲಿ ರಸಗೊಬ್ಬರ ಮಾರಾಟ ಮಾಡುವುದನ್ನು ತಪ್ಪಿಸಿ ರೈತರಿಗೆ ಸಮರ್ಪಕವಾಗಿ ತಲುಪಿಸುವ ವ್ಯವಸ್ಥೆ ಮಾಡಬೇಕು. ಇದನ್ನು ಬಿಟ್ಟು ಕೇಂದ್ರ ಸರ್ಕಾರದ ಮೇಲೆ ಆರೋಪ ಮಾಡುವುದು ಸರಿಯಲ್ಲ ಎಂದು ರಾಜ್ಯ ಸರ್ಕಾರದ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದರು.

ವಿಶೇಷಚೇತನರ ವಸತಿ ಶಾಲೆಯಲ್ಲಿ ಹುಟ್ಟುಹಬ್ಬ ಆಚರಣೆ



ಮಂಡ್ಯದ ಸಮಾಜ ಸೇವಕ ಜಫ್ರುಲ್ಲಾಖಾನ್ ಅವರ ಹುಟ್ಟುಹಬ್ಬವನ್ನು ನಗರದ ಸ್ವರ್ಣಸಂದ್ರದ ಪ್ರೇರಣಾ ಅಂಧ ಮತ್ತು ವಿಶೇಷ ಚೇತನರ ವಸತಿ ಶಾಲೆಯಲ್ಲಿ ಆಚರಿಸಲಾಯಿತು.

ಪೂರ್ವಭಾವಿ ಸಭೆ



ಕೆ.ಆರ್.ಪೇಟೆಯ ಪ್ರವಾಸಿ ಮಂದಿರದಲ್ಲಿ ತಾಲೂಕು ವಿಕಲಚೇತನರ ಕ್ಷೇಮಾಭಿವೃದ್ಧಿ ಸಂಘದ ರಚನೆಯ ಕುರಿತು ಪೂರ್ವಭಾವಿ ಸಭೆ ನಡೆಯಿತು. ಮಡುವಿನಕೋಡಿ ಗಂಗಾಧರ್ ಮತ್ತಿತರರಿದ್ದರು.

ಒಂದನೇ ಪುಟದಿಂದ

ಇಂದು ಗಜಪಯಣ

ದೂರದ ನಾಗಾಪುರ ಹಾಡಿ ಸಮೀಪದ ಮೈದಾನದಲ್ಲಿ ನಡೆಯುವ ವೇದಿಕೆ ಕಾರ್ಯಕ್ರಮದವರೆಗೂ ಮೆರವಣಿಗೆಯಲ್ಲಿ ಕರೆತರಲಾಗುತ್ತದೆ.

ವೇದಿಕೆ ಕಾರ್ಯಕ್ರಮದಲ್ಲಿ ಅರಣ್ಯ ಸಚಿವ ಈಶ್ವರ್ ಬಿ.ಖಂಡ್ರೆ ದಸರಾ ಆನೆಗಳ ಪಟ್ಟಿ ಹಾಗೂ ಕಿರು ಹೊತ್ತಿಗೆ ಬಿಡುಗಡೆ ಮಾಡಲಿದ್ದಾರೆ. ಶಾಸಕ ಜಿ.ಡಿ.ಹರೀಶ್ ಗೌಡ ಅಧ್ಯಕ್ಷತೆ ವಹಿಸುವ ಕಾರ್ಯಕ್ರಮದಲ್ಲಿ ಪಶು ಸಂಗೋಪನಾ ಸಚಿವ ಕೆ.ವೆಂಕಟೇಶ್, ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ್ ತಂಗಡಗಿ, ಶಾಸಕರಾದ ಜಿ.ಟಿ.ದೇವೇಗೌಡ, ತನ್ವೀರ್‌ಸೇಠ್, ಡಿ.ರವಿಶಂಕರ್, ಟಿ.ಎಸ್.ಶ್ರೀವತ್ಸ ಕೆ.ಹರೀಶ್ ಗೌಡ, ದರ್ಶನ್ ಧ್ರುವನಾರಾಯಣ್, ಅನಿಲ್ ಚಿಕ್ಕಮಾದು, ಸಂಸದರಾದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಸುನೀಲ್ ಭೋಸ್, ವಿಧಾನ ಪರಿಷತ್ ಸದಸ್ಯರಾದ ಡಾ.ಯತೀಂದ್ರ ಸಿದ್ದರಾಮಯ್ಯ, ಡಾ.ಡಿ.ತಿಮ್ಮಯ್ಯ, ಸಿ.ಎನ್.ಮಂಜೇಗೌಡ, ವಿವೇಕಾನಂದ ಸೇರಿದಂತೆ ವಿವಿಧ ನಿಗಮ ಮಂಡಳಿಗಳ ಅಧ್ಯಕ್ಷರು ಪಾಲ್ಗೊಳ್ಳಲಿದ್ದಾರೆ.

ಐದು ಸಾವಿರ ಜನರಿಗೆ ಊಟ: ನಾಗರಹೊಳೆ ಅಭಯಾರಣ್ಯದ ವೀರನಹೊಸಳ್ಳಿ ಗೇಟ್ ಬಳಿ ಚಾಲನೆ ದೊರೆತ ಬಳಿಕ ನಾಗಾಪುರ ಹಾಡಿ ಸಮೀಪ ನಡೆಯುವ ಸಭಾ ಕಾರ್ಯಕ್ರಮ ವೀರನಹೊಸಳ್ಳಿ, ನಾಗಾಪುರ ಹಾಡಿ ಸೇರಿದಂತೆ ಸುತ್ತಮುತ್ತಲಿನ ಗ್ರಾಮಗಳ ಜನರು ಆಗಮಿಸುವ ಹಿನ್ನೆಲೆಯಲ್ಲಿ ಅರಣ್ಯ ಇಲಾಖೆ ವತಿಯಿಂದ 5 ಸಾವಿರ ಜನರಿಗೆ ಊಟ ವ್ಯವಸ್ಥೆ ಮಾಡಲಾಗಿದೆ. ಈಗಾಗಲೇ ವೇದಿಕೆ ನಿರ್ಮಾಣಕ್ಕೆ ಸಂಬಂಧಿಸಿದಂತೆ ಸ್ಥಳ ಪರಿಶೀಲಿಸಲಾಗಿದ್ದು, ವೀರನಹೊಸಳ್ಳಿ ಗೇಟ್‌ನಿಂದ ಸಭಾ ಕಾರ್ಯಕ್ರಮ ನಡೆಯುವ ಸ್ಥಳದವರೆಗೂ ರಸ್ತೆಯಲ್ಲಿ ತಳಿರು ತೋರಣದಿಂದ ಶೃಂಗರಿಸಲಾಗಿದೆ. ಸಭಾ ಕಾರ್ಯಕ್ರಮದಲ್ಲಿ ಆದಿವಾಸಿ ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮ, ಟಿಬೆಟಿಯನ್ ನೃತ್ಯ ಸೇರಿದಂತೆ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮ ಆಯೋಜಿಸಲು ಕ್ರಮ ಕೈಗೊಳ್ಳಲಾಗಿದೆ.

ಸಮವಸ್ತ್ರ, ಕೈದಿ ಸಂಖ್ಯೆ 15528

ಅವರ ವೈದ್ಯಕೀಯ ಸ್ಥಿತಿ ಸ್ಥಿರವಾಗಿದೆ ಎಂದು ಖಚಿತಪಡಿಸಿಕೊಳ್ಳಲು ಜೈಲು ವೈದ್ಯರು ಶನಿವಾರ ತಡರಾತ್ರಿ ಅವರ ಆರೋಗ್ಯ ತಪಾಸಣೆ ನಡೆಸಿದರು. ವೈದ್ಯಕೀಯ ತಪಾಸಣೆಯ ಸಮಯದಲ್ಲಿ ಅವರು ಕುಸಿದು ಬಿದ್ದು, ಸಿಬ್ಬಂದಿಗೆ ತಮ್ಮ ದುಃಖವನ್ನು ವ್ಯಕ್ತಪಡಿಸಿದರು ಎಂದು ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಈ ಶಿಕ್ಷೆಯನ್ನು ಪ್ರಶ್ನಿಸಿ ಹೈಕೋರ್ಟ್ ಮೊರೆ ಹೋಗಿರುವುದಾಗಿ ಪ್ರಜ್ವಲ್ ಸಿಬ್ಬಂದಿಗೆ ತಿಳಿಸಿದ್ದಾರೆ ಎಂದು ವರದಿಯಾ ಗಿದೆ. ಮಾಜಿ ಸಂಸದರನ್ನು ಸದ್ಯ ಹೆಚ್ಚಿನ ಭದ್ರತೆಯ ಸೆಲ್‌ನಲ್ಲಿ ಇರಿಸಲಾಗಿದ್ದು, ಅವರಿಗೆ ಹೆಚ್ಚಿನ ಭದ್ರತೆಯನ್ನು ಒದಗಿಸಲಾಗುತ್ತಿದೆ.

ಜೈಲು ಅಧಿಕಾರಿಗಳ ಪ್ರಕಾರ ಅಪರಾಧಿ ಗಳಿಗೆ ಪ್ರಮಾಣಿತ ಡ್ರೆಸ್ ಕೋಡ್ ಅನ್ನು ಅನುಸರಿಸಲಾಗುತ್ತಿದ್ದು, ಕೈದಿಗಳಿಗೆ ನೀಡಲಾಗುವ ಸಮವಸ್ತ್ರವನ್ನು ಧರಿಸಬೇಕಾಗುತ್ತದೆ. ಭಾನುವಾರ ಬೆಳಿಗ್ಗೆ ಪ್ರಜ್ವಲ್‌ಗೆ ಅಧಿಕೃತವಾಗಿ ಕೈದಿ ಸಂಖ್ಯೆ 15528 ನೀಡಲಾಗಿದೆ ಎಂದು ಹೇಳಿದರು.

ಶನಿವಾರ ಪ್ರಜ್ವಲ್‌ಗೆ ಜೀವಿತಾವಧಿಯವರೆಗೆ ಜೈಲು ಶಿಕ್ಷೆ ವಿಧಿಸಿದ ನ್ಯಾಯಾಲಯವು ಒಟ್ಟಾರೆ ಅವರಿಗೆ 11.60 ಲಕ್ಷ ರೂ. ದಂಡ ವಿಧಿಸಿತು ಮತ್ತು ಸಂತ್ರಸ್ತೆಗೆ 11.25 ಲಕ್ಷ ರೂ.ಗಳನ್ನು ಪಾವತಿಸುವಂತೆ ನಿರ್ದೇಶಿ ಸಿತು. ಈ ಪ್ರಕರಣವು ಹಾಸನ ಜಿಲ್ಲೆಯ ಹೊಳೆನರಸೀಪುರದಲ್ಲಿರುವ ಕುಟುಂಬದ ಗನ್ನಿಕಡ ತೋಟದ ಮನೆಯಲ್ಲಿ ಮನೆಕೆಲಸ ಮಾಡು ತ್ತಿದ್ದ 48 ವರ್ಷದ ಮಹಿಳೆಗೆ ಸಂಬಂಧಿಸಿದೆ.

ಎಸ್‌ಐಟಿಗೆ ಮುಖ್ಯಮಂತ್ರಿ ಪದಕ

ಅವರು, ನಮ್ಮ ವಿಶೇಷ ತನಿಖಾ ತಂಡವು (ಎಸ್‌ಐಟಿ) ಆರಂಭದಿಂದಲೇ ಚುರುಕಾಗಿ ತನಿಖೆ ನಡೆಸಿದ್ದು, ಎಲ್ಲಾ ಅಗತ್ಯ ದಾಖಲೆಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿತು. ಪರಿಣಾಮವಾಗಿ ಈ ತೀರ್ಪು ಬಂದಿದೆ. ನಾನು ಪ್ರಥಮವಾಗಿ ಎಸ್‌ಐಟಿ ತಂಡಕ್ಕೆ ಅಭಿನಂದನೆ ಸಲ್ಲಿಸುತ್ತೇನೆ. ಇದು ನಮ್ಮ ಪೊಲೀಸ್ ಇಲಾಖೆಗೆ ಕೀರ್ತಿ ತಂದುಕೊಟ್ಟಿದೆ ಎಂದು ಹೇಳಿದರು.

ನಮ್ಮ ಎಸ್‌ಐಟಿ ಎಲ್ಲ ದಾಖಲೆ ಕೊಟ್ಟಿತ್ತು. ಈ ಪ್ರಕರಣದ ತನಿಖೆ ನಮ್ಮ ಪೊಲೀಸ್ ಇಲಾಖೆ ಕೀರ್ತಿ ತಂದಿದೆ. ಶೀಘ್ರವಾಗಿ ತನಿಖೆ ಮುಗಿಸಿದ್ದಾರೆ, ಅಭಿನಂದನೆಗಳು, ಪ್ರಜ್ವಲ್ ಪ್ರಕರಣವನ್ನು ರಾಜಕೀಯ ದೃಷ್ಟಿಯಿಂದ ನೋಡಲೇಬಾರದು. ಪೊಲೀಸರ ಶ್ರಮಕ್ಕೆ ಸರ್ಕಾರ ಪ್ರಶಂಸೆ ಮಾಡುತ್ತದೆ. ತನಿಖೆ ನಡೆಸಿದ ಎಸ್‌ಐಟಿ ತಂಡದವರಿಗೆ ಮುಖ್ಯಮಂತ್ರಿ ಪದಕ ಕೊಡುತ್ತೇವೆ, ರಾಷ್ಟ್ರಪತಿ ಪದಕಕ್ಕೂ ಶಿಫಾರಸು ಮಾಡ್ತೇವೆ ಎಂದು ತಿಳಿಸಿದ್ದಾರೆ.

ಅಣೆಕಟ್ಟೆಗೆ ಅಡಿಗಲ್ಲು ಹಾಕಿದ್ದು ಟಿಪ್ಪು

ಮೈಸೂರು ನಾಲ್ವಡಿಯವರ ಸಾಧನೆಯನ್ನು ಕಡೆಗಣಿಸಿದ್ದಾರೆ. ಟಿಪ್ಪು ಮಸೀದಿ ಪಕ್ಕದಲ್ಲೇ ದೇವಸ್ಥಾನ ಇದೆ. ಈ ಕಡೆ ಅಲ್ಲಾಹು ಅಕ್ಬರ್, ಆ ಕಡೆ ಗಂಟೆ ಟನ್ ಟನ್ ಅಂತದೆ, ಟಿಪ್ಪು ಎರಡನ್ನು ಕೇಳುತ್ತಾ ಸಮಚಿತ್ತರಾಗಿದ್ದರು. ಹೀಗಾಗಿ ಮಸೀದಿ ಪಕ್ಕದಲ್ಲೇ ದೇವಸ್ಥಾನವೂ ಪ್ರತಿ ದಿನದ ಪೂಜೆ ಪುನಸ್ಕಾರಗಳು ನಡೆಯುತ್ತಿತ್ತು ಎಂದು ಅವರು ಹೇಳಿದ್ದಾರೆ.

ದೇವದಾಸಿ ಪದ್ಧತಿ ರದ್ದು ಮಾಡಿದ್ದ ಟಿಪ್ಪು: ಚರಿತ್ರೆ ಗೊತ್ತಿಲ್ಲದವರು ಚರಿತ್ರೆ ನಿರ್ಮಾಣ ಮಾಡಲು ಸಾಧ್ಯವಿಲ್ಲ ಎಂದಿರುವ ಮಹದೇವಪ್ಪ, ಟಿಪ್ಪು ಭಾರತದಲ್ಲಿದ್ದ ದೇವದಾಸಿ ಪದ್ಧತಿ ರದ್ದು ಮಾಡಿ ಹೊಸ ಕ್ರಾಂತಿ ಮಾಡಿದ್ದರು. ಆ ಕಾಲದಲ್ಲಿ ದೇವದಾಸಿ ಪದ್ಧತಿ ರದ್ದು ಮಾಡಿದ ಕೀರ್ತಿ ಟಿಪ್ಪುಗೆ ಸಲ್ಲಲಿದೆ. ಇದು ಶೋಷಿತ ಮಹಿಳೆಯರನ್ನು ಕೂಪಕ್ಕೆ ದೂಡುತ್ತಿದ್ದ ಪದ್ಧತಿಯಾಗಿತ್ತು. ಆದರೆ ಟಿಪ್ಪು ಇದಕ್ಕೆ ಅಂತ್ಯ ಹಾಡಿದ್ದರು ಎಂದಿದ್ದಾರೆ.

ಟಿಪ್ಪು ಸ್ವಾತಂತ್ರ್ಯ ಸೇನಾನಿ: ಟಿಪ್ಪು ಅತೀ ದೊಡ್ಡ ಸ್ವಾತಂತ್ರ್ಯ ಸೇನಾನಿ ಎಂದು ಬಣ್ಣಿಸಿದ ಅವರು, ರಣರಂಗದಲ್ಲಿ ಬ್ರಿಟಿಷರ ವಿರುದ್ಧ ಹೋರಾಟ ಮಾಡಿದ್ದಾರೆ. ಟಿಪ್ಪು ಅವರ ಕಾಲದಲ್ಲಿ ಒಂದೇ ಒಂದು ಇಂಚು ಭೂಮಿಯನ್ನು ಉಳ್ಳವರಿಗೆ ಕೊಟ್ಟಿರಲಿಲ್ಲ. ಇದ್ಯಾವುದನ್ನು ಅರ್ಥ ಮಾಡಿಕೊಳ್ಳದ ಹಲವರು ಸ್ವತಂತ್ರ ಚಳವಳಿಗಳನ್ನು ಟೀಕಿಸುತ್ತಾರೆ. ಭಾರತ ದೇಶಕ್ಕೆ ಸಿರಿಕಲ್ಚರ್ ರೇಷ್ಮೆ ತಂದಿದ್ದೆ ಟಿಪ್ಪು.

ಇಷ್ಟೇ ಅಲ್ಲ, ಮೈಸೂರಿನ ಅರಮನೆ ಇದ್ದಿದ್ದು ಶ್ರೀರಂಗಪಟ್ಟಣ ದಲ್ಲೇ ಎಂದು ಟಿಪ್ಪು ಹಾಡಿಹೊಗಳಿದ್ದಾರೆ.

ಇತಿಹಾಸವನ್ನು ತಿರುಚುವ ಪ್ರಯತ್ನ

ಮಾತ್ರ ಪೂಜೆ ನಡೆಯುತ್ತಿತ್ತು. ಇದು ಸ್ಪಷ್ಟವಾದ ಇತಿಹಾಸ. ಈ ರೀತಿಯ ಹೇಳಿಕೆಗಳು ಮತದಾರರ ಓಲೈಸುವ ಅನುಕೂಲಕ್ಕಾಗಿ ನೀಡಲಾಗುತ್ತಿದೆ. ಇತಿಹಾಸವನ್ನು ತಿರುಚಿ ಮತ ಗಳಿಕೆಗೆ ಉಪಯೋಗಿಸುವುದು ಸರಿಯಲ್ಲ ಎಂದು ಒಡೆಯರ್ ಅವರು ಹೇಳಿದ್ದಾರೆ.

ಟಿಪ್ಪು ಕಾಲದಲ್ಲಿ ರೇಷ್ಮೆ ಕೈಗಾರಿಕೆಗೆ ಪ್ರಯೋಜನಕಾರಿಯಾದ ಕೆಲಸಗಳನ್ನು ಮಾಡಿರಬಹುದು. ಆದರೆ, ಒಂದು ಒಳ್ಳೆಯ ಕೆಲಸದಿಂದ ನೂರು ತಪ್ಪುಗಳನ್ನು ಮುಚ್ಚಲಾಗದು. ಗರ್ಭಿಣಿಯರು, ಅಯ್ಯಂಗಾರ್ ಸಮುದಾಯದವರು ಸೇರಿದಂತೆ ಅನೇಕ ನಿರಪರಾಧಿಗಳು ಟಿಪ್ಪು ಕಾಲದಲ್ಲಿ ಕೊಲೆಯಾದರು. ಇವುಗಳನ್ನು ಮರೆತುಬಿಡುವಂತಿಲ್ಲ ಎಂದು ಯದುವೀರ್ ಹೇಳಿದ್ದಾರೆ. ರಾಜಕೀಯ ನಾಯಕರು ಇತಿಹಾಸವನ್ನು ಆಧಾರರಹಿತವಾಗಿ ಪ್ರಸ್ತಾಪಿಸುವುದು ತಪ್ಪು. ತಮ್ಮ ರಾಜಕೀಯಕ್ಕೆ ಇದನ್ನು ಬಳಸಬಾರದು. ಇತಿಹಾಸವನ್ನು ಪ್ರಸ್ತುತಪಡಿಸಲು ಸಾಕ್ಷ್ಯಾಧಾರಗಳು ಅಗತ್ಯ. ಸಾಕ್ಷಿಗಳನ್ನು ತೋರಿಸಿ ಇತಿಹಾಸವನ್ನು ಮಂಡಿಸಬೇಕು. ರಾಜಕೀಯ ಲಾಭಕ್ಕಾಗಿ ಇತಿಹಾಸವನ್ನು ದುರುಪಯೋಗಪಡಿಸಿಕೊಳ್ಳಬಾರದು ಎಂದು ಖಾರವಾಗಿ ಯದುವೀರ್ ಪ್ರತಿಕ್ರಿಯಿಸಿದ್ದಾರೆ.

ಸಂಘಟನೆಗಳೊಂದಿಗೆ ಸಿಎಂ ಮಾತುಕತೆ

ಸರ್ಕಾರದ ಯಾವುದೇ ಭರವಸೆಗಳನ್ನು ನಾವು ಒಪ್ಪುವುದಿಲ್ಲ. ಒಪ್ಪಂದ ಮಾಡಿಕೊಳ್ಳಬೇಕು. ಇಲ್ಲವೇ ಮುಷ್ಕರ ಎದುರಿಸಬೇಕು. ಇದೇ ನಮ್ಮ ಅಂತಿಮ ತೀರ್ಮಾನ ಎಂದು ಅನಂತಸುಬ್ಬರಾವ್ ತಿಳಿಸಿದ್ದಾರೆ.

ಸರ್ಕಾರದ ನಿಲುವು: 2020ರಲ್ಲಿ ನಡೆಯಬೇಕಿದ್ದ ಪರಿಷ್ಕರಣೆಯು ಕೋವಿಡ್‌ನ ಕಾರಣದಿಂದ ಮುಂದಕ್ಕೆ ಹೋಗಿತ್ತು. ಪರಿಷ್ಕರಣೆ ಮೂರು ವರ್ಷ ತಡವಾದ ಕಾರಣಕ್ಕಾಗಿಯೇ ಆರ್ಥಿಕ ನಿಯಮಾವಳಿಗಳ ಪ್ರಕಾರ 2023ರಲ್ಲಿ ಶೇ 15ರಷ್ಟು ಏರಿಕೆ ಮಾಡಲಾಗಿತ್ತು. ಸರ್ಕಾರಿ ನೌಕರರಿಗೂ ಈ ಮಟ್ಟದ ವೇತನ ಏರಿಕೆ ನೀಡಿಲ್ಲ. ಹಿಂದೆ ಮಾಡಿಕೊಂಡ ಒಪ್ಪಂದದ ಆದೇಶದ ಪ್ರಕಾರ 2027 ರವರೆಗೆ ಪರಿಷ್ಕರಣೆಗೆ ಅವಕಾಶವಿಲ್ಲ ಎಂಬುದು ಸರ್ಕಾರದ ವಾದವಾಗಿದೆ.

11 ಸಾವಿರ ಖಾಸಗಿ ಬಸ್ ಬಳಕೆ: ಮುಖ್ಯಮಂತ್ರಿಯವರು ನಡೆಸುವ ಮಾತುಕತೆ ವಿಫಲವಾಗಿ ಕೆಎಸ್‌ಆರ್‌ಟಿಸಿ ಕಾರ್ಮಿಕ ಸಂಘಟನೆಗಳು ಮುಷ್ಕರ ಆರಂಭಿಸಿದರೆ ಸಾರ್ವಜನಿಕರಿಗೆ ತೊಂದರೆಯಾಗದಂತೆ ನೋಡಿಕೊಳ್ಳಲು 11 ಸಾವಿರ ಖಾಸಗಿ ಬಸ್‌ಗಳು ರಸ್ತೆಗಿಳಿಯಲಿವೆ. ಸಾರಿಗೆ ಮತ್ತು ರಸ್ತೆ ಸುರಕ್ಷತೆ ಆಯುಕ್ತ ಎ.ಎಸ್. ಯೋಗೀಶ್ ಅಧ್ಯಕ್ಷತೆಯಲ್ಲಿ ವಿವಿಧ ಖಾಸಗಿ ಬಸ್ ಮಾಲೀಕರ ಸಂಘಗಳೊಂದಿಗೆ ಈಗಾಗಲೇ ಸಭೆ ನಡೆದಿದೆ.

ಕರ್ನಾಟಕ ರಾಜ್ಯ ಖಾಸಗಿ ಸಾರಿಗೆ ಸಂಘಟನೆಗಳ ಒಕ್ಕೂಟ ವಿವಿಧ ಸಂಘಟನೆಗಳು ಸಭೆಯಲ್ಲಿ ಪಾಲ್ಗೊಂಡಿದ್ದು, 'ಪರ್ಮಿಟ್ ಸಮಸ್ಯೆ, ತೆರಿಗೆ ರಿಯಾಯಿತಿ ಸೇರಿದಂತೆ ನಮ್ಮ ಪ್ರಮುಖ ನಾಲ್ಕು ಬೇಡಿಕೆಗಳನ್ನು ಈಡೇರಿಸಬೇಕು' ಎಂದು ಒತ್ತಾಯಿಸಿದ್ದಾರೆ. ಮುಷ್ಕರ ದಿನ ಖಾಸಗಿ ಬಸ್‌ಗಳನ್ನು ಕೆಎಸ್‌ಆರ್‌ಟಿಸಿ ಸೇರಿದಂತೆ ವಿವಿಧ ನಿಗಮಗಳ ಬಸ್‌ಗಳ ಸಂಚಾರ ಮಾರ್ಗದಲ್ಲಿ ಓಡಿಸಲು ಒಪ್ಪಿಗೆ ಸೂಚಿಸಿದ್ದಾರೆ.

ಭವಿಷ್ಯದ ಪೋಷಕರಿಗೆ ಆತ್ಮವಿಶ್ವಾಸ ಮೂಡಿಸಿದ ಮಣಿಪಾಲ್ ಆಸ್ಪತ್ರೆಯ 'ಪೇರೆಂಟ್ ಕ್ರಾಫ್ಟ್ 2025' ಅರಿವು ಕಾರ್ಯಕ್ರಮ



ಮೈಸೂರಿನ ಮಣಿಪಾಲ್ ಆಸ್ಪತ್ರೆಯಲ್ಲಿ ನಡೆದ 'ಪೇರೆಂಟ್ ಕ್ರಾಫ್ಟ್ 2025' ಅರಿವು ಕಾರ್ಯಕ್ರಮದಲ್ಲಿ ಆಸ್ಪತ್ರೆಯ ತಜ್ಞ ವೈದ್ಯರು ಹಾಗೂ ಭವಿಷ್ಯದ ಪೋಷಕರು ಮತ್ತು ಅವರ ಕುಟುಂಬ ವರ್ಗದವರು ಪಾಲ್ಗೊಂಡಿದ್ದರು.

ಮೈಸೂರು, ಆ.3(ಪಿಎಂ)– ಮೈಸೂರಿನ ಮಣಿಪಾಲ್ ಆಸ್ಪತ್ರೆಯಲ್ಲಿ 'ಪೇರೆಂಟ್ ಕ್ರಾಫ್ಟ್ 2025' ಶೀರ್ಷಿಕೆಯಡಿ ಗರ್ಭಿಣಿಯರು, ಅವರ ಪತಿಯಂದಿರು ಹಾಗೂ ಕುಟುಂಬ ವರ್ಗದವರಿಗೆ ಭಾನುವಾರ ಹಮ್ಮಿಕೊಂಡಿದ್ದ ಅರಿವು ಕಾರ್ಯಕ್ರಮದಲ್ಲಿ ಹೆರಿಗೆ ಹಾಗೂ ನವಜಾತ ಶಿಶು ಆರೈಕೆ ಕುರಿತಂತೆ ತಜ್ಞರು ಮಹತ್ವದ ಮಾಹಿತಿಗಳನ್ನು ನೀಡಲಾಯಿತು.

ಗರ್ಭಧಾರಣೆ ಸಮಯದಲ್ಲಿ ಮತ್ತು ಆ ನಂತರದ ಅವಧಿಯಲ್ಲಿ ವಹಿಸಬೇಕಾದ ಸೂಕ್ತ ಕ್ರಮಗಳ ಬಗ್ಗೆ ಮಾರ್ಗದರ್ಶನ ನೀಡಲು ರೂಪಿಸಿದ್ದ ಈ ಕಾರ್ಯಕ್ರಮದಲ್ಲಿ ತಜ್ಞರು, ಇತ್ತೀಚೆಗಿನ ವೈದ್ಯಕೀಯ ಸೌಲಭ್ಯಗಳು ಮತ್ತು ಅವುಗಳ ಸಮಗ್ರ ದೃಷ್ಟಿಕೋನಗಳ ಮೂಲಕ ಮಾಹಿತಿ ಒದಗಿಸಿ ಭವಿಷ್ಯದ ಪೋಷಕರಲ್ಲಿ ಆತ್ಮವಿಶ್ವಾಸ ಮೂಡಿಸಿದರು.

ಕಾರ್ಯಕ್ರಮದಲ್ಲಿ ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞರಾದ ಡಾ.ಕೆ.ಜಿ.ಅಮೂಲ್ಯ ಮಾತನಾಡಿ, ಪೋಷಕರಾಗುವ ಹಂತವು ಪ್ರತಿ ದಂಪತಿಯ ಮಹತ್ವದ ಘಟ್ಟ. ಇಂದಿನ ಈ ಅಧಿವೇಶನವು ಪೋಷಕರಾಗುತ್ತಿರುವ ದಂಪತಿಗಳ ಅನೇಕ ಆತಂಕಗಳನ್ನು ದೂರ ಮಾಡಲಿದೆ ಎಂಬ ವಿಶ್ವಾಸವಿದೆ. ಜೊತೆಗೆ ಈ ಅಧಿವೇಶನವೂ ಅವರಿಗೆ ಆತ್ಮವಿಶ್ವಾಸ ಮೂಡಿಸಲಿದೆ ಎಂದು ನಾವು ಭಾವಿಸುತ್ತೇವೆ ಎಂದು ಹೇಳಿದರು.

ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞರಾದ ಡಾ.ಶಾಹೀನ್ ಅಖ್ತರ್ ಮಾತನಾಡಿ, ನಮ್ಮ ಈ ಕಾರ್ಯಕ್ರಮದ ಉದ್ದೇಶವು ಭವಿಷ್ಯದ ಪೋಷಕರಿಗೆ ಸಮಗ್ರ ಮಾರ್ಗದರ್ಶನ ನೀಡುವ ಮೂಲಕ ಅವರಲ್ಲಿ ಆತ್ಮವಿಶ್ವಾಸ ಮೂಡಿಸುವುದಾಗಿದೆ. ಜೊತೆಗೆ ಭವಿಷ್ಯದಲ್ಲಿ ಜನಿಸುವ ಅವರ ಮಗುವಿನ ಆರೈಕೆಗೆ ಅವರನ್ನು ಸಜ್ಜುಗೊಳಿಸುವುದಾಗಿದೆ. ಆರೋಗ್ಯಕರ ಮತ್ತು ತಿಳುವಳಿಕೆಯುಳ್ಳ ಗರ್ಭಧಾರಣೆ ಮತ್ತು ಗರ್ಭಿಣಿಯರಿಗೆ ನೋವುರಹಿತ ಹೆರಿಗೆ ಸಂಬಂಧ ಇರುವ ವಿಧಾನಗಳ ಆಯ್ಕೆ ಬಗ್ಗೆ ಅರಿವು ಮೂಡಿಸುವುದೂ ಆಗಿದೆ ಎಂದು ವಿವರಿಸಿದರು.

ಪೀಡಿಯಾಟ್ರಿಕ್ಸ್ ಡಾ.ಯು.ಭುವನೇಶ್ವರ ಮಾತನಾಡಿ, ನವಜಾತ ಶಿಶು ಆರೈಕೆಯಲ್ಲಿ ಬಾಣಂತಿಯರ ಆಹಾರ, ಸೋಂಕು ತಡೆಗಟ್ಟುವಿಕೆ ಮತ್ತು ಆರೋಗ್ಯ ತಪಾಸಣೆ ಪ್ರಮುಖ ಅಂಶಗಳಾಗಿವೆ. ನಮ್ಮ ಈ ಪ್ರಾಯೋಗಿಕ ಸಲಹೆಗಳ ಮೂಲಕ ನೂತನ ಪೋಷಕರು ತಮ್ಮ ನವಜಾತ ಶಿಶುಗಳ ಬಗ್ಗೆ ಕಾಳಜಿ ವಹಿಸಲು ಸೂಕ್ತ ಮಾರ್ಗದರ್ಶನ ದೊರೆತಿದೆ ಎಂದು ಭಾವಿಸಿದ್ದೇನೆ ಎಂದರು.

ಇದೇ ವೇಳೆ ಗರ್ಭಧಾರಣೆಯ ಸಂದರ್ಭದಲ್ಲಿ ಮಾಡಬೇಕಾದ ವ್ಯಾಯಾಮಗಳ ಬಗ್ಗೆ ಆಸ್ಪತ್ರೆಯ ಫಿಸಿಯೋಥೆರಪಿಸ್ಟ್‌ಗಳು ಪ್ರಾಯೋಗಿಕ ಪ್ರದರ್ಶನದ ಮೂಲಕ ತಿಳಿಸಿಕೊಟ್ಟರು. ಆಹಾರ ತಜ್ಞರು ಆರೋಗ್ಯಕರ ಆಹಾರ ಪದ್ಧತಿ ಹಾಗೂ ಆರೋಗ್ಯಕರ ಪಾಕವಿಧಾನಗಳ ಕುರಿತು ತಿಳಿಸಿದರು. ಹೆರಿಗೆ ವಿಧಾನಗಳ ಬಗ್ಗೆಯೂ ಮಾಹಿತಿ ನೀಡಲಾಯಿತು. 80ಕ್ಕೂ ಹೆಚ್ಚು ಮಂದಿ ಪೋಷಕರು ಪಾಲ್ಗೊಂಡಿದ್ದರು.

ಮೈಸೂರಿನ ಕಾಂಗ್ರೆಸ್ ಮುಖಂಡ ಸೀತಾರಾಂರಿಂದ ಒಕ್ಕಲಿಗರ ಅವಹೇಳನಕ್ಕೆ ತೀವ್ರ ಖಂಡನೆ

ಮೈಸೂರು, ಆ.3– ಮೈಸೂರಿನ ಕಾಂಗ್ರೆಸ್ ಮುಖಂಡ, ಭೋವಿ ಅಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷ ಸೀತಾರಾಂ, ಒಕ್ಕಲಿಗ ಸಮುದಾಯವನ್ನು ಅವಾಚ್ಯವಾಗಿ ನಿಂದಿಸಿದ್ದಾರೆಂಬ ಆಡಿಯೋ ವೈರಲ್ ಆಗಿದ್ದು, ಅವರನ್ನು ಕೂಡಲೇ ಬಂಧಿಸಬೇಕೆಂದು ಒಕ್ಕಲಿಗ ಮುಖಂಡರು ಆಗ್ರಹಿಸಿದ್ದಾರೆ.

ಹೆಚ್.ಡಿ.ಕೋಟೆ ಕಬಿನಿ ಹಿನ್ನೀರು ಪ್ರದೇಶದಲ್ಲಿ ಕೆಂಚೇಗೌಡ ಎಂಬುವರಿಗೆ ಸೇರಿದ್ದ ಭೂಮಿ ವಿಚಾರವಾಗಿ ಸಂಘಟನೆಯೊಂದರ ಮುಖಂಡನೊಂದಿಗೆ ಸೀತಾರಾಂ ಮಾತನಾಡುವ ವೇಳೆ, ಒಕ್ಕಲಿಗರನ್ನು ಅವಾಚ್ಯ ಪದಗಳಿಂದ ನಿಂದಿಸಿದ್ದಾರೆ ಎನ್ನಲಾಗಿದೆ. ಈ ಸಂಭಾಷಣೆಯ ಆಡಿಯೋ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದ್ದು, ಒಕ್ಕಲಿಗ ಮುಖಂಡರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಮೈಸೂರು ಕಾಂಗ್ರೆಸ್ ಮುಖಂಡ ಸೀತಾರಾಂ ಎಂಬಾತ, ತನ್ನ ರಾಜಕೀಯ ತೆವಲಿಗೋಸ್ಕರ ಒಕ್ಕಲಿಗ ಸಮುದಾಯವನ್ನೇ ಅವಾಚ್ಯವಾಗಿ ನಿಂದಿಸಿದ್ದಾನೆ. ಈತ ಮಾಡುತ್ತಿರುವ ಅಕ್ರಮಗಳನ್ನು ಪ್ರಶ್ನೆ ಮಾಡಿದ ವ್ಯಕ್ತಿಯ ವಿರುದ್ಧ ಗೌಡರೆಲ್ಲಾ ಅಚಾಚ್ಯ ಪದಗಳಿಂದ ಎಂದು ಬಾಯಿಗೆ ಬಂದಂತೆ ಜಾತಿ ನಿಂದನೆ ಮಾಡಿದ್ದಾನೆ. ಇದು ಅತ್ಯಂತ ನಾಚಿಗೆಗೇಡಿನ ಸಂಗತಿ. ಇದು ಕೇವಲ ಒಬ್ಬ ವ್ಯಕ್ತಿಗಲ್ಲ, ಇಡೀ ಸಮುದಾಯಕ್ಕಾಗಿರುವ ಅವಮಾನ. ಕಾಂಗ್ರೆಸ್ ಮುಖಂಡನೊಬ್ಬನ ಇಂತಹ ಜಾತಿ ನಿಂದನೆ ಮಾತುಗಳು ಪಕ್ಷದ ನೈತಿಕ ಪತನವನ್ನು ತೋರಿಸುತ್ತದೆ. ಇದು ಜಾತಿ ವಿರೋಧಿ ದ್ವೇಷ ಪ್ರಚೋದನೆಗೆ ಸಮಾನ. ಯಾರನ್ನಾದರೂ ಜಾತಿಯಿಂದ ನಿಂದಿಸುವ ಹಕ್ಕು ಯಾರಿಗೂ ಇಲ್ಲ ಕೂಡಲೇ ಸೀತಾರಾಂನನ್ನು ಬಂಧಿಸಬೇಕು ಎಂದು ರಾಜ್ಯ ಒಕ್ಕಲಿಗರ ಸಂಘದ ನಿರ್ದೇಶಕರಾದ ಕೆ.ವಿ.ಶ್ರೀಧರ್, ಸಿ.ಜಿ.ಗಂಗಾಧರ್, ಬಿಜೆಪಿ ಮುಖಂಡ ಕಿರಣ್‌ಗೌಡ ಆಗ್ರಹಿಸಿದ್ದಾರೆ.

ಮೈಸೂರು ಮಿತ್ರ

ಕಿವಿ ಸಮಸ್ಯೆ ನಿವಾರಣೆಗೆ ಹಿಯರ್ ಜ್ಯಾಪ್ ಹಿಯರಿಂಗ್ ಸಂಸ್ಥೆ ಆರಂಭ



ಮೈಸೂರಿನ ಅಗ್ರಹಾರದ ಎಂ.ಜಿ.ರಸ್ತೆಯಲ್ಲಿ ಆರಂಭಗೊಂಡಿರುವ ಹಿಯರ್ ಜ್ಯಾಪ್ ಹಿಯರಿಂಗ್ ಕೇರ್ ಸೆಂಟರ್ ಅನ್ನು ಮೈಸೂರು-ಕೊಡಗು ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಭಾನುವಾರ ಉದ್ಘಾಟಿಸಿದರು.

ಮೈಸೂರು, ಆ.3(ಜಿಎ)–ಮೈಸೂರಿನ ಅಗ್ರಹಾರದ ಎಂ.ಜಿ.ರಸ್ತೆಯಲ್ಲಿ ಆರಂಭಗೊಂಡಿರುವ ಹಿಯರ್ ಜ್ಯಾಪ್ ಹಿಯರಿಂಗ್ ಕೇರ್ ಸೆಂಟರ್ ಅನ್ನು ಮೈಸೂರು–ಕೊಡಗು ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಭಾನುವಾರ ಉದ್ಘಾಟಿಸಿದರು.

ನಂತರ ಮಾತನಾಡಿ, ಹಿಯರ್ ಜ್ಯಾಪ್ ಸಂಸ್ಥೆಯು ದೇಶದಾದ್ಯಂತ 160ಕ್ಕೂ ಹೆಚ್ಚು ಶಾಖೆಗಳನ್ನು ಹೊಂದಿದ್ದು, ಉತ್ತಮ ಸೇವೆ ನೀಡುತ್ತಿದೆ. ಈಗ ಮೈಸೂರಿನ ಅಗ್ರಹಾರದಲ್ಲಿ ನೂತನ ಶಾಖೆಯನ್ನು ಆರಂಭಿಸಿದ್ದಾರೆ. ಹಿರಿಯರಾಗುತ್ತಿದ್ದಂತೆ ಸಾಮಾನ್ಯವಾಗಿ ಕಿವಿ ಸಮಸ್ಯೆ ಹೆಚ್ಚಳವಾಗುತ್ತದೆ. ಈ ಹಿನ್ನೆಲೆಯಲ್ಲಿ ಸಮಸ್ಯೆ ಇರುವವರು ಹಿಯರ್ ಜ್ಯಾಪ್‌ನಲ್ಲಿ ಉತ್ತಮ ಸೇವೆ ಪಡೆದುಕೊಳ್ಳಬಹುದು ಎಂದು ತಿಳಿಸಿದರು.

ಹಿಯರ್ ಜ್ಯಾಪ್‌ನ ಮುಖ್ಯ ಶ್ರವಣ ಶಾಸ್ತ್ರಜ್ಞ ಡಾ.ಪ್ರವೀಣ್ ಚೌತಿ ಮಾತನಾಡಿ, ನೂತನ ತಂತ್ರಜ್ಞಾನಕ್ಕೆ ಅನುಗುಣವಾಗಿ ಹಿಯರ್ ಜ್ಯಾಪ್ ಸಂಸ್ಥೆಯೂ ನಡೆಯುತ್ತಿದ್ದು, ಎಐ, ಜಿಪಿಎಸ್, ಮೊಬೈಲ್ ಮೂಲಕ ಸಾಧನ ಬಳಸುವುದು ಸೇರಿದಂತೆ ಅತ್ಯಾಧುನಿಕ ಸಾಧನಗಳನ್ನು ಅಳವಡಿಸಿಕೊಳ್ಳಲಾಗಿದೆ. ಈ ತಿಂಗಳ ಅಂತ್ಯದವರೆಗೆ ಉಚಿತವಾಗಿ ವೈದ್ಯಕೀಯ ಸಲಹೆ, ರಿಯಾಯಿತಿ ದರದಲ್ಲಿ ಸಾಧನಗಳನ್ನು ನೀಡಲಾಗುತ್ತದೆ ಎಂದರು.

ಕಾರ್ಯಕ್ರಮದಲ್ಲಿ ಹಿಯರ್ ಜ್ಯಾಪ್ ಸಂಸ್ಥೆಯ ಸಂಸ್ಥಾಪಕ ನಿರ್ದೇಶಕ ಎಸ್.ರಾಜಾ, ಬೆಂಗಳೂರಿನ ಆಯುಷ್ ಮಾಜಿ ನಿರ್ದೇಶಕ ಡಾ.ಎಂ.ಜಯರಾಂ, ನಾರ್ವೆ ವಿಜ್ಞಾನ, ತಂತ್ರಜ್ಞಾನ ವಿವಿಯ ಶ್ರವಣಶಾಸ್ತ್ರ ವಿಭಾಗದ ಪ್ರೊ.ಡಾ. ವಿನಯ್ ಸ್ವರ್ಣಲತಾ ನಾಗರಾಜ್ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಮೈಸೂರಿನ ಪ್ರತಿಷ್ಠೆಯ ವಿಚಾರವಾಗಿ ಸಂಸತ್ತಿನಲ್ಲಿ ಡ್ರಗ್ಸ್ ವಿರುದ್ಧ ಧ್ವನಿ ಎತ್ತಿದ್ದೇನೆ

ಟೀಕಿಸುವ ಬದಲು, ತಡೆಗಟ್ಟಲು ಸಹಕರಿಸಿ: ಯದುವೀರ್

ಮೈಸೂರು, ಆ.3(ಜಿಎ)–ಮೈಸೂರಿನ ಪ್ರತಿಷ್ಠೆಯ ವಿಚಾರವಾಗಿ ಸಂಸತ್ತಿನಲ್ಲಿ ಡ್ರಗ್ಸ್ ವಿರುದ್ಧ ಧ್ವನಿ ಎತ್ತಿದ್ದೇನೆ. ಟೀಕೆ ಮಾಡುವ ಬದಲು ರಾಜ್ಯ ಸರ್ಕಾರ ಕಾನೂನು ಸುವ್ಯವಸ್ಥೆ ಕಾಪಾಡಲಿ ಎಂದು ಸಂಸದ ಯದುವೀರ್ ಒಡೆಯರ್ ತಿಳಿಸಿದ್ದಾರೆ.

ಮೈಸೂರಿನ ಡ್ರಗ್ಸ್ ಘಟಕದ ಮೇಲೆ ದಾಳಿ ನಡೆಸಿದ ವಿಚಾರವಾಗಿ ಸಂಸತ್ತಿನಲ್ಲಿ ಧ್ವನಿ ಎತ್ತಿದ ವಿಚಾರವಾಗಿ ಟೀಕೆ ಮಾಡುವವರ ವಿರುದ್ಧ ಮಾಧ್ಯಮಗಳೊಂದಿಗೆ ಪ್ರತಿಕ್ರಿಯಿಸಿದ ಅವರು, ಮೈಸೂರಿನ ಹೊರವಲಯದಲ್ಲಿ ನಡೆಸುತ್ತಿದ್ದ ಡ್ರಗ್ಸ್ ಘಟಕದ ಮೇಲೆ ಮಹಾರಾಷ್ಟ್ರ ಪೊಲೀಸರು ದಾಳಿ ನಡೆಸಿ ಕೋಟ್ಯಾಂತರ ರೂ. ಮೌಲ್ಯದ ಡ್ರಗ್ಸ್ ವಶಪಡಿಸಿಕೊಂಡಿರುವುದು ಆಶ್ಚರ್ಯದ ಸಂಗತಿ. ಇದು ಮೈಸೂರಿನ ಮರ್ಯಾದೆ, ಪ್ರತಿಷ್ಠೆಯ ಪ್ರಶ್ನೆಯಾಗಿರುವುದರಿಂದ ಸಂಸತ್ತಿನಲ್ಲಿ ಧ್ವನಿ ಎತ್ತಿದ್ದೇನೆ. ಅದನ್ನು ಟೀಕಿಸುವ ಬದಲು ತಡೆಗಟ್ಟಲು ಸಹಕರಿಸಿ ಎಂದರು.

ನಗರದಲ್ಲಿ ನಡೆಯುತ್ತಿರುವ ಡ್ರಗ್ಸ್ ತಯಾರಿಕೆ ಬಗ್ಗೆ ಸ್ಥಳೀಯ ಪೊಲೀಸರಿಗೆ ಮಾಹಿತಿ ಇಲ್ಲವಾದರೇ ಹೇಗೆ ಎಂದು ಅವರು ಪ್ರಶ್ನಿಸಿ, ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ನಿರ್ವಹಣೆ ಸರಿಯಾಗಿ ನಡೆಯುತ್ತಿಲ್ಲ. ಮಹಾರಾಷ್ಟ್ರದ ಪೊಲೀಸರು ಇಲ್ಲಿ ಬಂದು ದಾಳಿ ನಡೆಸುತ್ತಾರೆ ಎಂದರೆ, ನಮ್ಮ ಕಾನೂನು ವ್ಯವಸ್ಥೆ ಹೇಗಿದೆ ಎಂದು ನಾವು ಅರ್ಥಮಾಡಿಕೊಳ್ಳಬೇಕಿದೆ. ರಾಜ್ಯದಲ್ಲಿ ಆಡಳಿತ ನಡೆಸುತ್ತಿರುವ ಸರ್ಕಾರ ಇಂತಹ ಪ್ರಕರಣವನ್ನು ಗಂಭೀರವಾಗಿ ತೆಗೆದುಕೊಳ್ಳಬೇಕಿದೆ ಹೊರತು ಟೀಕೆ ಮಾಡುವುದು ತರವಲ್ಲ ಎಂದು ಯದುವೀರ್ ಒಡೆಯರ್ ತಿಳಿಸಿದರು.

ಮಾಜಿ ಸಂಸದ ಪ್ರಜ್ವಲ್ ರೇವಣ್ಣ ಜೀವಾವಧಿ ಶಿಕ್ಷೆ ವಿಚಾರವಾಗಿ ಪ್ರತಿಕ್ರಿಯಿಸಿ, ಕಾನೂನಿನ ಮುಂದೆ ಎಲ್ಲರೂ ಸಾಮಾನ್ಯರೆ. ಎಲ್ಲರೂ ಕಾನೂನಿಗೆ ತಲೆ ಬಾಗಬೇಕು. ದೇಶದಲ್ಲಿ ನ್ಯಾಯಾಂಗ ವ್ಯವಸ್ಥೆ ಸುಭದ್ರವಾಗಿರುವುದರಿಂದ ಸ್ಪಷ್ಟವಾದ ತೀರ್ಪು ನೀಡಿದ್ದು, ಸಂತ್ರಸ್ತೆಗೆ ನ್ಯಾಯ ಸಿಕ್ಕಿದೆ ಎಂದರು.

ಮೈಸೂರು ವಾರಿಯರ್ಸ್ ಮಹಿಳಾ ಕ್ರಿಕೆಟ್ ತಂಡಕ್ಕೆ ಪ್ರಮೋದಾದೇವಿ ಶುಭ ಹಾರೈಕೆ



ಮೈಸೂರು ಅರಮನೆ ನಿವಾಸದಲ್ಲಿ ಮೈಸೂರು ವಾರಿಯರ್ಸ್ ಮಹಿಳಾ ಕ್ರಿಕೆಟ್ ತಂಡದ ಸದಸ್ಯರನ್ನು ರಾಜವಂಶಸ್ಥೆ ಶ್ರೀಮತಿ ಪ್ರಮೋದಾದೇವಿ ಒಡೆಯರ್ ಅಭಿನಂದಿಸಿದರು. ಸೈಕಲ್ ಪ್ಯೂರ್ ಅಗರಬತ್ತಿ ಮಾಲೀಕತ್ವದ ತಂಡದೊಂದಿಗೆ ಆರ್.ಎನ್.ಮೂರ್ತಿ ಅವರ ಪತ್ನಿ ಜಾಹ್ನವಿ ಮೂರ್ತಿ, ಎನ್.ಆರ್. ಗ್ರೂಪ್ ಪಾಲುದಾರ ಅನಿರುದ್ ರಂಗ ಅವರ ಪತ್ನಿ ಅಪರ್ಣಾ ರಂಗ ಇದ್ದರು. ಇದಕ್ಕೂ ಮುನ್ನಾ ದಿನ ಹೆಡ್‌ಕೋಚ್ ಕರುಣಾ ಜೈನ್ ಮತ್ತು ತಂಡದ ಸದಸ್ಯರು ಚಾಮುಂಡಿಬೆಟ್ಟಕ್ಕೆ ತೆರಳಿ ತಾಯಿ ಚಾಮುಂಡೇಶ್ವರಿ ದರ್ಶನ ಪಡೆದರು. ಕೆಎಸ್‌ಸಿಎ ಮಹಾರಾಣಿ ಟ್ರೋಫಿ ಟಿ–20 ಪಂದ್ಯಾವಳಿ ಬೆಂಗಳೂರಿನಲ್ಲಿ ಆಗಸ್ಟ್ 4ರಿಂದ 10ರವರೆಗೆ ನಡೆಯಲಿದೆ.

ಮೈಸೂರಲ್ಲಿ ಗೌರಿ–ಗಣೇಶ ಹಬ್ಬದ ಸಂಭ್ರಮ

ವಿವಿಧೆಡೆ ಬಗೆಬಗೆಯ ಗಣಪನ ಮಾರಾಟ ಜೋರು!





ಮೈಸೂರು, ಆ.3(ವಿವಿಹೆಚ್)– ಏಕದಂತಾಯ ವಿದ್ಮಹೇ ವಕ್ರತುಂಡಾಯ ಧೀಮಹಿ ತನ್ನೋ ದಂತಿಃ ಪ್ರಚೋದಯಾತ್ ಎಂಬಂತೆ ಎಲ್ಲಾ ವಿಘ್ನಗಳನ್ನು ತೊಡೆಯುವ ದೇವಾನುದೇವತೆಗಳಲ್ಲಿ ಮೊದಲಿಗ, ಹಿಂದೂ ಪುರಾಣಗಳ ಅತೀ ಪ್ರಮುಖ ದೇವರಾದ ಗಣೇಶನ ಹಬ್ಬಕ್ಕೆ ಭರದ ಸಿದ್ಧತೆ ಸಾಗುತ್ತಿದೆ.

ಇದೇ ಆ.27ರಂದು ದೇಶಾದ್ಯಂತ ಗೌರಿ–ಗಣೇಶ ಹಬ್ಬವನ್ನು ಸಡಗರ, ಸಂಭ್ರಮದಿಂದ ಆಚರಿಸುತ್ತಾರೆ. ಸಕಲ ಜೀವ–ಜಂತುಗಳ ಕಷ್ಟಗಳನ್ನು ನಿವಾರಿಸಿ, ಮುಕ್ತಿಯ ಮಾರ್ಗ ತೋರುವ ಗಣೇಶನಿಗೆ ದೇಶಾದ್ಯಂತ ವಿವಿಧ ಹೆಸರುಗಳಿಂದ ಹಬ್ಬ ಆಚರಿಸುವ ಮೂಲಕ ವಿಘ್ನ ವಿನಾಶಕ, ಮೂಷಿಕ ವಾಹನನಾದ ಗಣೇಶನ ಕೃಪೆಗೆ ಪಾತ್ರರಾಗುತ್ತಾರೆ.

ಗೌರಿ–ಗಣೇಶ ಹಬ್ಬ ಕರ್ನಾಟಕದ ಧಾರ್ಮಿಕ ಹಬ್ಬಗಳಲ್ಲೇ, ಹಿಂದೂ ಸಾಂಪ್ರದಾಯಿಕ ಹಬ್ಬಗಳಲ್ಲೇ ವಿಶಿಷ್ಟವಾದ ಒಂದು ಹಬ್ಬ. ಗೌರಿ–ಗಣೇಶ ಹಬ್ಬದ ವಿಶೇಷವೇ, ವಿಶೇಷ ಮೂರ್ತಿ ಪ್ರತಿಷ್ಠಾಪನೆಯಾಗಿದೆ. ಮನೆಯಲ್ಲಿ ಗೌರಿ ಕೂರಿಸಿ ಮುತ್ತೈದೆಯರು ಹಬ್ಬವನ್ನು ಸಂಭ್ರಮಿಸಿದರೇ, ಬುದ್ಧಿವಂತಿಕೆ ಮತ್ತು ಶ್ರೀಮಂತಿಕೆಗೆ ಹೆಸರಾದ ಗಣೇಶನ ಹಬ್ಬವನ್ನು ಹಲವು ದಿನಗಳವರೆಗೆ ಪ್ರತಿಷ್ಠಾಪಿಸಿ, ಪೂಜಿಸಲಾಗುತ್ತದೆ.

ಮೋದಕನಿಗೆ ಪ್ರಿಯವಾದ ತಿನಿಸುಗಳನ್ನು ಮಾಡಿ ನೈವೇದ್ಯ ಇಡುತ್ತಾರೆ. ಹಾಡು, ನೃತ್ಯ ಸಂಭ್ರಮದೊಂದಿಗೆ ಗಣೇಶನನ್ನು ನೀರಿನಲ್ಲಿ ವಿಸರ್ಜನೆ ಮಾಡುವ ಮೂಲಕ ಹಬ್ಬಕ್ಕೆ ನಾಂದಿಯಾಡುತ್ತಾರೆ. ಇಂತಹ ವಿಶಿಷ್ಟವಾದ ಹಬ್ಬಕ್ಕೆ ಅಗತ್ಯವಾಗಿ ಬೇಕಾದ ಗಣೇಶನ ಮೂರ್ತಿಗೆ ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ಭಾರಿ ಡಿಮ್ಯಾಂಡ್ ಇದೆ. ಪಿಒಪಿ (ಪ್ಲಾಸ್ಟರ್ ಆಫ್ ಪ್ಯಾರಿಸ್) ಮೂರ್ತಿಗಳು ಹಾಗೂ ಮಾಲೀನ್ಯಕಾರಕ ಬಣ್ಣಗಳಿಗೆ ನೋ ಎಂದಿರುವ ಸರ್ಕಾರದ ಆದೇಶದ ಬೆನ್ನಲ್ಲೇ ಮೈಸೂರು ನಗರದಾದ್ಯಂತ ಮಣ್ಣಿನ ಗಣಪ ಮೆರೆಯುತ್ತಿದ್ದಾನೆ. 6ರಿಂದ 10 ಅಡಿಗಳವರೆಗಿನ ಗಣೇಶ ಮೂರ್ತಿಗಳು ಜನರನ್ನು ಸೆಳೆಯುತ್ತಿವೆ. ಗಣೇಶ ಹಬ್ಬಕ್ಕೆ ಕೆಲವೇ ದಿನಗಳು ಇರುವುದರಿಂದ ಜನರಿಗೆ ಆಕರ್ಷಕವಾಗುವ ಗಣೇಶ ಮೂರ್ತಿಗಳನ್ನು ತಂದು ಮಾರಾಟ ಮಾಡಲಾಗುತ್ತಿದೆ.

ವಿವಿಧ ಬಗೆಯ ಗಣೇಶ ಮೂರ್ತಿಗಳು: ನಗರದ ಒಂಟಿಕೊಪ್ಪಲು, ವಿಜಯನಗರ, ಹೆಬ್ಬಾಳ ಮಾರುಕಟ್ಟೆ, ಕುಂಬಾರಕೊಪ್ಪಲು, ಕಾಳಿದಾಸ ರಸ್ತೆ ಸೇರಿದಂತೆ ಹಲವು ಕಡೆಗಳಲ್ಲಿ ಮಣ್ಣಿನ ಗಣೇಶನ ಮೂರ್ತಿಗಳನ್ನು ಮಾರಾಟಕ್ಕೆ ಇಡಲಾಗಿದೆ. ವಿಶೇಷವಾಗಿ ಸ್ಟೋನ್ ವರ್ಕ್, ಪೇಪರ್ ಮೋಲ್ಡ್ ಸೇರಿದಂತೆ ಮಣ್ಣಿನ ಗಣಪ ಈ ಬಾರಿ ಹಲವಾರು ರೂಪ ತಾಳಿದ್ದಾನೆ. ನಾಗರಹಾವಿನ ಗಣೇಶ, ನವಿಲು, ಮೂಷಿಕ, ನಂದಿ, ಸಿಂಹ, ಈಶ್ವರ, ಕಮಲ, ಗೌರಿ, ಆನೆ ಗಧಾದಾರಿ ಗಣೇಶ ಸೇರಿದಂತೆ ಹಲವು ಬಗೆಯ ಮೂರ್ತಿಗಳು ಖರೀದಿಗೆ ಲಭ್ಯವಿದೆ. ಜೊತೆಗೆ ಈ ಬಾರಿ ಶಿವಾಜಿ ಮಹಾರಾಜರೊಂದಿಗಿನ ಗಣೇಶ, ಅಶ್ವ ದಾರಿ ಗಣಪ, ಆಂಜನೇಯನೊಂದಿಗೆ ಗಣಪ, ಶಿವನ ಮಸಾಣ ರುದ್ರ ಗಣಪ ಸೇರಿದಂತೆ ಹಲವು ಬಗೆಯ ಗಣಪ ಮಾರುಕಟ್ಟೆಯಲ್ಲಿ ತನ್ನ ಕಮಾಲು ತೋರಲು ಸಿದ್ಧನಾಗಿದ್ದಾನೆ.

ನಗರದ ಹಲವೆಡೆ ಗಣೇಶ ಮೂರ್ತಿಗಳ ಮಾರಾಟ ಕೇಂದ್ರಗಳು ತೆರೆದಿವೆ. ಈ ಬಾರಿ ಹಬ್ಬವನ್ನು ಪರಿಸರ ಸ್ನೇಹಿಯಾಗಿ ಆಚರಿಸಲು ಜನರು ಉತ್ಸುಕರಾಗಿದ್ದಾರೆ. ಕಳೆದ ಬಾರಿ ಗಣೇಶ ಮೂರ್ತಿ ಮಾರಾಟದಲ್ಲಿ ಜನರಿಂದ ಉತ್ತಮ ಸ್ಪಂದನೆ ದೊರೆತ ಬೆನ್ನಲ್ಲೇ ಮಾರುಕಟ್ಟೆಗೆ ಇನ್ನು ಹೆಚ್ಚಿನ ಆಕರ್ಷಕ ಗಣಪ ಕಾಲಿಟ್ಟಿದ್ದು, ವ್ಯಾಪಾರಿಗಳ ಕೈ ಹಿಡಿಯಲಿದ್ದಾನಾ ಎಂಬುದನ್ನು ಕಾದುನೋಡಬೇಕಿದೆ.

> “ಕಳೆದ 15 ವರ್ಷಗಳಿಂದ ಒಂಟಿಕೊಪ್ಪಲಿನ ಚಂದ್ರಮೌಳೇಶ್ವರಿ ದೇವಾಲಯ ರಸ್ತೆಯಲ್ಲಿ ಗಣೇಶನಮೂರ್ತಿ ಮಾರಾಟದಲ್ಲಿ ತೊಡಗಿಸಿಕೊಂಡಿದ್ದೇನೆ. ನೇರವಾಗಿ ಕೋಲಾರ, ಬೆಂಗಳೂರಿನಿಂದ ಗಣೇಶ ವಿಗ್ರಹಗಳ ಕೊಂಡುಕೊಂಡು ಇಲ್ಲಿ ಮಾರಾಟ ಮಾಡುತ್ತೇವೆ. ನಮ್ಮ ಬಳಿ ಯಾವುದೇ ಪಿಒಪಿ ವಿಗ್ರಹಗಳಿಲ್ಲ. ಆರಂಭಿಕ ಬೆಲೆ 15 ಸಾವಿರದಿಂದ 25 ಸಾವಿರವರೆಗಿನ ಪರಿಸರ ಸ್ನೇಹಿ ಮಣ್ಣಿನ ಗಣೇಶ ಮೂರ್ತಿಗಳು ದೊರೆಯುತ್ತವೆ.
> –ಶ್ರೀನಿವಾಸ್(ಉಪ್ಪಿ), ವ್ಯಾಪಾರಿ.

> “ನಮ್ಮಲ್ಲಿ ಎಲ್ಲಾ ವಿಧವಾದ ವಿವಿಧ ಅತ್ಯಾಕರ್ಷಕ ಗಣೇಶನ ಮೂರ್ತಿ ದೊರೆಯುತ್ತದೆ. ಸ್ಟೋನ್ ವರ್ಕ್, ಪೇಪರ್ ಮೋಲ್ಡ್, ಮಣ್ಣಿನ ಗಣಪತಿಗಳು ನಮ್ಮಲ್ಲಿ ದೊರೆಯುತ್ತವೆ. ಸುಮಾರು 60ಕ್ಕೂ ಹೆಚ್ಚಿನ ಕಲಾಕೃತಿಗಳು ನಮ್ಮ ಬಳಿಯಿದ್ದು, ಎಲ್ಲಾ ಪರಿಸರ ಸ್ನೇಹಿ ಗಣಪತಿಗಳು. ಆರಂಭಿಕ ಬೆಲೆ 8 ಸಾವಿರದಿಂದ 35 ಸಾವಿರವರೆಗಿನ ಗಣಪ ಮೂರ್ತಿಗಳು ನಮ್ಮಲ್ಲಿ ದೊರೆಯುತ್ತವೆ.
> – ಪುನೀತ್, ವ್ಯಾಪಾರಿ, ಕುಂಬಾರಕೊಪ್ಪಲು ಮಾರುಕಟ್ಟೆ.

ಮೈಸೂರಲ್ಲಿ ಪ್ರೌಢಶಾಲಾ ಕನ್ನಡ ಭಾಷಾ ಶಿಕ್ಷಕರಿಗೆ ಸನ್ಮಾನ



ಶ್ರೀ ಬಸವೇಶ್ವರ ಸಾಂಸ್ಕೃತಿಕ ಪ್ರತಿಷ್ಠಾನದಿಂದ ನಮನ ಕಲಾಮಂಟಪದಲ್ಲಿ ನಡೆದ ಕಾರ್ಯಕ್ರಮದಲ್ಲಿ ಮೈಸೂರು ಜಿಲ್ಲಾ ಮಟ್ಟದ ಸರ್ಕಾರಿ ಪ್ರೌಢಶಾಲಾ ಕನ್ನಡ ಭಾಷಾ ಶಿಕ್ಷಕರಾದ ಹೆಚ್.ಎನ್.ನಾಗರಾಜಪ್ಪ, ಎಂ.ಪಿ.ಅನುಪಮ, ಕೀರ್ತಿಪ್ರಸಾದ್, ಎಸ್.ಜಯರಾಮೇಗೌಡ, ಹೆಚ್.ಭಾಗ್ಯ, ಕೆ.ಸಿ.ಶಿವಣ್ಣ, ಸಿ.ಶ್ರೀನಿವಾಸ, ಸಲೀಲ ಹೆಗಡೆ ಅವರನ್ನು ಅಭಿನಂದಿಸಲಾಯಿತು.

ಮೈಸೂರು, ಆ.3(ಜಿಎ)–ಶ್ರೀ ಬಸವೇಶ್ವರ ಸಾಂಸ್ಕೃತಿಕ ಪ್ರತಿಷ್ಠಾನದ ವತಿಯಿಂದ ಕೃಷ್ಣಮೂರ್ತಿಪುರಂನಲ್ಲಿರುವ ನಮನ ಕಲಾಮಂಟಪದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮೈಸೂರು ಜಿಲ್ಲಾ ಮಟ್ಟದ ಸರ್ಕಾರಿ ಪ್ರೌಢಶಾಲಾ ಕನ್ನಡ ಭಾಷಾ ಶಿಕ್ಷಕರನ್ನು ಅಭಿನಂದಿಸಲಾಯಿತು.

ಕಾರ್ಯಕ್ರಮವನ್ನು ಉದ್ಘಾಟಿಸಿದ ಜೆಎಸ್‌ಎಸ್ ಮಹಾವಿದ್ಯಾಪೀಠದ ನೌಕರರ ಗೃಹ ನಿರ್ಮಾಣ ಸಹಕಾರ ಸಂಘದ ನಿರ್ದೇಶಕ ಕಲ್ಮಳ್ಳಿ ನಟರಾಜು ಮಾತನಾಡಿ, ಶಿಕ್ಷಕರು ಜಾತಿ, ಧರ್ಮ ನೋಡದೇ ಮಕ್ಕಳ ಭವಿಷ್ಯದ ದೃಷ್ಟಿಯಿಂದ ಪಾಠ ಮಾಡುವ ಮೂಲಕ ಪ್ರಪಂಚಕ್ಕೆ ಶಿಕ್ಷಕರು ಜ್ಞಾನದ ಜ್ಯೋತಿ ನೀಡುತ್ತಿದ್ದಾರೆ ಎಂದರು.

ಕಳೆದ ವರ್ಷ ರಾಜ್ಯದ ಎಲ್ಲಾ ಜಿಲ್ಲೆಗಳ ಶಾಲೆಗಳಲ್ಲಿ ಉತ್ತಮ ಫಲಿತಾಂಶ ಬಂದಿದೆ. ಅದಕ್ಕೆ ಶಿಕ್ಷಕರ ಪರಿಶ್ರಮವೇ ಕಾರಣವಾಗಿತ್ತು. ಯಾವುದೇ ಪ್ರತಿಫಲಾಪೇಕ್ಷೆ ಬಯಸದೇ ಸೇವೆ ಮಾಡುತ್ತಿರುವ ಜಿಲ್ಲಾ ಮಟ್ಟದ ಸರ್ಕಾರಿ ಪ್ರೌಢಶಾಲಾ ಕನ್ನಡ ಭಾಷಾ ಶಿಕ್ಷಕರನ್ನು ಅಭಿನಂದಿಸುತ್ತಿರುವುದು ಶ್ಲಾಘನೀಯ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಕಾರ್ಯಕ್ರಮದಲ್ಲಿ ಶಿಕ್ಷಕರಾದ ಹೆಚ್.ಎನ್.ನಾಗರಾಜಪ್ಪ, ಎಂ.ಪಿ.ಅನುಪಮ, ಟಿ.ಎಂ.ಕೀರ್ತಿಪ್ರಸಾದ್, ಎಸ್.ಜಯರಾಮೇಗೌಡ, ಹೆಚ್.ಭಾಗ್ಯ, ಕೆ.ಸಿ.ಶಿವಣ್ಣ, ಸಿ.ಶ್ರೀನಿವಾಸ, ಸಲೀಲ ಹೆಗಡೆ ಅವರನ್ನು ಅಭಿನಂದಿಸಲಾಯಿತು.

ಈ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ಶಿವಾರ್ಚಕ ಸಂಘದ ಗೌರವಾಧ್ಯಕ್ಷ ಅಂಬಳೆ ಶಿವಣ್ಣ, ಕನ್ನಡ ಸಾಹಿತ್ಯ ಕಲಾಕೂಟದ ಅಧ್ಯಕ್ಷ ಎಂ.ಚಂದ್ರಶೇಖರ್, ಚುಟುಕು ಯುಗಾಚಾರ್ಯ ಡಾ.ಎಂ.ಜಿ.ಆರ್. ಅರಸ್, ಗೋಲ್ಡ್ ಸುರೇಶ್, ಮಂಗಳ ಮುದ್ದುಮಾದಪ್ಪ, ಪ್ರತಿಷ್ಠಾನದ ಅಧ್ಯಕ್ಷ ಬಸವರಾಜೇಂದ್ರ ಸ್ವಾಮಿ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ವಿದ್ಯುತ್ ವ್ಯತ್ಯಯ

ಮೈಸೂರು: ಆಗಸ್ಟ್ 6, 7ರಂದು ಬೆಳಗ್ಗೆ 10 ಗಂಟೆಯಿಂದ ಸಂಜೆ 7 ಗಂಟೆಯವರೆಗೆ ನಂಜನಗೂಡು ಉಪವಿಭಾಗ–2ರ ಹುಲ್ಲಹಳ್ಳಿ ಶಾಖೆಯ ಹುಲ್ಲಹಳ್ಳಿ ಟೌನ್ ವ್ಯಾಪ್ತಿಯಲ್ಲಿ ರಸ್ತೆ ಅಗಲೀಕರಣ ಕಾಮಗಾರಿ ಪ್ರಯುಕ್ತ ವಿದ್ಯುತ್ ಕಂಬಗಳನ್ನು ಸ್ಥಳಾಂತರಿಸುವ ಕಾಮಗಾರಿ ಹಮ್ಮಿಕೊಂಡಿರುವುದರಿಂದ ಹುಲ್ಲಹಳ್ಳಿ ಟೌನ್ ಫೀಡರ್ ವ್ಯಾಪ್ತಿಯಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.

ಪಿಹೆಚ್.ಡಿ ಪದವಿ



ಮೈಸೂರು: ಡಾ.ವೈ.ಹೆಚ್.ಶರತ್ ಕುಮಾರ್ ಅವರ ಮಾರ್ಗದರ್ಶನದಲ್ಲಿ ಬಿ.ಮಂಜುನಾಥ್ ಅವರು ಗಣಕ ವಿಜ್ಞಾನ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿವಿ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಆ.13ರಂದು ಮೈಸೂರಲ್ಲಿ ಮನೆ ಮನೆಗೆ ಮಾಚಿದೇವ ಕಾರ್ಯಕ್ರಮ

ಮೈಸೂರು ಜಿಲ್ಲಾ ವೀರ ಮಡಿವಾಳ ಸಂಘದ ಸಭೆಯಲ್ಲಿ ಅದ್ಧೂರಿಯಾಗಿ ಕಾರ್ಯಕ್ರಮ ನಡೆಸಲು ನಿರ್ಧಾರ



ಮೈಸೂರಿನ ಜಲದರ್ಶಿನಿ ಸರ್ಕಾರಿ ಅತಿಥಿಗೃಹದಲ್ಲಿ ಮೈಸೂರು ಜಿಲ್ಲಾ ವೀರ ಮಡಿವಾಳ ಸಂಘದ ವತಿಯಿಂದ 'ಮನ ಮನೆಗೆ ಮಾಚಿದೇವ' ಕಾರ್ಯಕ್ರಮದ ಪೂರ್ವಭಾವಿ ಸಭೆ ನಡೆಸಲಾಯಿತು.

ಮೈಸೂರು,ಆ.3(ಜಿಎ)–ಚಿತ್ರದುರ್ಗದ ಶ್ರೀ ಮಾಚಿದೇವ ಮಹಾಸಂಸ್ಥಾನ ಮಠದ ಪೀಠಾಧಿಪತಿ ಡಾ.ಶ್ರೀ ಬಸವ ಮಾಚಿದೇವ ಸ್ವಾಮೀಜಿ ಅವರು ಆ.13ರಂದು ಮೈಸೂರಿನಲ್ಲಿ ಹಮ್ಮಿಕೊಂಡಿರುವ 'ಮನೆ ಮನೆಗೆ ಮಾಚಿದೇವ' ಕಾರ್ಯಕ್ರಮವನ್ನು ಮೈಸೂರು ಜಿಲ್ಲಾ ವೀರ ಮಡಿವಾಳ ಸಂಘದ ಅಧ್ಯಕ್ಷ ಸತ್ಯನಾರಾಯಣ ಮತ್ತು ಗೌರವಾಧ್ಯಕ್ಷ ಬಿ.ಜಿ.ಕೇಶವ ಅವರ ನೇತೃತ್ವದಲ್ಲಿ ಸಂಭ್ರಮದಿಂದ ನಡೆಸಲು ಜಿಲ್ಲಾ ಮತ್ತು ತಾಲೂಕು ಮಡಿವಾಳ ಸಂಘಟನೆಯ ಪದಾಧಿಕಾರಿಗಳು ಮತ್ತು ಸಮುದಾಯದ ಮುಖಂಡರು ತೀರ್ಮಾನಿಸಿದರು.

ಮೈಸೂರಿನ ಜಲದರ್ಶಿನಿ ಸರ್ಕಾರಿ ಅತಿಥಿಗೃಹದಲ್ಲಿ ಮೈಸೂರು ಜಿಲ್ಲಾ ವೀರ ಮಡಿವಾಳ ಸಂಘದ ಅಧ್ಯಕ್ಷ ಸತ್ಯನಾರಾಯಣ ಅವರ ಅಧ್ಯಕ್ಷತೆಯಲ್ಲಿ ನಡೆದ ಪೂರ್ವಭಾವಿ ಸಭೆಯಲ್ಲಿ ಜಿಲ್ಲಾ ಮತ್ತು ತಾಲೂಕು ಮಡಿವಾಳ ಮುಖಂಡರು ಈ ತೀರ್ಮಾನ ಕೈಗೊಂಡರು.

ಜಿಲ್ಲಾಧ್ಯಕ್ಷ ಸತ್ಯನಾರಾಯಣ ಮಾತನಾಡಿ, ಕಾರ್ಯಕ್ರಮವು ಆ.13ರಂದು ನಗರದ ಜೆಎಲ್‌ಬಿ ರಸ್ತೆಯಲ್ಲಿರುವ ರೋಟರಿ ಸಭಾಂಗಣದಲ್ಲಿ ಬೆಳಿಗ್ಗೆ 10.30ಕ್ಕೆ ನಡೆಯಲಿದೆ. ಇದೇ ಮೊದಲ ಬಾರಿಗೆ ಶ್ರೀ ಬಸವ ಮಾಚಿದೇವ ಸ್ವಾಮೀಜಿ ಮೈಸೂರಿನಲ್ಲಿ ಸಮುದಾಯದ ವೇದಿಕೆ ಕಾರ್ಯಕ್ರಮದಲ್ಲಿ ಭಾಗವಹಿಸುತ್ತಿದ್ದು, ಅವರಿಗೆ ಸಾಂಪ್ರದಾಯಿಕ ಸ್ವಾಗತ ನೀಡಲಾಗುತ್ತದೆ. ಮೈಸೂರು ಜಿಲ್ಲೆಯಿಂದ ಸುಮಾರು 500 ಜನರು ಭಾಗವಹಿಸಲಿದ್ದಾರೆ ಎಂದು ತಿಳಿಸಿದರು.

ಮುಖ್ಯ ಅತಿಥಿಗಳಾಗಿ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಸಂಸದರಾದ ಯದುವೀರ್ ಒಡೆಯರ್, ಸುನೀಲ್ ಬೋಸ್ ಸೇರಿದಂತೆ ಮೈಸೂರು ಜಿಲ್ಲೆಯ ಎಲ್ಲಾ ಶಾಸಕರು ಮತ್ತು ವಿವಿಧ ಸಂಘ–ಸಂಸ್ಥೆಗಳ ಅಧ್ಯಕ್ಷರನ್ನು ಕಾರ್ಯಕ್ರಮಕ್ಕೆ ಆಹ್ವಾನಿಸಲು ತೀರ್ಮಾನಿಸಲಾಗಿದೆ ಎಂದು ವಿವರಿಸಿದರು.

ಸಭೆಯಲ್ಲಿ ಮೈಸೂರು ಜಿಲ್ಲಾ ವೀರ ಮಡಿವಾಳ ಸಂಘದ ಪ್ರಧಾನ ಕಾರ್ಯದರ್ಶಿ ಕೆಂಪಶೆಟ್ಟಿ, ಜಿಲ್ಲಾ ಖಜಾಂಚಿ ರವಿಚಂದ್ರ, ರಾಜ್ಯಾಧ್ಯಕ್ಷ ಮಂಜುಶೆಟ್ಟಿ, ಜಿಲ್ಲಾ ಉಪಾಧ್ಯಕ್ಷ ಬೃಂದಾವನ ಮಹೇಶ್, ಹುಣಸೂರು ತಾಲೂಕು ಅಧ್ಯಕ್ಷ ರವಿ ಚಿಲ್ಕುಂದ, ನಂಜನಗೂಡು ತಾಲೂಕು ಅಧ್ಯಕ್ಷ ಪ್ರಸನ್ನ ಮತ್ತು ಚಂದ್ರು, ಮೈಸೂರು ತಾಲ್ಲೂಕು ಅಧ್ಯಕ್ಷ ಸಂತೋಷ ಕಿರಾಳು, ತಿ.ನರಸೀಪುರ ತಾಲೂಕು ಅಧ್ಯಕ್ಷ ಕುರುಬೂರು ಮಹದೇವಸ್ವಾಮಿ, ಸಾಲಿಗ್ರಾಮ ತಾಲೂಕು ಅಧ್ಯಕ್ಷ ಹರ್ಷವರ್ಧನ್, ಉಪಾಧ್ಯಕ್ಷ ಬಲರಾಮ್, ಖಜಾಂಚಿ ವೆಂಕಟೇಶ್, ಕೆ.ಆರ್.ನಗರ ತಾಲೂಕು ಅಧ್ಯಕ್ಷ ಕುಮಾರ್, ಪಿರಿಯಾಪಟ್ಟಣ ಮಡಿವಾಳ ಸಮುದಾಯದ ಮುಖಂಡ ಕೆ.ಮಹದೇವ, ಜಿಲ್ಲಾ ಸಂಚಾಲಕ ಹನಗೂಡು ಬಸವರಾಜು, ಜಿಲ್ಲಾ ಸಮಿತಿ ನಿರ್ದೇಶಕ ಮಹೇಶ್, ಜಿಲ್ಲಾ ಸಂಚಾಲಕ ಕೆಂಬಾಲ್ ಶ್ರೀರಾಮ್, ಜಿಲ್ಲಾ ನಿರ್ದೇಶಕ ಹಾಡ್ಯ ಶ್ರೀನಿವಾಸ್, ನಂಜನಗೂಡು ತಾಲೂಕು ಗೌರವ ಅಧ್ಯಕ್ಷ ಚಂದ್ರಶೇಖರ್, ಶಿವಣ್ಣ, ಮಡುವಿನಹಳ್ಳಿ ಮಹದೇವಣ್ಣ, ಪ್ರಧಾನ ಕಾರ್ಯದರ್ಶಿ ಬಸವರಾಜು, ಮುಖಂಡರಾದ ಶೇಖರ್, ಸಿದ್ದಲಿಂಗಪುರ ಮಹದೇವು, ಜಿಲ್ಲಾ ಮಹಿಳಾ ಅಧ್ಯಕ್ಷರಾದ ವಸಂತಕುಮಾರಿ, ಹೆಚ್.ಡಿ. ಕೋಟೆ ತಾಲೂಕು ಅಧ್ಯಕ್ಷ ರಂಗಸ್ವಾಮಿ, ಜಿಲ್ಲಾ ನಿರ್ದೇಶಕರಾದ ರಮೇಶ್, ಜಿಲ್ಲಾ ಮಹಿಳಾ ಪ್ರಧಾನ ಕಾರ್ಯದರ್ಶಿ ಜಯಲಕ್ಷ್ಮೀ, ಹುಣಸೂರು ತಾಲೂಕು ಪ್ರಧಾನ ಕಾರ್ಯದರ್ಶಿ ಹೊಸ ರಾಮನಹಳ್ಳಿ ರಘು, ಮಡಿವಾಳ ಮುಖಂಡ ಚಿಕ್ಕಣ್ಣ, ಮಿರ್ಲೆ ಚಂದ್ರು, ಸತೀಶ್, ಸಾಲಿಗ್ರಾಮ ತಾಲ್ಲೂಕು ಪ್ರಧಾನ ಕಾರ್ಯದರ್ಶಿ ವಿಶ್ವನಾಥ್, ಮಡಿಕಟ್ಟೆ ಮುಖಂಡರು ಪಾಲ್ಗೊಂಡಿದ್ದರು.

ದೇಶ - ವಿದೇಶ

ನಾಲ್ವರು ಭಾರತೀಯ ಹಿರಿಯ ನಾಗರಿಕರು ಅಪಘಾತದಲ್ಲಿ ಸಾವು



ನ್ಯೂಯಾರ್ಕ್: ಈ ವಾರದ ಆರಂಭದಲ್ಲಿ ರಸ್ತೆ ಪ್ರವಾಸದ ವೇಳೆ ನಾಪತ್ತೆಯಾಗಿದ್ದ ಭಾರತೀಯ ಮೂಲದ ನಾಲ್ವರು ಹಿರಿಯ ನಾಗರಿಕರು ಶನಿವಾರ ರಾತ್ರಿ ನಡೆದ ಅಪಘಾತದಲ್ಲಿ ಸಾವನ್ನಪ್ಪಿದ್ದಾರೆ ಎಂದು ಮಾರ್ಷಲ್ ಕೌಂಟಿ ಶೆರಿಫ್ ಕಚೇರಿ ದೃಢಪಡಿಸಿದೆ.

ಶನಿವಾರ ರಾತ್ರಿ 9.30ರ ಸುಮಾರಿಗೆ (ಸ್ಥಳೀಯ ಸಮಯ) ಬಿಗ್ ವೀಲಿಂಗ್ ಕ್ರೀಕ್ ರಸ್ತೆಯ ಕಡಿದಾದ ಪ್ರದೇಶದಲ್ಲಿ ಮೃತದೇಹಗಳು ಮತ್ತು ಅಪಘಾತಕ್ಕೀಡಾದ ವಾಹನ ಪತ್ತೆಯಾಗಿದೆ. ಮೃತರನ್ನು ಆಶಾ ದಿವಾನ್, ಕಿಶೋರ್ ದಿವಾನ್, ಶೈಲೇಶ್ ದಿವಾನ್ ಮತ್ತು ಗೀತಾ ದಿವಾನ್ ಎಂದು ಗುರುತಿಸಲಾಗಿದೆ. ಇವರು ಪ್ರಯಾಣಿಸುತ್ತಿದ್ದ ಟೊಯೊಟೋ ಕ್ಯಾಮ್ರಿ ಬಿಗ್ ವೀಲಿಂಗ್ ಕ್ರೀಕ್ ರಸ್ತೆಯಲ್ಲಿ ಅಪಘಾತಕ್ಕೀಡಾಗಿರುವುದನ್ನು ತುರ್ತು ನಿರ್ವಹಣಾ ಸಿಬ್ಬಂದಿ ಪತ್ತೆ ಹಚ್ಚಿದ್ದಾರೆ. ಇದು ಹೆದ್ದಾರಿಯಿಂದ ಹಲವಾರು ಮೈಲುಗಳಷ್ಟು ಕಡಿದಾದ ಭಾಗದಲ್ಲಿದೆ. ಘಟನಾ ಸ್ಥಳವನ್ನು ತಲುಪಲು 5 ಗಂಟೆಗಿಂತ ಹೆಚ್ಚು ಸಮಯ ತೆಗೆದುಕೊಳ್ಳುತ್ತದೆ. ನಾಲ್ವರು ಸ್ಥಳದಲ್ಲಿಯೇ ಮೃತಪಟ್ಟಿರುವುದನ್ನು ಶೆರಿಫ್ ಮೈಕ್ ಡೌಘರ್ಟಿ ಖಚಿತಪಡಿಸಿದ್ದಾರೆ.

ಕೇಂದ್ರ ಸಚಿವ ನಿತಿನ್ ಗಡ್ಕರಿ ನಾಗ್ಪುರ ನಿವಾಸಕ್ಕೆ ಬಾಂಬ್ ಬೆದರಿಕೆ; ವ್ಯಕ್ತಿ ಬಂಧನ



ನಾಗ್ಪುರ: ಕೇಂದ್ರ ಸಚಿವ ನಿತಿನ್ ಗಡ್ಕರಿ ಅವರ ನಾಗ್ಪುರದ ನಿವಾಸಕ್ಕೆ ಬಾಂಬ್ ಬೆದರಿಕೆ ಕರೆ ಮಾಡಿದ್ದ ವ್ಯಕ್ತಿಯನ್ನು ಪೊಲೀಸರು ಭಾನುವಾರ ಬಂಧಿಸಿದ್ದಾರೆ. ಆ ವ್ಯಕ್ತಿ ಬೆಳಿಗ್ಗೆ ನಗರ ಪೊಲೀಸ್ ನಿಯಂತ್ರಣ ಕೊಠಡಿಗೆ ತುರ್ತು ಸಂಖ್ಯೆ 112ಕ್ಕೆ ಕರೆ ಮಾಡಿ ಬೆದರಿಕೆಯೊಡ್ಡಿದ್ದು, ಅಧಿಕಾರಿಗಳನ್ನು ದಿಗ್ಭ್ರಮೆಗೊಳಿಸಿದೆ. ತನಿಖೆ ಸಮಯದಲ್ಲಿ ಕರೆ ಮಾಡಲಾದ ಮೊಬೈಲ್ ಸಂಖ್ಯೆಯನ್ನು ಪತ್ತೆಹಚ್ಚಿದ್ದು, ನಾಗ್ಪುರ ನಗರದ ಸಕ್ಕರ್ದಾರ ಪ್ರದೇಶದ ವಿಮಾ ದವಾಖಾನಾ ಬಳಿಯ ತುಳಸಿ ಬಾಗ್ ರಸ್ತೆಯ ನಿವಾಸಿ ಉಮೇಶ್ ವಿಷ್ಣು ರಾವುತ್ ಎಂಬಾತ ಕರೆ ಮಾಡಿದ್ದಾಗಿ ತಿಳಿದುಬಂದಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಮೊಬೈಲ್ ಲೊಕೇಶನ್ ಮತ್ತು ತಾಂತ್ರಿಕ ನೆರವಿನಿಂದ ಪೊಲೀಸರು ವಿಮಾ ದವಾಖಾನಾದ ಆವರಣದಿಂದ ರಾವುತ್ ಅವರನ್ನು ಬಂಧಿಸಿದ್ದಾರೆ. ವಿಚಾರಣೆಗಾಗಿ ಆತನನ್ನು ವಶಕ್ಕೆ ತೆಗೆದುಕೊಂಡು ನಂತರ ಅಪರಾಧ ವಿಭಾಗವು ಔಪಚಾರಿಕವಾಗಿ ಬಂಧಿಸಿತು. ರಾವುತ್ ಹಳ್ಳಿಯೊಂದರ ಮದ್ಯದ ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದಾರೆ ಎಂದು ಅವರು ಹೇಳಿದರು. ಆರೋಪಿ ಈ ಹಿಂದೆಯೂ ಇದೇ ರೀತಿಯ ದುಷ್ಕೃತ್ಯ ಎಸಗಿದ್ದಾರೆ ಎಂಬುದನ್ನು ಕಂಡುಹಿಡಿಯಲು ಹೆಚ್ಚಿನ ತನಿಖೆ ನಡೆಯುತ್ತಿದೆ ಎಂದು ಪೊಲೀಸ್ ಅಧಿಕಾರಿ ತಿಳಿಸಿದ್ದಾರೆ.

ಖಲಿಸ್ತಾನ್ ವಿರೋಧಿ ನಾಯಕ ಅಮೆರಿಕದಲ್ಲಿ ನಿಗೂಢ ಸಾವು



ಕ್ಯಾಲಿಫೋರ್ನಿಯಾ: ಅಮೆರಿಕದ ಕ್ಯಾಲಿಫೋರ್ನಿಯಾದಲ್ಲಿ ಭಾರತೀಯ ಉದ್ಯಮಿ ಸುಖಿ ಚಾಹಲ್ ನಿಗೂಢವಾಗಿ ಸಾವನ್ನಪ್ಪಿದ್ದಾರೆ. ಖಲಿಸ್ತಾನ್ ಪ್ರತ್ಯೇಕತಾವಾದದ ತೀವ್ರ ವಿರೋಧಿಯಾಗಿ ಗುರುತಿಸಲ್ಪಟ್ಟಿದ್ದ ಚಾಹಲ್, ಭಾರತೀಯ ವಲಸಿಗರಿಗೆ ಅಮೆರಿಕದ ಕಾನೂನುಗಳನ್ನು ಗೌರವಿಸುವಂತೆ ಮತ್ತು ಅಪರಾಧಗಳಿಂದ ದೂರವಿರುವಂತೆ ಸಲಹೆ ನೀಡುತ್ತಿದ್ದರು.

ಸುಖಿ ಚಾಹಲ್‌ರ ಆಪ್ತ ಸ್ನೇಹಿತ ಜಸ್ಪಾಲ್ ಸಿಂಗ್ ಘಟನೆ ಬಗ್ಗೆ ಮಾಹಿತಿ ನೀಡಿದ್ದಾರೆ. ಚಾಹಲ್ ಒಬ್ಬ ಪರಿಚಯಸ್ಥರ ಮನೆಗೆ ಊಟಕ್ಕೆ ಆಗಮಿಸಿದ್ದರು. ಊಟದ ಕೆಲವೇ ಕ್ಷಣಗಳಲ್ಲಿ ಅವರ ಆರೋಗ್ಯ ತೀವ್ರವಾಗಿ ಕ್ಷೀಣಿಸಿತು ಮತ್ತು ಅವರು ಸ್ಥಳದಲ್ಲೇ ನಿಧನರಾದರು ಎಂದು ಸಿಂಗ್ ತಿಳಿಸಿದ್ದಾರೆ. ಚಾಹಲ್ ಆರೋಗ್ಯವಂತರಾಗಿದ್ದರು ಎಂದು ಸಿಂಗ್ ಒತ್ತಿ ಹೇಳಿದ್ದಾರೆ. ಸುಖಿ ಚಾಹಲ್, 'ದಿ ಖಾಲ್ಸಾ ಟುಡೇ'ನ ಸ್ಥಾಪಕ ಮತ್ತು ಸಿಇಒ ಆಗಿದ್ದರು, ಮತ್ತು ಖಲಿಸ್ತಾನ್ ಪ್ರತ್ಯೇಕತಾವಾದದ ವಿರುದ್ಧ ತಮ್ಮ ಧ್ವನಿಯನ್ನು ಎತ್ತಿದ್ದರು. ಇದೀಗ ಅವು ನಿಗೂಢವಾಗಿ ಸಾವನಪ್ಪಿದ್ದು, ಹಲವು ಅನುಮಾನಗಳಿಗೆ ಕಾರಣವಾಗಿದೆ.

ಎರಡು ಸಾವಿರ ವರ್ಷಗಳ ಹಿಂದಿನ ಶಿವಲಿಂಗ, ಹಿಂದೂ ವಿಗ್ರಹಗಳು ಪತ್ತೆ!



ಅನಂತನಾಗ್: ಜಮ್ಮು–ಕಾಶ್ಮೀರದ ಒಂದು ಬುಗ್ಗೆಯಲ್ಲಿ ಉತ್ಖನನದ ಸಮಯದಲ್ಲಿ ಪ್ರಾಚೀನ ಹಿಂದೂ ವಿಗ್ರಹಗಳು ಪತ್ತೆಯಾಗಿದ್ದು, ಈ ಪೈಕಿ 2 ಸಾವಿರ ವರ್ಷಗಳಷ್ಟು ಹಳೆಯ ಶಿವಲಿಂಗ ಕೂಡ ಪತ್ತೆಯಾಗಿದೆ ಎಂದು ತಿಳಿದುಬಂದಿದೆ. ಜಮ್ಮು ಮತ್ತು ಕಾಶ್ಮೀರದ ಅನಂತನಾಗ್ ಜಿಲ್ಲೆಯ ಒಂದು ಬುಗ್ಗೆ ನವೀಕರಣಕ್ಕಾಗಿ ಉತ್ಖನನ ಕಾರ್ಯ ನಡೆಯುತ್ತಿದ್ದ ಸಮಯದಲ್ಲಿ ಶಿವಲಿಂಗಗಳು ಸೇರಿದಂತೆ ಪ್ರಾಚೀನ ಹಿಂದೂ ವಿಗ್ರಹಗಳು ಪತ್ತೆಯಾಗಿವೆ. ದಕ್ಷಿಣ ಕಾಶ್ಮೀರ ಜಿಲ್ಲೆಯ ಐಶ್ಮುಖಮ್‌ನ ಸಾಲಿಯಾ ಪ್ರದೇಶದ ಕರ್ಕೂಟ್ ನಾಗ್‌ನಲ್ಲಿ ಈ ವಿಗ್ರಹಗಳನ್ನು ಪತ್ತೆಹಚ್ಚಲಾಗಿದೆ. ದೇವತೆಗಳನ್ನು ಕೆತ್ತಲಾಗಿರುವ ಕಲ್ಲಿನ ವಿಗ್ರಹಗಳನ್ನು ಉತ್ಖನನದ ಸಮಯದಲ್ಲಿ ಕರ್ಕೂಟ್‌ನಾಗ್‌ನಿಂದ ಪತ್ತೆಹಚ್ಚಲಾಗಿದೆ. ಲೋಕೋಪಯೋಗಿ ಇಲಾಖೆಯು ವಸಂತಕಾಲದಲ್ಲಿ ಪುನರುಜ್ಜೀವನ ಮತ್ತು ಪುನಃಸ್ಥಾಪನೆ ಕಾರ್ಯಗಳನ್ನು ಕೈಗೊಳ್ಳುತ್ತಿದೆ ಮತ್ತು ಸ್ಥಳೀಯ ಕಾರ್ಮಿಕರು ಉತ್ಖನನ ಕಾರ್ಯದ ಸಮಯದಲ್ಲಿ ಇವುಗಳನ್ನು ಪತ್ತೆಹಚ್ಚಿದ್ದಾರೆ ಎಂದು ಅಧಿಕಾರಿಗಳು ಹೇಳಿದರು.

ಸಿದ್ದರಾಮಯ್ಯಗೆ ಹುಟ್ಟುಹಬ್ಬದ ಶುಭಾಶಯ ಕೋರಿದ ತಮಿಳುನಾಡು ಸಿಎಂ ಸ್ಟಾಲಿನ್



ಚೆನ್ನೈ: ತಮಿಳುನಾಡು ಸಿಎಂ ಎಂಕೆ ಸ್ಟಾಲಿನ್ ಭಾನುವಾರ ಕರ್ನಾಟಕದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಹುಟ್ಟುಹಬ್ಬದ ಶುಭಾಶಯ ಕೋರಿದ್ದು, ಭಾಷಾ ಹಕ್ಕುಗಳನ್ನು ರಕ್ಷಿಸುವಲ್ಲಿ ಅವರು 'ಬಲವಾದ ಧ್ವನಿ' ಎಂದು ಕರೆದರು. ಸಾಮಾಜಿಕ ಮಾಧ್ಯಮ ಪೋಸ್ಟ್‌ನಲ್ಲಿ, ಕನ್ನಡ ಮತ್ತು ಇಂಗ್ಲಿಷ್ ಎರಡರಲ್ಲೂ ಶುಭಾಶಯ ಕೋರಿದ್ದಾರೆ. ಕರ್ನಾಟಕದ ಮಾನ್ಯ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯ ಅವರಿಗೆ ಹುಟ್ಟುಹಬ್ಬದ ಶುಭಾಶಯಗಳು. ಭಾಷಾ ಹಕ್ಕುಗಳನ್ನು ರಕ್ಷಿಸುವಲ್ಲಿ ಮತ್ತು ಸಾಮಾಜಿಕ ನ್ಯಾಯವನ್ನು ಮುನ್ನಡೆಸುವಲ್ಲಿ ನಿಮ್ಮ ಬಲವಾದ ಧ್ವನಿಯು ನಿಜವಾದ ಒಕ್ಕೂಟ ಮತ್ತು ಅಂತರ್ಗತ ಪ್ರಜಾಪ್ರಭುತ್ವದ ಚೈತನ್ಯವನ್ನು ಪ್ರತಿಬಿಂಬಿಸುತ್ತದೆ. ಈ ಮೌಲ್ಯಗಳು ಇಂದಿನ ಭಾರತದಲ್ಲಿ ಅಪಾರ ಮಹತ್ವವನ್ನು ಹೊಂದಿವೆ ಹಾಗೂ ತಮಿಳುನಾಡು ಮತ್ತು ಕರ್ನಾಟಕದ ಜನರು ಅವುಗಳನ್ನು ಎತ್ತಿಹಿಡಿಯುವಲ್ಲಿ ಒಟ್ಟಾಗಿ ನಿಲ್ಲುವರು ಎಂದಿದ್ದಾರೆ. ಭಾಷಾ ಹಕ್ಕುಗಳನ್ನು ರಕ್ಷಿಸುವಲ್ಲಿ ಮತ್ತು ಸಾಮಾಜಿಕ ನ್ಯಾಯವನ್ನು ಮುನ್ನಡೆಸುವಲ್ಲಿ ನಿಮ್ಮ ಬಲವಾದ ಧ್ವನಿಯು ನಿಜವಾದ ಒಕ್ಕೂಟ ಮತ್ತು ಅಂತರ್ಗತ ಪ್ರಜಾಪ್ರಭುತ್ವದ ಚೈತನ್ಯವನ್ನು ಪ್ರತಿಬಿಂಬಿಸುತ್ತದೆ. ನಿಮಗೆ ನಿರಂತರ ಶಕ್ತಿ, ಸಂತೋಷ ಮತ್ತು ದೀರ್ಘಾಯುಷ್ಯ ಸಿಗಲಿ ಎಂದು ಹಾರೈಸುತ್ತೇನೆ ಎಂದು ಸ್ಟಾಲಿನ್ ಹೇಳಿದ್ದಾರೆ.

ಕೊಡಗಿನಲ್ಲಿ ಕಕ್ಕಡ ಆಚರಣೆಯ 18ನೇ ದಿನ

ಮದ್ದು ಸೊಪ್ಪಿನ ಭರ್ಜರಿ ವ್ಯಾಪಾರ

ಮಡಿಕೇರಿ, ಆ.3– ಆಟಿ ಅಥವಾ ಕಕ್ಕಡ ಆಚರಣೆಯ 18ನೇ ದಿನವಾದ ಆ.3 ಅನ್ನು ಜಿಲ್ಲೆಯಾದ್ಯಂತ ಸಾಂಪ್ರದಾಯಿಕ ಹಬ್ಬದ ರೀತಿಯಲ್ಲಿ ಆಚರಿಸಲಾಯಿತು.

ಸಹಜವಾಗಿ ಕಾಡಿನಲ್ಲಿ ಅಥವಾ ಗ್ರಾಮೀಣ ಭಾಗದಲ್ಲಿ ಯಥೇಚ್ಛವಾಗಿ ಬೆಳೆಯುವ ಮದ್ದು ಸೊಪ್ಪಿನ ವ್ಯಾಪಾರ ಭಾನುವಾರ ಭರ್ಜರಿಯಾಗಿ ನಡೆಯಿತು. ನಗರದ ವಿವಿಧ ಕಡೆಗಳಲ್ಲಿ ಗ್ರಾಮೀಣ ಭಾಗ ನಿವಾಸಿಗಳು ಮದ್ದು ಸೊಪ್ಪನ್ನು ತಂದು ಮಾರಾಟ ಮಾಡಿದರು. ಒಂದು ಕಟ್ಟು ಸೊಪ್ಪಿಗೆ ತಲಾ 50 ರೂ.ಗಳಂತೆ ಮಧುಬನ ಸೊಪ್ಪು ಬಿಕರಿಯಾಯಿತು. ಜನರು ಕೂಡ ಮುಗಿಬಿದ್ದು ಖರೀದಿಯಲ್ಲಿ ತೊಡಗಿದ್ದು ಕಂಡು ಬಂತು.

ಕಕ್ಕಡ ಆರಂಭವಾಗಿ 18 ದಿನ ತುಂಬುತ್ತಿದ್ದಂತೆ 18 ಔಷಧೀಯ ಗುಣಗಳನ್ನು ಹೊಂದಿರುವ ಮದ್ದು ಸೊಪ್ಪಿನ ಪಾಯಸ ಅಥವಾ ರುಚಿ ರುಚಿಯಾದ ವಿವಿಧ ಖಾದ್ಯಗಳನ್ನು ಮಾಡಿ ಸೇವಿಸುವುದು ಜಿಲ್ಲೆಯ ವಿಶೇಷವಾಗಿದೆ. ಈ ದಿನದಂದು ಕೊಡಗಿನ ಮನೆ ಮನೆಗಳಲ್ಲಿ ಮದ್ದು ಸೊಪ್ಪಿನ ಪಾಯಸ ಘಮ ಘಮಿಸುತ್ತದೆ. ಜುಲೈ ಮತ್ತು ಆಗಸ್ಟ್ ತಿಂಗಳಿನಲ್ಲಿ ಯಥೇಚ್ಛವಾಗಿ ಸಿಗುವ ಮರ ಕೆಸ, ಕಣಿಲೆ, ಅಣಬೆ, ಮದ್ದು ಸೊಪ್ಪು, ಚರ್ಮೆ ಸೊಪ್ಪು, ಮಡಗಲ ಕಾಯಿ, ಮಳೆ ಚಳಿ ಗಾಳಿಗೆ ಮಾನವನ ದೇಹವನ್ನು ಬೆಚ್ಚಗಿಡಲು ಸಹಕಾರಿಯಾಗಿದೆ. ಮಾತ್ರವಲ್ಲ ಇವುಗಳಲ್ಲಿ ಔಷಧೀಯ ಗುಣಗಳಿವೆ ಎನ್ನುವುದು ಹಿರಿಯರ ನಂಬಿಕೆ.


ಕೊಡಗಿನಲ್ಲಿ ಯಥೇಚ್ಛವಾಗಿ ಬೆಳೆಯುವ ಮದ್ದು ಸೊಪ್ಪಿನ ವ್ಯಾಪಾರ ಭರ್ಜರಿಯಾಗಿ ನಡೆಯಿತು.

ಕಕ್ಕಡ 18ಕ್ಕೆ ಜಾನಪದ ಹಾಗೂ ಆಯುರ್ವೇದ ಸ್ಪರ್ಶವಿದೆ. ಈ ದಿನ ಸಂಪ್ರದಾಯದಂತೆ ಸಾಮೂಹಿಕವಾಗಿ ಮನೆಯವರೆಲ್ಲ ಸೇರಿ ಭತ್ತದ ಗದ್ದೆ ಯಲ್ಲಿ ನಾಟಿ ಮಾಡಿ ಅನಂತರ ಮದ್ದು ಸೊಪ್ಪಿನ ಪಾಯಸ ಸೇವಿಸುತ್ತಾರೆ. ಕಕ್ಕಡ ಆರಂಭವಾದ ದಿನದಿಂದ 18 ದಿನಗಳವರೆಗೆ ಪ್ರತಿ ದಿನ ಒಂದೊಂದು ಔಷಧಿಯಂತೆ ಒಟ್ಟು 18 ಔಷಧಿಗಳು ಈ ಸೊಪ್ಪಿನಲ್ಲಿ ಅಡಕವಾಗುತ್ತದೆ ಎನ್ನುವ ನಂಬಿಕೆ ಇದೆ. 18 ಔಷಧಿಗಳು ಸಂಪೂರ್ಣವಾಗಿ ಸೇರಿಕೊಂಡ ನಂತರವಷ್ಟೇ ಸೊಪ್ಪಿಗೆ ಪರಿಪೂರ್ಣ ಔಷಧೀಯ ಗುಣ ಬರುತ್ತದೆ ಎನ್ನುವ ಕಾರಣಕ್ಕೆ ಅನಾದಿ ಕಾಲದಿಂದ ಕಕ್ಕಡ 18ರಂದೇ ಮದ್ದು ಸೊಪ್ಪನ್ನು ಕೊಯ್ದು ಖಾದ್ಯವನ್ನು ತಯಾರಿಸಲಾಗುತ್ತದೆ.

ವೀರನ ಹೊಸಹಳ್ಳಿ ಶಿಬಿರಕ್ಕೆ ದಸರಾ ಆನೆಗಳ ಸ್ಥಳಾಂತರ

ಮಡಿಕೇರಿ/ಕುಶಾಲನಗರ, ಆ.3. ಮೈಸೂರು ದಸರಾ ಮಹೋತ್ಸವದ ಜಂಬೂ ಸವಾರಿಯಲ್ಲಿ ಪಾಲ್ಗೊಳ್ಳಲು ದುಬಾರೆ ಸಾಕಾನೆ ಶಿಬಿರದಿಂದ ಭಾನುವಾರ 4 ಆನೆಗಳನ್ನು ಹುಣಸೂರು ಬಳಿಯ ವೀರನ ಹೊಸಹಳ್ಳಿ ಶಿಬಿರಕ್ಕೆ ಲಾರಿಗಳ ಮೂಲಕ ಸಾಗಿಸಲಾಯಿತು. ದುಬಾರೆ ಶಿಬಿರದ ಧನಂಜಯ, ಕಂಜನ್, ಪ್ರಶಾಂತ ಮತ್ತು ಕಾವೇರಿ ಆನೆಗಳನ್ನು ಇಲಾಖೆಯ ಹಿರಿಯ ಅಧಿಕಾರಿಗಳ ಸಮ್ಮುಖದಲ್ಲಿ ವಿಶೇಷ ಪೂಜೆ ಸಲ್ಲಿಸಿ ಲಾರಿಗಳ ಮೂಲಕ ಕಳುಹಿಸಿ ಕೊಡಲಾಯಿತು.

ದುಬಾರೆಯಲ್ಲಿ ಈ ಸಂದರ್ಭ ಅರಣ್ಯ ಇಲಾಖೆ ಮಡಿಕೇರಿ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿ ಅಭಿಷೇಕ್, ಸೋಮವಾರಪೇಟೆ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಎ.ಎ ಗೋಪಾಲ್, ಕುಶಾಲನಗರ ಅರಣ್ಯ ವಲಯ ಅಧಿಕಾರಿ ರತನ್ ಕುಮಾರ್, ಉಪ ವಲಯ ಅರಣ್ಯ ಅಧಿ ಕಾರಿಗಳಾದ ಕನ್ನಂಡ ರಂಜನ್, ಧರ್ಮೇಂದ್ರ ಮತ್ತು ಪಶು ತಜ್ಞ ವೈದ್ಯರಾದ ಡಾ. ಚಿಟ್ಟಿಯಪ್ಪ ಮತ್ತಿತರರು ಇದ್ದರು.


ಜಂಬೂ ಸವಾರಿಯಲ್ಲಿ ಪಾಲ್ಗೊಳ್ಳಲು ದುಬಾರೆ ಸಾಕಾನೆ ಶಿಬಿರದಿಂದ 4 ಆನೆಗಳನ್ನು ವೀರನ ಹೊಸಹಳ್ಳಿ ಶಿಬಿರಕ್ಕೆ ಸ್ಥಳಾಂತರಿಸಲಾಯಿತು.

ಸೋಮವಾರ ಬೆಳಗ್ಗೆ ವೀರನ ಹೊಸಹಳ್ಳಿಯಿಂದ ಮೈಸೂರು ಕಡೆಗೆ ಮೊದಲ ಹಂತದ ಆನೆಗಳ ದಸರಾ ಗಜಪಯಣ ವಿದ್ಯುಕ್ತವಾಗಿ ಚಾಲನೆಗೊಳ್ಳಲಿದೆ. 2ನೇ ತಂಡದಲ್ಲಿ ದುಬಾರೆ ಶಿಬಿರದ ಸುಗ್ರೀವ, ಗೋಪಿ, ಹರ್ಷ ಮತ್ತು ಹೇಮಾವತಿ ಆನೆಗಳು ಮೈಸೂರು ದಸರಾದಲ್ಲಿ ಪಾಲ್ಗೊಳ್ಳಲು ಕಳುಹಿಸಿ ಕೊಡಲಾಗುವುದು ಎಂದು ಅರಣ್ಯ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.

ಕಾರಿನ ಮೇಲೆ ಸಲಗ ದಾಳಿ


ಕಾರಿನ ಗಾಜಿಗೆ ಹಾನಿಯಾಗಿರುವುದು

ಮಡಿಕೇರಿ: ಒಂಟಿ ಸಲಗವೊಂದು ಮನೆ ಮುಂದೆ ನಿಲ್ಲಿಸಿದ್ದ ಕಾರಿನ ಮೇಲೆ ದಾಳಿ ನಡೆಸಿದ ಘಟನೆ ಸೋಮವಾರಪೇಟೆ ತಾಲೂಕಿನ ಬ್ಯಾಡ ಗೊಟ್ಟ ಗ್ರಾಮದಲ್ಲಿ ನಡೆದಿದೆ. ಅಲ್ಲಿನ ನಿವಾಸಿ ಹಾರೂನ್ ಎಂಬವರ ಕಾರಿನ ಕಿಟಕಿ ಗಾಜನ್ನು ದಂತದಿಂದ ತಿವಿದು ಸಲಗ ಹಾನಿಪಡಿಸಿದೆ.

ಈ ಸಲಗ ವಾರದಿಂದ ಬ್ಯಾಡಗೊಟ್ಟ ಗ್ರಾಮದ ಕಣಾರಳ್ಳಿ ತೋಟದಲ್ಲಿ ಬೀಡು ಬಿಟ್ಟಿದ್ದು, ರಾತ್ರಿ ವೇಳೆ ತೋಟಗಳಲ್ಲಿ ಬೆಳೆದಿರುವ ಬಾಳೆ ಸೇರಿದಂತೆ ಕೃಷಿ ಫಸಲನ್ನು ನಾಶಪಡಿಸಿದೆ. ಕಾಡಾನೆಯಿಂದ ಗ್ರಾಮದಲ್ಲಿ ಭಯದ ವಾತಾವರಣ ಸೃಷ್ಟಿಯಾಗಿದ್ದು, ಜೀವಹಾನಿ ಸಂಭವಿಸುವ ಮುನ್ನ ಕಾಡಿಗೆ ಅಟ್ಟಬೇಕೆಂದು ಗ್ರಾಮಸ್ಥರು ಆಗ್ರಹಿಸಿದ್ದಾರೆ. ಕೃಷಿ ಫಸಲು ಹಾಗೂ ಕಾರಿಗೆ ಹಾನಿಪಡಿಸಿದ ಘಟನೆಗೆ ಸಂಬಂಧಿಸಿದಂತೆ ಅರಣ್ಯ ಇಲಾಖೆ ಕೃಷಿಕರಿಗೆ ಹಾಗೂ ಕಾರಿನ ಮಾಲೀಕರಿಗೆ ಸೂಕ್ತ ಪರಿಹಾರ ಒದಗಿಸಬೇಕು ಎಂದು ಒತ್ತಾಯಿಸಿದ್ದಾರೆ.

ರಾತ್ರಿ ಮನೆಗೆ ಕಾಡಾನೆ ನುಗ್ಗಿ ಪದಾರ್ಥ ನಾಶ

ಸಿದ್ದಾಪುರ,ಆ.3–ಕಾಡಾನೆಯೊಂದು ಮಧ್ಯರಾತ್ರಿ ವೇಳೆ ಮನೆ ಒಳಗೆ ನುಗ್ಗಿ ಆಹಾರ ಪದಾರ್ಥಗಳನ್ನು ತಿಂದು ಇತರೆ ವಸ್ತುಗಳನ್ನು ತುಳಿದು ನಾಶ ಮಾಡುವುದರ ಮೂಲಕ ಹಾಡಿ ನಿವಾಸಿಗಳಲ್ಲಿ ಆತಂಕ ಸೃಷ್ಟಿ ಮಾಡಿದ ಘಟನೆ ಸಿದ್ದಾಪುರ ಸಮೀಪದ ಚನ್ನಂಗಿ ಚಿಕ್ಕ ರೇಷ್ಮೆ ಹಾಡಿಯಲ್ಲಿ ನಡೆದಿದೆ. ಹಾಡಿ ನಿವಾಸಿ ಕಾವೇರಿ ಎಂಬವರ ಮನೆ ಮೇಲೆ ದಾಳಿ ಮಾಡಿದ ಕಾಡಾನೆ ಬಾಗಿಲು ಮುರಿದು ಒಳನುಗ್ಗಿ ಅಕ್ಕಿ ಸೇರಿದಂತೆ ಆಹಾರ ಪದಾರ್ಥಗಳನ್ನು ತಿಂದು ಹಾಕಿದೆ. ಮನೆಯಲ್ಲಿದ್ದ ಡ್ರಮ್, ಪಾತ್ರೆ, ಪ್ಲಾಸ್ಟಿಕ್ ವಸ್ತುಗಳು ಸೇರಿದಂತೆ ಎಲ್‌ಇಡಿ ಟಿ.ವಿ ಹಾಗೂ ಇತರ ಉಪಕರಣಗಳನ್ನು ತುಳಿದು ನಾಶಪಡಿಸಿದೆ. ಬೆಳಗಿನ ಜಾವ ಮತ್ತೆ ಬಂದ ಕಾಡಾನೆ ಮನೆಯ ಅಡುಗೆ ಕೋಣೆ ಮೇಲು ದಾಳಿ ಮಾಡಿ ಮೇಲ್ಛಾವಣಿಗೆ ಅಳವಡಿಸಿದ್ದ ಸಿಮೆಂಟ್ ಶೀಟುಗಳನ್ನು ತುಳಿದು ನಾಶ ಮಾಡಿದೆ. ಇದೇ ರೀತಿ ಎರಡು ಬಾರಿ ಕಾಡಾನೆ ದಾಳಿ ಮಾಡಿದ್ದ ಹಿನ್ನೆಲೆಯಲ್ಲಿ ಮನೆ ಮಂದಿ ಸಮೀಪದಲ್ಲಿರುವ ಸಂಬಂಧಿಕರ ಮನೆಯಲ್ಲಿ ಮಲಗಲು ತೆರಳಿದ್ದರು. ಭಾನುವಾರ ಬೆಳಿಗ್ಗೆ ಬಂದು ನೋಡಿದಾಗ ಆಹಾರ ಸೇರಿದಂತೆ ಇತರ ವಸ್ತುಗಳನ್ನು ನಾಶಪಡಿಸಿರುವುದು ಕಂಡು ಬಂದಿದೆ.


ಕಾವೇರಿ ಎಂಬವರ ಮನೆ ಮೇಲೆ ದಾಳಿ ಮಾಡಿದ ಕಾಡಾನೆ ಬಾಗಿಲು ಮುರಿದು ಒಳನುಗ್ಗಿ ಅಕ್ಕಿ ಸೇರಿದಂತೆ ಆಹಾರ ಪದಾರ್ಥಗಳನ್ನು ತಿಂದು ಹಾಕಿದೆ.

ಈ ಹಿಂದೆಯೂ ಮನೆಯಲ್ಲಿ ಮಲಗಿದ್ದ ಸಂದರ್ಭ ಕಾಡಾನೆ ದಾಳಿಗೆ ಯತ್ನಿಸಿತ್ತು. ಮನೆಯಲ್ಲಿದ್ದವರು ಕಿರುಚಿ ಕೊಂಡಾಗ ಆನೆ ಸ್ಥಳದಿಂದ ತೆರಳಿತ್ತು. ವಾರದಲ್ಲಿ ಎರಡು ಮೂರು ದಿನ ಕಾಡಾನೆ ಮನೆಯ ಬಳಿ ಬರಲು ಆರಂಭಿಸಿದ ಹಿನ್ನೆಲೆಯಲ್ಲಿ ಮಗಳ ಸಹಿತ ಸಮೀಪದ ಮನೆ ಒಂದರಲ್ಲಿ ಮಲಗಲು ಹೋಗುತ್ತಿದ್ದುದರಿಂದ ನಮ್ಮ ಪ್ರಾಣ ಉಳಿದಿದೆ ಎಂದು ಕಾವೇರಿ ಅಳಲು ತೋಡಿಕೊಂಡರು.

ಗ್ರಾಮ ಪಂಚಾಯಿತಿ ಅಧ್ಯಕ್ಷ ಮೇಕೇರಿರ ಅರುಣ್ ಕುಮಾರ್ ಭೇಟಿ ನೀಡಿ ಪಂಚಾಯಿತಿಯಿಂದ ಆಹಾರ ಕಿಟ್ ವಿತರಿಸಿದರು. ಅರಣ್ಯ ಇಲಾಖೆ ಕೂಡಲೇ ಪರಿಹಾರ ನೀಡಿ ಕಾಡಾನೆ ಹಾವಳಿ ತಡೆಗಟ್ಟಬೇಕೆಂದು ಒತ್ತಾಯಿಸಿದರು.

ಬುಡಕಟ್ಟು ಕೃಷಿಕರ ಸಂಘದ ಅಧ್ಯಕ್ಷ ಸಿದ್ದಪ್ಪ ಮಾತನಾಡಿ, ನಿರಂತರವಾಗಿ ಕಾಡಾನೆ ದಾಳಿಯಿಂದ ಗ್ರಾಮಸ್ಥರಲ್ಲಿ ಆತಂಕ ಸೃಷ್ಟಿಯಾಗಿದ್ದು ಭಯದ ವಾತಾವರಣ ನಿರ್ಮಾಣವಾಗಿದೆ. ಅರಣ್ಯ ಇಲಾಖೆ ಸಿಬ್ಬಂದಿ ಗಸ್ತು ತಿರುಗುವ ಮೂಲಕ ಮನೆಗಳ ಮೇಲೆ ದಾಳಿ ಮಾಡುವ ಕಾಡಾನೆಯನ್ನು ಸೆರೆ ಹಿಡಿದು ಸ್ಥಳಾಂತರ ಮಾಡಬೇಕು. ಸಂತ್ರಸ್ತ ಕುಟುಂಬಕ್ಕೆ ತಕ್ಷಣವೇ ಪರಿಹಾರ ನೀಡಬೇಕೆಂದು ಆಗ್ರಹಿಸಿದರು. ಘಟನಾ ಸ್ಥಳಕ್ಕೆ ಅರಣ್ಯ ಇಲಾಖೆ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಅರುಣ್‌ಕುಮಾರ್ ದಸರಾ ಸಮಿತಿ ಕಾರ್ಯಾಧ್ಯಕ್ಷ

ಮಡಿಕೇರಿ: ಮಡಿಕೇರಿ ನಗರ ದಸರಾ ಸಮಿತಿ ಕಾರ್ಯಾಧ್ಯಕ್ಷರಾಗಿ ಬಿ.ಕೆ. ಅರುಣ್ ಕುಮಾರ್ ಆಯ್ಕೆಯಾಗಿದ್ದಾರೆ.

ಕಾರ್ಯಾಧ್ಯಕ್ಷ ಸ್ಥಾನಕ್ಕೆ ಜಗದೀಶ್, ಟಿ.ಎಂ.ಅಯ್ಯಪ್ಪ, ಜಯಂತ್ ಶೆಟ್ಟಿ ಹಾಗೂ ಬಿ.ಕೆ.ಅರುಣ್ ಕುಮಾರ್ ಪ್ರಬಲ ಆಕಾಂಕ್ಷಿಗಳಾಗಿದ್ದರು. ಆಕಾಂಕ್ಷಿಗಳ ನಡುವೆ ಒಮ್ಮತ ಮೂಡದ ಹಿನ್ನೆಲೆಯಲ್ಲಿ ದಶ ಮಂಟಪ ಸಮಿತಿ ಸಭೆ ನಡೆಸಿ ಚುನಾವಣೆ ಮೂಲಕ ಕಾರ್ಯಾಧ್ಯಕ್ಷ ಸ್ಥಾನಕ್ಕೆ ಆಯ್ಕೆ ಪ್ರಕ್ರಿಯೆ ನಡೆಸಿತು. ದಶ ದೇವಾಲಯಗಳು ಹಾಗೂ 4 ಕರಗ ಸಮಿತಿ ಪ್ರಮುಖರು ಮತದಾನದಲ್ಲಿ ಭಾಗವಹಿಸಿದ್ದರು.

ಈ ವೇಳೆ ಬಿ.ಕೆ.ಅರುಣ್‌ಕುಮಾರ್ 6 ಮತ, ಜಗದೀಶ್ 4, ಜಯಂತ್ ಶೆಟ್ಟಿ 3 ಹಾಗೂ ಟಿ.ಎಂ ಅಯ್ಯಪ್ಪ 1 ಮತ ಪಡೆದರು. ಬಳಿಕ ಬಿ.ಕೆ. ಅರುಣ್ ಕುಮಾರ್ ಅವರನ್ನು ನಗರ ದಸರಾ ಸಮಿತಿ ನೂತನ ಕಾರ್ಯಾಧ್ಯಕ್ಷ ಎಂದು ಘೋಷಣೆ ಮಾಡಲಾಯಿತು.

ಆ.6, ಅಂಚೆ ಅದಾಲತ್

ಮಡಿಕೇರಿ: ಅಂಚೆ ಅದಾಲತ್‌ನ ಮುಂದಿನ ಸಭೆಯು ಆ.6 ರಂದು ಬೆಳಗ್ಗೆ 10 ಗಂಟೆಗೆ ಕೊಡಗು ಅಂಚೆ ವಿಭಾಗದ ವಿಭಾಗೀಯ ಕಚೇರಿ, ಸಿದ್ದಾಪುರ ರಸ್ತೆ ಅಶೋಕ್‌ಪುರದಲ್ಲಿ ನಡೆಯಲಿದೆ.

ಪೊಲೀಸ್ ಅಧಿಕಾರಿಗಳ ವರ್ಗಾವಣೆಗೆ ದಸಂಸ ಆಗ್ರಹ

ವಿರಾಜಪೇಟೆ, ಆ.3– ಶ್ರೀಮಂಗಲ ವಿಭಾಗದಲ್ಲಿ ಕಾನೂನು ಸುವ್ಯವಸ್ಥೆ ನಿಭಾಯಿಸುವಲ್ಲಿ ವಿಫಲವಾಗಿರುವ ಪೊಲೀಸ್ ಅಧಿಕಾರಿಗಳನ್ನು ತಕ್ಷಣ ವರ್ಗಾಯಿಸುವಂತೆ ದಲಿತ ಸಂಘರ್ಷ ಸಮಿತಿ ಆಗ್ರಹಿಸಿದೆ.

ಶ್ರೀಮಂಗಲ ವಿಭಾಗದಲ್ಲಿ ಕಾನೂನು ಸುವ್ಯವಸ್ಥೆ ಹದಗೆಟ್ಟಿದೆ ಪರಿಶಿಷ್ಟ ವರ್ಗದವರಿಗೆ ರಕ್ಷಣೆ ಹಾಗೂ ಸೂಕ್ತ ನ್ಯಾಯ ಒದಗಿಸದೆ ಉಡಾಫೆಯಿಂದ ನಡೆದು ಕೊಳ್ಳುತ್ತಿರುವ ಶ್ರೀಮಂಗಲ ಠಾಣಾಧಿಕಾರಿ ಹಾಗೂ ಪೊಲೀಸ್ ವೃತ್ತ ನಿರೀಕ್ಷಕರನ್ನು ತಕ್ಷಣ ವರ್ಗಾಯಿಸುವಂತೆ ಕೊಡಗೂ ಭೂ ಗುತ್ತಿಗೆ ಹೋರಾಟ ಸಮಿತಿಯ ಸಂಚಾಲಕ ಮತ್ತು ದಲಿತ ಸಂಘರ್ಷ ಸಮಿತಿಯ ಕಾರ್ಯಕರ್ತ ಕೃಷ್ಣಪ್ಪ ಶಾಸಕರನ್ನು ಸುದ್ದಿಗೋಷ್ಠಿಯಲ್ಲಿ ಆಗ್ರಹಿಸಿದ್ದಾರೆ.

ಪರಿಶಿಷ್ಟ ಪಂಗಡದ ಮಣಿ ಎಂಬಾತ ತನ್ನ ಮೇಲೆ ನಡೆದ ಹಲ್ಲೆ ಕುರಿತು ಜು. 15 ರಂದು ಠಾಣೆಯಲ್ಲಿ ದೂರು ದಾಖಲಿಸಿದಾಗ ತಾವು ಹೇಳಿದಂತೆ ಹೇಳಿಕೆ ನೀಡುವಂತೆ ಒತ್ತಾಯಿಸಿ ಹೇಳಿಕೆ ಪಡೆದು ಎಫ್ ಐ ಆರ್ ದಾಖಲಿಸಿಕೊಂಡಿದ್ದಾರೆ. ಇತ್ತೀಚೆಗೆ ನಮ್ಮ ಕಾರ್ಯಕರ್ತರು ಠಾಣೆಗೆ ಹೋದಾಗ ಪೊಲೀಸ್ ವೃತ್ತ ನಿರೀಕ್ಷಕರು ಬಾಯಿಗೆ ಬಂದಂತೆ ಮಾತನಾಡಿ ನಾನು ಈ ಭಾಗಕ್ಕೆ ಬಂದಿರುವುದೆ ನಿಮ್ಮಂತ ಸಂಘಟನೆ ಮಟ್ಟ ಹಾಕಲು ಎಂದು ಮಾತನಾಡಿದ್ದಾರೆಂದು ಕೃಷ್ಣಪ್ಪ ಆಪಾದಿಸಿದರು.

ದಲಿತ ರೈಟ್ಸ್ ಮೂಮೆಂಟ್‌ನ ರಾಜ್ಯ ಉಪಾಧ್ಯಕ್ಷ ರಮೇಶ್ ಮಾಯಮುಡಿ ಮಾತನಾಡಿ ಪೊಲೀಸ್ ವೃತ್ತ ನಿರೀಕ್ಷಕರಿಗೆ ದಲಿತ ಸಂಘರ್ಷ ಸಮಿತಿ ಮಟ್ಟ ಹಾಕುವ ಕೆಲಸ ಬೇಡ. ಅವರು ದಲಿತರಿಗೆ ಪರಿಶಿಷ್ಟ ವರ್ಗದ ಜನರಿಗೆ ರಕ್ಷಣೆ ಹಾಗೂ ನ್ಯಾಯ ಒದಗಿಸುವ ಕರ್ತವ್ಯ ಮಾಡಲಿ. ಇದೇ ರೀತಿ ಧೋರಣೆ ತೋರಿದರೆ ಉಗ್ರ ಹೋರಾಟ ಅನಿವಾರ್ಯವಾದೀತು ಎಂದರೆ ದಸಂಸ ಜಿಲ್ಲಾ ಸಂಚಾಲಕ ರಜನಿಕಾಂತ್ ಹಾಡಿಗಳಲ್ಲಿ ಆದಿವಾಸಿಗಳು ಪ್ಲಾಸ್ಟಿಕ್ ಹೊದಿಕೆ ನೀಡುವಂತೆ ಶಾಸಕರು ಸೂಚನೆ ನೀಡಿದ್ದಾಗ್ಯೂ ಜಿಲ್ಲಾಡಳಿತ ಐಟಿಡಿಪಿ ಅಧಿಕಾರಿಗಳು ಈ ಬಗ್ಗೆ ನಿರ್ಲಕ್ಷ್ಯ ವಹಿಸಿದ್ದಾರೆ ಎಂದು ಆರೋಪಿಸಿದರು.

ಗೋಷ್ಠಿಯಲ್ಲಿ ಕಾರ್ಮಿಕ ಮುಖಂಡರಾದ ಎ.ಮಹದೇವ, ದಸಂಸ ಮುಖಂಡ ಹೆಚ್ ಬಿ ಸತೀಶ್, ಜಿಲ್ಲಾ ಸಂಘಟನಾ ಸಂಚಾಲಕ ಶಿವಣ್ಣ, ನಾಗೇಶ್ ದಲಿತ ಮುಖಂಡರಾದ ಶಿವಕುಮಾರ್ ಉಪಸ್ಥಿತರಿದ್ದರು.

ಈಶ್ವರೀಯ ವಿಶ್ವವಿದ್ಯಾಲಯದಲ್ಲಿ ಸಂಭ್ರಮದ ರಕ್ಷಾ ಬಂಧನ ಆಚರಣೆ


ರಾಜಯೋಗ ವಿದ್ಯಾರ್ಥಿಗಳಿಗೆ ವಿಶ್ವ ಭ್ರಾತೃತ್ವ ಸ್ನೇಹ ಸೂಚಕ ಶ್ರೀ ರಕ್ಷೆಯನ್ನು ಬ್ರಹ್ಮಾಕುಮಾರಿ ಲಕ್ಷ್ಮೀಜೀ ಕಟ್ಟಿದರು.

ಕೊಳ್ಳೇಗಾಲ: ನಗರದ ಬಸವೇಶ್ವರ ಬಡಾವಣೆಯಲ್ಲಿರುವ ಅಂತರಾಷ್ಟ್ರೀಯ ಆಧ್ಯಾತ್ಮಿಕ ಸಂಸ್ಥೆ ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವ ವಿದ್ಯಾಲಯದ ಜ್ಞಾನಜ್ಯೋತಿ ಭವನದಲ್ಲಿ ರಾಜಯೋಗ ವಿದ್ಯಾರ್ಥಿಗಳ ವಿಶ್ವಭ್ರಾತೃತ್ವ ಸ್ನೇಹ ಸೂಚಕ ರಕ್ಷಾಬಂಧನವನ್ನು ಆಚರಿಸಲಾಯಿತು.

ಮೈಸೂರು ಉಪವಲಯದ ಮುಖ್ಯ ಸಂಚಾಲಕಿ, ರಾಜಯೋಗಿನಿ ಬ್ರಹ್ಮಕುಮಾರಿ ಲಕ್ಷ್ಮೀಜೀ ಉದ್ಘಾಟಿಸಿ ರಕ್ಷಾಬಂಧನ ಮಹತ್ವಪೂರ್ಣ ಮಹೋತ್ಸವವಾಗಿದ್ದು ಸಹೋದರತ್ವವನ್ನು ಮೂಡಿಸುವ ಜಾಗತಿಕ ಹಬ್ಬವಾಗಿದೆ ಎಂದರು. ಇಂದಿನ ಮನುಷ್ಯರು ಕರ್ಮದ ಯಥಾರ್ಥ ಪರಿಚಯವನ್ನು ಅರಿಯದೆ ಅಪವಿತ್ರ ಕರ್ಮಗಳನ್ನು ಮಾಡುತ್ತಾ ಘೋರ ಅಪರಾಧಗೈಯ್ಯುತ್ತಿದ್ದಾರೆ ಇದರಲ್ಲಿ ಗಣ್ಯಾತೀತ ವ್ಯಕ್ತಿಗಳೂ ಸಹ ಇದರಿಂದ ಹೊರತಲ್ಲ. ಇದು ಯುವ ಸಮಾಜದ ಮೇಲೆ ಕೆಟ್ಟ ಪ್ರಭಾವ ಬೀರುತ್ತಿದೆ ಎಂದು ವಿಷಾದಿಸಿದರು.

ಈಶ್ವರೀಯ ವಿವಿ ಮುಖ್ಯ ಸಂಚಾಲಕಿ ರಾಜಯೋಗಿನಿ ಬ್ರಹ್ಮಕುಮಾರಿ ದಾನೇಶ್ವರೀಜೀ ಮಾತನಾಡಿ, ರಕ್ಷಾಬಂಧನವು ಭ್ರಾತೃತ್ವದ ಸಂಬಂಧ ಗಟ್ಟಿಗೊಳಿಸುವಂತಹ ಪರ್ವವಾಗಿದೆ. ಇಂದು ಸಮಾಜದಲ್ಲಿ ಹೆಚ್ಚು ಅನೈತಿಕ ವಿಚಾರಗಳೇ ಪ್ರಚಾರ ಪ್ರಸಾರವಾಗುತ್ತಿದೆ. ಇದರಿಂದ ಮನುಷ್ಯನ ಮನೋಮಾಲಿನ್ಯವು ಹೆಚ್ಚಾಗುತ್ತಿದೆ. ಅನೇಕ ರೋಗ ರುಜಿನಗಳು ಹೆಚ್ಚಾಗುತ್ತಿದೆ ಎಂದು ವಿಷಾದಿಸಿದರು. ರಾಜಯೋಗ ವಿದ್ಯಾರ್ಥಿಗಳಿಗೆ ವಿಶ್ವ ಭ್ರಾತೃತ್ವ ಸ್ನೇಹ ಸೂಚಕ ಶ್ರೀ ರಕ್ಷೆ ಯನ್ನು ಕಟ್ಟಿ ಸಿಹಿಯನ್ನು ಹಂಚಲಾಯಿತು. ಕಾರ್ಯಕ್ರಮದಲ್ಲಿ ಜಿಲ್ಲಾ ಸಂಚಾಲಕಿ ರಾಜಯೋಗಿನಿ ಬ್ರಹ್ಮಕುಮಾರಿ ಪ್ರಭಾಮಣೀಜಿ, ಗುಂಡ್ಲು ಪೇಟೆಯ ವೀಣಾಜಿ, ಯಳಂದೂರಿನ ಮಹಾಲಕ್ಷ್ಮಿ, ನರಸಿ ಪುರದ ಶಾಂಭವಿ, ತಲಕಾಡಿನ ಹಿಂದುಮತಿ, ಹನೂರಿನ ಬಿಂದು, ಮಾಜಿ ಶಾಸಕಿ ಪರಿಮಳ ನಾಗಪ್ಪ, ಬಿಕೆ ಆರಾಧ್ಯ, ರಾಧಕ್ಕ, ಕುಮಾರಿ ಅಕ್ಕ, ಪುಷ್ಪಕ್ಕ, ಪುಟ್ಟಶೇಖರ ಮೂರ್ತಿ, ಕಾಮತ್, ಬಾಲಕೃಷ್ಣಣ್ಣ, ನಾಗರಾಜಣ್ಣ ಹಾಜರಿದ್ದರು.

ಜಮೀನಿನಲ್ಲಿ ಜೋತು ಬಿದ್ದಿರುವ ವಿದ್ಯುತ್ ತಂತಿ : ಅಧಿಕಾರಿಗಳ ನಿರ್ಲಕ್ಷ್ಯ



ಯಳಂದೂರು.ಆ3.(ವಿ.ನಾಗರಾಜು)–ತಾಲೂಕಿನ ವೈ.ಕೆ.ಮೋಳೆ ಗ್ರಾಮದ ಬಳಿ ಇರುವ ದಂಡಿನ ಮಾರಮ್ಮನ ದೇವಸ್ಥಾನದ ಸಮೀಪದ ಜಮೀನಿನಲ್ಲಿ ಹಾದು ಹೋಗಿರುವ ವಿದ್ಯುತ್ ತಂತಿ ಜೋತು ಬಿದ್ದಿದ್ದು ಸೆಸ್ಕ್ ಅಧಿಕಾರಿಗಳು ಸರಿಪಡಿಸದೆ ನಿರ್ಲಕ್ಷ್ಯ ತಾಳಿದ್ದಾರೆ.

ಹಲವು ತಿಂಗಳಿಂದಲೂ ವಿದ್ಯುತ್ ತಂತಿ ಜೋತು ಬಿದ್ದಿದೆ. ಜಮೀನಿನ ಮೇಲೆ ವಿದ್ಯುತ್ ತಂತಿ ಹಾದು ಹೋಗಿರುವುದರಿಂದ ಬೆಳೆಗೆ ತಗುಲಿ ಫಸಲು ನಾಶವಾಗುವ ಭೀತಿಯೂ ರೈತರಲ್ಲಿ ಎದುರಾಗಿದೆ. ಅಲ್ಲದೇ ತಂತಿ ಕೈಗೆ ಎಟುಕುವಂತಿದ್ದು ಸ್ವಲ್ಪ ಯಾಮಾರಿದರೂ ಆತಂಕ ಕಟ್ಟಿಟ್ಟಬುತ್ತಿ.

ಈ ಸಂಬಂಧ ಯಳಂದೂರು ಸೆಸ್ಕ್ ಕಚೇರಿಗೆ ಹಲವು ಬಾರಿ ಅಧಿಕಾರಿಗಳಿಗೆ ಮನವಿ ಸಲ್ಲಿಸಿದ್ದರೂ ಯಾವುದೇ ಪ್ರಯೋಜನವಾಗಿಲ್ಲ ಎಂದು ರೈತರು ದೂರಿದ್ದಾರೆ. ಜೋತು ಬಿದ್ದಿರುವ ವಿದ್ಯುತ್ ತಂತಿ ಕುರಿತು ನನ್ನ ಗಮನಕ್ಕೆ ಬಂದಿರಲಿಲ್ಲ. ಕೂಡಲೇ ಜೋತು ಬಿದ್ದಿರುವ ತಂತಿಯನ್ನು ಸರಿಪಡಿಸಲು ಕ್ರಮವಹಿಸಲಾಗುವುದು ಎಂದು ಸೆಸ್ಕ್ ಜೆಇ ಪ್ರಸಾದ್ ತಿಳಿಸಿದರು.

ಧಾರ್ಮಿಕ, ಶೈಕ್ಷಣಿಕ ಕ್ಷೇತ್ರಕ್ಕೆ ಸಾಲೂರು ಮಠದ ಕೊಡುಗೆ ಅನನ್ಯ : ಸುತ್ತೂರು ಶ್ರೀ

ಹನೂರು, ಆ.3–ಧಾರ್ಮಿಕ, ಶೈಕ್ಷಣಿಕ ಕ್ಷೇತ್ರಕ್ಕೆ ಸಾಲೂರು ಬೃಹನ್ಮಠದ ಕೊಡುಗೆ ಅಪಾರವಾಗಿದೆ ಎಂದು ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ತಿಳಿಸಿದರು.

ತಾಲೂಕಿನ ಮಹದೇಶ್ವರ ಬೆಟ್ಟದ ಸಾಲೂರು ಬೃಹನ್ಮಠದಲ್ಲಿ ಹಮ್ಮಿಕೊಂಡಿದ್ದ ಶ್ರೀಪಟ್ಟದ ಗುರುಸ್ವಾಮೀಜಿ ಅವರ ಪುಣ್ಯ ಸಂಸ್ಕರಣೋತ್ಸವದಲ್ಲಿ ಮಾತನಾಡಿದ ಅವರು, 77 ಮಲೆಗಳಲ್ಲಿ ಒಂದಾದ ಮಹದೇಶ್ವರ ಬೆಟ್ಟವು ಪವಾಡ ಪುರುಷ ನಡೆದಾಡಿದ ಪುಣ್ಯಸ್ಥಳವಾಗಿದೆ. ಇಲ್ಲಿರುವ ಸಾಲೂರು ಮಠಕ್ಕೂ, ಭಕ್ತ ವೃಂದಕ್ಕೂ ಅತ್ಯಂತ ಅವಿನಾಭಾವ ಸಂಬಂಧವಿದೆ. ಕಾಡಂಚಿನ ಬೇಡಗಂಪಣ ಸಮುದಾಯದ ಜನರಿಗೆ ಶೈಕ್ಷಣಿಕ ಕ್ರಾಂತಿಯನ್ನೇ ಉಂಟು ಮಾಡಿದ ಶ್ರೇಯಸ್ಸು ಸಾಲೂರು ಮಠಕ್ಕೆ ಸಿಗುತ್ತದೆ ಎಂದರು.

ತುಮಕೂರಿನ ಸಿದ್ದಗಂಗಾ ಮಠದ ಶ್ರೀಸಿದ್ದಲಿಂಗ ಸ್ವಾಮೀಜಿ ಮಾತನಾಡಿ, ದೇಶದಲ್ಲಿ ಮಠಗಳಿಗೆ ಪವಿತ್ರ ಸ್ಥಾನವಿದೆ. ಕರ್ನಾಟಕದಲ್ಲಿ ಮಠಗಳ ಸೇವೆಯಿಂದ ಸಾಕ್ಷರತೆ ಪ್ರಮಾಣ ಹೆಚ್ಚಾಗಿದೆ. ಶೈಕ್ಷಣಿಕ, ಧಾರ್ಮಿಕ, ಆರೋಗ್ಯ, ಸೇವಾ ಕಾರ್ಯಗಳು ರಾಜ್ಯಕ್ಕೆ ಮಾದರಿಯಾಗಿದೆ ಎಂದರು.


ಮಹದೇಶ್ವರ ಬೆಟ್ಟದ ಸಾಲೂರು ಬೃಹನ್ಮಠದಲ್ಲಿ ಹಮ್ಮಿಕೊಂಡಿದ್ದ ಶ್ರೀಪಟ್ಟದ ಗುರುಸ್ವಾಮೀಜಿ ಅವರ ಪುಣ್ಯ ಸಂಸ್ಕರಣೋತ್ಸವದಲ್ಲಿ ಸುತ್ತೂರು ಶ್ರೀ, ಆದಿಚುಂಚನಗಿರಿಯ ಶ್ರೀಗಳು, ತುಮಕೂರಿನ ಸಿದ್ಧಗಂಗ ಮಠದ ಶ್ರೀಗಳು ಭಾಗವಹಿಸಿದ್ದರು.

ಆದಿಚುಂಚನಗಿರಿ ಮಠದ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಮಾತನಾಡಿ, ಹಲವು ಮಹನೀಯರ ಜ್ಞಾನ ಸಂಪತ್ತಿನಿಂದ ಭಾರತ ಶಕ್ತಿಯುಳ್ಳ ರಾಷ್ಟ್ರವಾಗಿದೆ. ಇಂತಹ ಮಹಾತ್ಮರನ್ನು ನೀಡಿ, ಜ್ಞಾನ ಪರಂಪರೆಯ ಬೆಳವಣಿಗೆಯಲ್ಲಿ ಮಹತ್ವದ ಪಾತ್ರ ವಹಿಸಿರುವ ಮಠಗಳಲ್ಲಿ ಮಹದೇಶ್ವರಬೆಟ್ಟದ ಸಾಲೂರು ಬೃಹನ್ ಮಠವೂ ಒಂದಾಗಿದೆ ಎಂದರು.

ಕಾರ್ಯಕ್ರಮದಲ್ಲಿ ವಾಲ್ಮೀಕಿ ಗುರುಪೀಠದ ಶ್ರೀ ಪ್ರಸನ್ನಾನಂದಪುರಿ ಸ್ವಾಮೀಜಿ, ಕುಂದೂರು ಮಠದ ಡಾ.ಶ್ರೀಶರತ್‌ಚಂದ್ರ ಸ್ವಾಮೀಜಿ, ಹರಿಹರ ವೀರಶೈವ ಲಿಂಗಾಯತ ಮಠದ ಶ್ರೀ ವಚನಾನಂದ ಸ್ವಾಮೀಜಿ, ಶ್ರೀ ಪುರುಷೋತ್ತಮ ಸ್ವಾಮೀಜಿ, ಡಾ.ಮುಮ್ಮಡಿ ಶಿವರುದ್ರ ಸ್ವಾಮೀಜಿ, ಶಾಸಕರಾದ ಎಂ.ಆರ್. ಮಂಜುನಾಥ್, ಎಚ್.ಎಂ. ಗಣೇಶ್ ಪ್ರಸಾದ್, ಎ.ಆರ್.ಕೃಷ್ಣಮೂರ್ತಿ, ಎ.ಜಿ. ವೆಂಕಟಾಚಲಂ, ಮಾಜಿ ಶಾಸಕರಾದ ಆರ್. ನರೇಂದ್ರ, ಪರಿಮಳನಾಗಪ್ಪ, ಬಾಲರಾಜು, ಎನ್. ಮಹೇಶ್, ಹೆಚ್‌ಎಎಲ್ ಅಧ್ಯಕ್ಷರಾದ ಡಾ.ಡಿ.ಕೆ. ಸುನೀಲ್, ಮಾನಸ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ದತ್ತೇಶ್‌ಕುಮಾರ್, ಪ್ರಾಧಿಕಾರದ ಕಾರ್ಯದರ್ಶಿ ರಘು ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಎರಡನೇ ಶ್ರಾವಣ ಶನಿವಾರ: ಹರಿಕಥೆ, ಅನ್ನ ಸಂತರ್ಪಣೆ, ವಿಶೇಷ ಪೂಜೆ

ಚಾಮರಾಜನಗರ, ಆ.3–ಎರಡನೇ ಶ್ರಾವಣ ಶನಿವಾರದ ಪ್ರಯುಕ್ತ. ಕೆಲವೆಡೆ ಹರಿಕಥೆ, ಶನಿದೇವರಿಗೆ ವಿಶೇಷಪೂಜೆ, ಅನ್ನಸಂತರ್ಪಣೆ, ವಿಷ್ಣು ದೇವಾಲಯಗಳಲ್ಲಿ ದೇವರಿಗೆ ವಿಶೇಷ ಅಲಂಕಾರ, ಮಹಾಮಂಗಳಾರತಿ ಮಾಡಲಾಯಿತು.

ನಗರದ ನೃಪತುಂಗ ವೃತ್ತದಲ್ಲಿರುವ ಶನಿದೇವರ ಭಕ್ತ ವೃಂದದಿಂದ ಎರಡನೇ ಶ್ರಾವಣ ಶನಿವಾರದ ಪ್ರಯುಕ್ತ ಶನಿದೇವರನ್ನು ವಿಶೇಷವಾಗಿ ಅಲಂಕರಿಸಿ, ಮಹಾಮಂಗಳಾರತಿ ನಡೆಸಿ, ಮಂಡ್ಯದ ಶಿವಾರ್ ಉಮೇಶ್ ಮತ್ತು ತಂಡದವರಿಂದ ಶನೇಶ್ವರಸ್ವಾಮಿ ಹರಿಕಥೆಯನ್ನು ಏರ್ಪಡಿಸಿ, ಸಾವಿರಾರು ಜನರಿಗೆ ಅನ್ನಸಂತರ್ಪಣೆ ಮಾಡಲಾಯಿತು,


ದೇವಸ್ಥಾನಗಳ ಅರ್ಚಕರು ಮುಂಜಾನೆಯೇ ಬಂದು ದೇವಸ್ಥಾನಗಳನ್ನು ಬಾಳೆ ಕಂದು, ಮಾವಿನ ಸೊಪ್ಪುಗಳಿಂದ ಶೃಂಗಾರಗೊಳಿಸಿ, ದೇವರನ್ನು ಅಲಂಕರಿಸಿ, ವಿಶೇಷ ಪೂಜೆ ಸಲ್ಲಿಸಿ, ಮಹಾ ಮಂಗಳಾರತಿ ಮಾಡಿದರು. ನಗರದ ಹರಳುಕೋಟೆ ಆಂಜನೇಯಸ್ವಾಮಿ, ಜನಾರ್ಧನಸ್ವಾಮಿ, ಚಾಮರಾಜೇಶ್ವರ, ಕೊಳದ ಗಣಪತಿ, ಲಕ್ಷ್ಮೀ ಕಾಂತ, ಕಾಂತ ನಾರಾಯಣಸ್ವಾಮಿ, ಕರಿವರದ ರಾಜಸ್ವಾಮಿ, ದೇವಸ್ಥಾನಗಳಿಗೆ ಭಕ್ತರು ತೆರಳಿ ವಿಶೇಷ ಪೂಜೆ ಸಲ್ಲಿಸಿದರು.


ನೃಪತುಂಗ ವೃತ್ತದಲ್ಲಿ ಎರಡನೇ ಶ್ರಾವಣ ಶನಿವಾರದ ಪ್ರಯುಕ್ತ, ಮಂಡ್ಯದ ಶಿವಾರ್ ಉಮೇಶ್ ಮತ್ತು ತಂಡದವರಿಂದ ಶನೇಶ್ವರಸ್ವಾಮಿ ಹರಿಕಥೆಯನ್ನು ಏರ್ಪಡಿಸಲಾಗಿತ್ತು.

ವಿಷಕಾರಿ ಹಣ್ಣು ತಿಂದು ಎಂಟು ಮಕ್ಕಳು, ಓರ್ವ ಮಹಿಳೆ ಅಸ್ವಸ್ಥ

ಚಾಮರಾಜನಗರ,ಆ.3–ವಿಷಕಾರಿ ಹಣ್ಣು ತಿಂದು ಎಂಟು ಮಕ್ಕಳು ಹಾಗೂ ಓರ್ವ ಮಹಿಳೆ ಅಸ್ವಸ್ಥಗೊಂಡ ಘಟನೆ ನಡೆದಿದೆ.

ಕಬ್ಬು ಕಡಿಯಲೆಂದು ಮಹಾರಾಷ್ಟ್ರದಿಂದ ಬಂದಿದ್ದ ಕಾರ್ಮಿಕರು ಯಳಂದೂರಿಗೆ ಸಮೀಪದ ಯಲಿಯೂರಿನಲ್ಲಿ ಬೀಡುಬಿಟ್ಟಿದ್ದರು. ಭಾನುವಾರ ರಾತ್ರಿ ಜಮೀನಿನ ಬೇಲಿಯಲ್ಲಿದ್ದ ಕಾಡು ಹಣ್ಣನ್ನು ವಿಷಕಾರಿ ಎಂದು ತಿಳಿಯದೆ ತಿಂದಿದ್ದಾರೆ. ಹಣ್ಣನ್ನು ತಿಂದ ಕೆಲ ಸಮಯದಲ್ಲೇ ಮಹಿಳೆ ಹಾಗೂ ಮಕ್ಕಳಿಗೆ ವಾಂತಿ ಮಾಡಲಾರಂಭಿಸಿದ್ದಾರೆ ಇದರಿಂದ ಮಹಿಳೆ ಹಾಗೂ ಮಕ್ಕಳು ತೀವ್ರವಾಗಿ ಅಸ್ವಸ್ಥಗೊಂಡಿದ್ದಾರೆ. ಅಸ್ವಸ್ಥಗೊಂಡವರನ್ನು ಚಿಕಿತ್ಸಗಾಗಿ ಜಿಲ್ಲಾ ಆಸ್ಪತ್ರೆಗೆ ದಾಖಲು ಮಾಡಲಾಗಿದೆ.



ಚಾ.ನಗರ ಜಿಲ್ಲಾ ಕಾಂಗ್ರೆಸ್ ಪೂರ್ವಭಾವಿ ಸಭೆ

ಚಾಮರಾಜನಗರ: ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ರಾಹುಲ್‌ಗಾಂಧಿ ನೇತೃತ್ವದಲ್ಲಿ ನಡೆಯಲಿರುವ ಪ್ರತಿಭಟನಾ ರ್‍ಯಾಲಿಯಲ್ಲಿ ಪಾಲ್ಗೊಳ್ಳುವ ಸಂಬಂಧ ಜಿಲ್ಲಾ ಕಾಂಗ್ರೆಸ್ ಕಛೇರಿಯಲ್ಲಿ ಇಂದು ಪೂರ್ವಭಾವಿ ನಡೆಯಿತು. ಸಭೆಯಲ್ಲಿ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಪಿ,ಮರಿಸ್ವಾಮಿ ಮಾತನಾಡಿ, ಪ್ರತಿಭಟನೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಯ ಕರ್ತರು ಭಾಗವಹಿಸಬೇಕೆಂದು ಮನವಿ ಮಾಡಿ ಕೊಂಡರು.

ಕ್ಷೇತ್ರ ಉಸ್ತುವಾರಿಗಳಾದ ಎಸ್‌ಸಿ ಬಸವರಾಜು, ಮಿಲಿಂಧರ್ ಧರ್ಮಸೇನಾ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎ.ಎಸ್.ಗುರುಸ್ವಾಮಿ, ಮಹಮದ್ ಅಸ್ಗರ್, ಹೆಚ್‌ವಿ ಚಂದ್ರು, ತೋಟೇಶ್, ಕಾಡಾ ಮಾಜಿ ಅಧ್ಯಕ್ಷ ಹಂಗಳ ನಂಜಪ್ಪ, ಜಿಲ್ಲಾ ಕಾಗ್ರೆಸ್ ಪ್ರಧಾನ ಕಾರ್ಯದರ್ಶಿಗಳಾದ ಆರ್,ಮಹದೇವ್, ಚಿಕ್ಕ ಮಹದೇವ್, ಎಸ್ಟಿ ವಿಭಾಗದ ರಾಜ್ಯ ಪ್ರದಾನ ಕಾರ್ಯದರ್ಶಿ ಸೋಮನಾಯಕ, ಜಿಲ್ಲಾ ಯುವ ಕಾಂಗ್ರೆಸ್ ಅಧ್ಯಕ್ಷ ಯೋಗೇಂದ್ರ, ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ನಾಗರತ್ನ, ಪಕ್ಷದ ಮುಂಚೂಣಿ ಘಟಕಗಳ ಅಧ್ಯಕ್ಷರು, ಪದಾಧಿ ಕಾರಿಗಳು, ಹಾಲಿ ಹಾಗೂ ಮಾಜಿ ಪಕ್ಷದ ಜನಪ್ರತಿನಿಧಿಗಳು, ಪಕ್ಷದ ಕಾರ್ಯಕರ್ತರು ಮುಖಂಡರು ಇದ್ದರು.

ರೆಪರ್ಟರಿ ನಾಟಕ ಅಭ್ಯಾಸಕ್ಕೆ ಚಾಲನೆ



'ರಂಗಭೂಮಿ ಟ್ರಸ್ಟ್ ಕೊಡಗು' ವತಿಯಿಂದ ಆಯೋಜಿಸಿರುವ ನಾಲ್ಕನೇ ವರ್ಷದ ರೆಪರ್ಟರಿ ನಾಟಕ ಅಭ್ಯಾಸಕ್ಕೆ ಶನಿವಾರ ಚಾಲನೆ ದೊರಕಿತು.

ಮೈಸೂರು, ಆ.3– 'ರಂಗಭೂಮಿ ಟ್ರಸ್ಟ್ ಕೊಡಗು' ವತಿಯಿಂದ ಆಯೋಜಿಸಿರುವ ನಾಲ್ಕನೇ ವರ್ಷದ ರೆಪರ್ಟರಿ ನಾಟಕ ಅಭ್ಯಾಸಕ್ಕೆ ಶನಿವಾರ ಚಾಲನೆ ದೊರಕಿತು.

ನಗರದ ಬೋಗಾದಿಯಲ್ಲಿರುವ ಹರಿ ವಿದ್ಯಾಲಯದ ಸಹಕಾರದೊಂದಿಗೆ ನಡೆಸಲಾಗುತ್ತಿರುವ ನಾಟಕ ಅಭ್ಯಾಸಕ್ಕೆ ವಿಧ್ಯುಕ್ತವಾಗಿ ಚಾಲನೆ ನೀಡಿದ ಆದಿತ್ಯ ಆಸ್ಪತ್ರೆಯ ಡಾ.ಚಂದ್ರಶೇಖರ್ ಮಾತನಾಡಿ, ರಂಗಕರ್ಮಿ ಅಡ್ಡಂಡ ಕಾರ್ಯಪ್ಪ ಅವರ ನಾಟಕಗಳು ರಾಜ್ಯದಲ್ಲಿ ಸಂಚಲನ ಮೂಡಿಸಿವೆ. ಇವರ ರಾಷ್ಟ್ರೀಯತೆ ನಾಟಕಗಳು ಇಂದಿನ ಅವಶ್ಯಕತೆಯಾಗಿವೆ ಎಂದು ಅಭಿಪ್ರಾಯಿಸಿದರು.

ಸಾಮಾಜಿಕ ಕಾರ್ಯಕರ್ತ ಪಾಂಡು ರಂಗ ಸತೀಶ್ ಮಾತನಾಡಿ, ಈ ಹಿಂದೆ ಪ್ರದರ್ಶನಗೊಂಡ ಟಿಪ್ಪು ನಿಜ ಕನಸುಗಳು, ಕರಿನೀರ ವೀರ, ಸತ್ಯವನ್ನೇ ಹೇಳುತ್ತೇನೆ ನಾಟಕಗಳು ತುಂಬಿದ ರಂಗಮಂದಿರದಲ್ಲಿ ಪ್ರದರ್ಶನಗೊಂಡಿವೆ. ಹೊಸ ಪ್ರೇಕ್ಷಕರು ರಂಗಭೂಮಿಯತ್ತ ಮುಖಮಾಡುವಂತೆ ಮಾಡುವಲ್ಲಿ ಅಡ್ಡಂಡ ಕಾರ್ಯಪ್ಪನವರು ಯಶಸ್ವಿಯಾದರು ಎಂದರು.

ಕಾರ್ಯಕ್ರಮದಲ್ಲಿ ಹಿರಿಯರಾದ ಸತ್ಯನ್, ಹರಿವಿದ್ಯಾಲಯದ ಕಾರ್ಯದರ್ಶಿ ಭಗವಾನ್ ಹೊಸಮನೆ, ಅನಿತಾ ಕಾರ್ಯಪ್ಪ ಮತ್ತು ರೆಪರ್ಟರಿ ಕಲಾವಿದರು ಉಪಸ್ಥಿತರಿದ್ದರು. ಸಭಾ ಕಾರ್ಯಕ್ರಮದ ಬಳಿಕ 'ನಿಜ ಮಹಾತ್ಮ ಬಾಬಾಸಾಹೇಬ' ನಾಟಕಾಭ್ಯಾಸ ಆರಂಭಗೊಂಡಿತು.

ಸುಯೋಗ್ ನರ್ಸಿಂಗ್ ಕಾಲೇಜಿನಿಂದ ಮಾನಸಿಕ ಆರೋಗ್ಯ ಪ್ರದರ್ಶನ




ಸುಯೋಗ್ ನರ್ಸಿಂಗ್ ಕಾಲೇಜಿನ ಸಭಾಂಗಣದಲ್ಲಿ ಸೈಕಿ ಎಕ್ಸ್‌ಪೋ ಕಾರ್ಯಕ್ರಮವನ್ನು ವಿವೇಕ ಆಸ್ಪತ್ರೆಯ ಮಾನಸಿಕ ಸಲಹೆಗಾರ ಡಾ.ವಾಸು ಉದ್ಘಾಟಿಸಿದರು.

ಮೈಸೂರು, ಆ.3– ಸುಯೋಗ್ ನರ್ಸಿಂಗ್ ಕಾಲೇಜು ಹಾಗೂ ಸುಯೋಗ್ ಆಸ್ಪತ್ರೆಯ ಸಂಯುಕ್ತಾಶ್ರಯದಲ್ಲಿ ಕಾಲೇಜಿನ ಸಭಾಂಗಣದಲ್ಲಿ ಸೈಕಿ ಎಕ್ಸ್‌ಪೋ (ಮಾನಸಿಕ ಆರೋಗ್ಯ ನರ್ಸಿಂಗ್ ಪ್ರದರ್ಶನ) ಏರ್ಪಡಿಸಲಾಗಿತ್ತು. ಕಾರ್ಯಕ್ರಮವನ್ನು ಉದ್ಘಾಟಿಸಿದ ವಿವೇಕ ಆಸ್ಪತ್ರೆಯ ಮಾನಸಿಕ ಸಲಹೆಗಾರ ಡಾ.ವಾಸು ಮಾತನಾಡಿ, ಪ್ರತಿಯೊಬ್ಬರಿಗೂ ಮಾನಸಿಕ ಆರೋಗ್ಯ ಅತೀ ಮಹತ್ವದ್ದಾಗಿದ್ದು, ಮಾನಸಿಕ ರೋಗಿಗಳಿಗೆ ನರ್ಸ್‌ಗಳು ನೀಡುವ ಆರೈಕೆ ಮತ್ತು ಪುನರ್ವಸತಿ ಸೇವೆಗಳ ಅಗತ್ಯವಾಗಿದೆ. ಈ ದಿಸೆಯಲ್ಲಿ ಮಾನಸಿಕ ಆರೋಗ್ಯವನ್ನು ಅನಾವರಣಗೊಳಿಸುವ ಇಂತಹ ಪ್ರದರ್ಶನಗಳನ್ನು ವಿದ್ಯಾರ್ಥಿಗಳಲ್ಲಿ ಅರಿವು ಮತ್ತು ಜಾಗೃತಿ ಮೂಡಿಸುವಲ್ಲಿ ಸಹಕಾರಿಯಾಗುತ್ತವೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಸುಯೋಗ್ ಶಿಕ್ಷಣ ಸಂಸ್ಥೆಗಳ ಉಪಾಧ್ಯಕ್ಷೆ ಡಾ.ಸೀಮಾ ಯೋಗಣ್ಣ ಮಾತನಾಡಿ, ಇಂದಿನ ಯುವ ಜನಾಂಗದಲ್ಲಿ ಮಾನಸಿಕ ಒತ್ತಡ ಹೆಚ್ಚಾಗುತ್ತಿದ್ದು, ಅದನ್ನು ನಿಭಾಯಿಸುವುದು, ಮಾನಸಿಕ ಶಾಂತಿ ಹಾಗೂ ಧನಾತ್ಮಕ ಚಿಂತನೆಗಳನ್ನು ಬೆಳೆಸಿಕೊಳ್ಳುವ ಅಗತ್ಯತೆ ಹೆಚ್ಚಿದೆ ಎಂದರು.

ಕಾರ್ಯಕ್ರಮದಲ್ಲಿ ಸುಯೋಗ್ ಶಿಕ್ಷಣ ಸಂಸ್ಥೆಗಳ ಸಿಇಎಂಡಿ ಡಾ. ಆರ್.ರಾಜೇಂದ್ರ ಪ್ರಸಾದ್, ಟ್ರಸ್ಟಿ ಶ್ರೀಮತಿ ಸುಧಾ ಯೋಗಣ್ಣ, ಕಾಲೇಜಿನ ಪ್ರಾಂಶುಪಾಲೆ ಪ್ರೊ.ನಾಗಮಣಿ, ಶಿಕ್ಷಕಿ ಸಂಗೀತ ಮುಂತಾದವರು ಉಪಸ್ಥಿತರಿದ್ದರು.

ಆ.10ರಿಂದ ಶ್ರೀ ರಾಘವೇಂದ್ರ ಸ್ವಾಮಿಗಳ ಆರಾಧನಾ ಮಹೋತ್ಸವ



ಮೈಸೂರು, ಆ.3– ಮೈಸೂರಿನ ವಿವಿ ಮೊಹಲ್ಲಾ, 12ನೇ ಕ್ರಾಸ್‌ನಲ್ಲಿರುವ ಶ್ರೀ ರಾಘವೇಂದ್ರ ಸ್ವಾಮಿಗಳ ಬೃಂದಾವನ ಸನ್ನಿಧಾನದಲ್ಲಿ ಆ.10ರಿಂದ 12ರವರೆಗೆ ಶ್ರೀ ರಾಘವೇಂದ್ರ ಗುರುಸಾರ್ವಭೌಮರ 354ನೇ ಆರಾಧನಾ ಮಹೋತ್ಸವ ಜರುಗಲಿದೆ.

ನಿತ್ಯ ಬೆಳಗ್ಗೆ 7ಕ್ಕೆ ಪಾದಪೂಜೆ, 9ಕ್ಕೆ ಪಂಚಾಮೃತ, ಮಧ್ಯಾಹ್ನ 12.30ಕ್ಕೆ ಅಲಂಕಾರ ಬ್ರಾಹ್ಮಣ ಸೇವೆ, ಸಂಜೆ 7ರಿಂದ ರಾತ್ರಿ 8.30ರವರೆಗೆ ಸಂಗೀತ ಕಾರ್ಯಕ್ರಮ ನಡೆಯಲಿದೆ. ನಂತರ ಪಲ್ಲಕ್ಕಿ ಉತ್ಸವ, ರಥೋತ್ಸವ, ಮಹಾಮಂಗಳಾರತಿ ಹಾಗೂ ಪ್ರಸಾದ ವಿನಿಯೋಗ ನಡೆಯಲಿದೆ. ಆ.12ರಂದು ಬೆಳಗ್ಗೆ 10.30ಕ್ಕೆ ರಥೋತ್ಸವ ಜರುಗಲಿದೆ ಎಂದು ಶ್ರೀ ಸಾಗರಕಟ್ಟೆ ಮಠ ಟ್ರಸ್ಟ್‌ನ ಪ್ರಕಟಣೆ ತಿಳಿಸಿದೆ.

ಕ್ರೈಸ್ತ ಸೋದರಿಯರ ಬಂಧನ ಖಂಡಿಸಿ ಕ್ಯಾಥೋಲಿಕ್ ಸಮುದಾಯದ ಶಾಂತಿಯುತ ಪ್ರತಿಭಟನೆ



ಮೈಸೂರು, ಆ.3– ಛತ್ತೀಸ್‌ಗಢದಲ್ಲಿ ಇಬ್ಬರು ಕ್ರೈಸ್ತ ಸಹೋದರಿಯರನ್ನು ಕಾನೂನುಬಾಹಿರವಾಗಿ ಬಂಧಿಸಿರುವುದರ ಆರೋಪದ ವಿರುದ್ಧ ಮಂಡ್ಯ, ಚಾಮರಾಜನಗರ ಮತ್ತು ಮೈಸೂರು ಜಿಲ್ಲೆಗಳ ಕ್ಯಾಥೋಲಿಕ್ ಸಮುದಾಯದ ಸದಸ್ಯರು ಶಾಂತಿಯುತ ಪ್ರತಿಭಟನಾ ಮೆರವಣಿಗೆ ನಡೆಸಿದರು.

ಹಿನಕಲ್ ಇನ್ಫಂಟ್ ಜೀಸಸ್ ಕ್ಯಾಥೆಡ್ರಲ್ ಆವರಣದಲ್ಲಿ ಮೆರವಣಿಗೆಯನ್ನು ಮಂಡ್ಯ ಧರ್ಮಪ್ರಾಂತ್ಯದ ಥೋಮಸ್ ತೆನ್ನಾಟ್ಟಿಲ್ ಉದ್ಘಾಟಿಸಿದರು. ಮೆರವಣಿಗೆ ಹಿನಕಲ್ ಜಂಕ್ಷನ್‌ವರೆಗೆ ಸಾಗಿದ್ದು, ಬಳಿಕ ಚರ್ಚ್ ಆವರಣಕ್ಕೆ ಮರಳಿತು. ಪ್ರತಿಭಟನಾ ಸಭೆಯಲ್ಲಿ ಮಾತನಾಡಿದ ಥೋಮಸ್ ತೆನ್ನಾಟ್ಟಿಲ್ ಅವರು, ಬಂಧಿತ ಕ್ರೈಸ್ತ ಸೋದರಿಯರಿಗೆ ಜಾಮೀನು ದೊರಕಿದರೂ, ಅವರು ಎಲ್ಲ ಆರೋಪಗಳಿಂದ ಸಂಪೂರ್ಣವಾಗಿ ಮುಕ್ತಗೊಳ್ಳಬೇಕು ಎಂದು ಒತ್ತಾಯಿಸಿದರು.

ಫಾ.ಸೋಜನ್ ಐಕರಕುನ್ನೆಲ್ (ಎಂಎಸ್ಟಿ) ಮತ್ತು ಫಾ.ಅಗಸ್ಟಿನ್ ಪಯ್ಯಂಪಳ್ಳಿ (ಸಿಎಂಐ) ಅವರು ಮಾತನಾಡಿ, ಬಂಧಿತ ಸೋದರಿಯರೊಂದಿಗೆ ಸಹಾನುಭೂತಿ ವ್ಯಕ್ತಪಡಿಸಿದರು ಮತ್ತು ನ್ಯಾಯ ದೊರಕಿಸುವಂತೆ ಆಗ್ರಹಿಸಿದರು.

ಫಾ.ಅಮಲ್ ಜಾನ್ ಎಡತ್ತಿಲ್ ಅವರು ಸಹಿ ಅಭಿಯಾನಕ್ಕೆ ಚಾಲನೆ ನೀಡಿದರು. ಸಹಿ ಸಂಗ್ರಹವನ್ನು ಛತ್ತೀಸ್‌ಗಢ ಸರ್ಕಾರದ ಅಧಿಕಾರಿಗಳಿಗೆ ಕಳುಹಿಸಲಾಗುವುದು ಎಂದು ಚರ್ಚ್ ಟ್ರಸ್ಟಿಗಳು ಕೆ.ಎಲ್. ಜೋಸೆಫ್ ಕೊಂಗಾಟ್ಟು ಕುನ್ನೇಲ್, ಟೋಮಿ ಜೋಸೆಫ್ ಪಾರೆಕಾಟ್ಟಿಲ್ ಮತ್ತು ಜೋಸೆಫ್ ಥೋಮಸ್ ಮಾಂಪರಂಬಿಲ್ ತಿಳಿಸಿದ್ದಾರೆ.

ಪ್ರತಿಭಟನೆ ನೇತೃತ್ವವನ್ನು ಜಾಯ್ ಚಿಟ್ಟಿಲಪ್ಪಳ್ಳಿ, ಸುನಿಲ್ ಜೋಸ್, ಅನಿಲ್ ಜೋಸ್ ವಹಿಸಿದ್ದರು.

301 ನಗರಗಳಲ್ಲಿ 2.42 ಲಕ್ಷ ವಿದ್ಯಾರ್ಥಿಗಳು ನೀಟ್–ಪಿಜಿ ಪರೀಕ್ಷೆಗೆ ಹಾಜರು

ನವದೆಹಲಿ, ಆ.3– ರಾಷ್ಟ್ರೀಯ ವೈದ್ಯಕೀಯ ವಿಜ್ಞಾನಗಳ ಪರೀಕ್ಷೆ ಮಂಡಳಿಯು ಪ್ರಸಕ್ತ ಸಾಲಿನ ವೈದ್ಯಕೀಯ ಸ್ನಾತಕೋತ್ತರ ಕೋರ್ಸ್‌ಗಳ ಪ್ರವೇಶಕ್ಕೆ ಭಾನುವಾರ ನಡೆಸಿದ 'ನೀಟ್–ಪಿಜಿ' ಪರೀಕ್ಷೆಗೆ 2 ಲಕ್ಷದ 42 ಸಾವಿರಕ್ಕೂ ಅಧಿಕ ಅಭ್ಯರ್ಥಿಗಳು ಹಾಜರಾಗಿದ್ದಾರೆ ಎಂದು ವರದಿಯಾಗಿದೆ.

ಮೇ 30ರಂದು ಸುಪ್ರೀಂಕೋರ್ಟ್ ನೀಡಿದ್ದ ನಿರ್ದೇಶನದಂತೆ ದೇಶದ 301 ನಗರಗಳ, 1,052 ಕೇಂದ್ರಗಳಲ್ಲಿ ಒಂದೇ ಪಾಳಿಯಲ್ಲಿ (ಬೆಳಿಗ್ಗೆ 9ರಿಂದ ಮಧ್ಯಾಹ್ನ 12.30ರವರೆಗೆ) ಪರೀಕ್ಷೆ ನಡೆದಿದೆ. ಅಕ್ರಮಗಳನ್ನು ತಪ್ಪಿಸುವ ನಿಟ್ಟಿನಲ್ಲಿ ಕಂಪ್ಯೂಟರ್ ಆಧಾರಿತವಾಗಿ ನಡೆದ ಅತಿದೊಡ್ಡ ಪರೀಕ್ಷೆ ಇದಾಗಿದೆ.

ಕಾನೂನು ಮತ್ತು ಸುವ್ಯವಸ್ಥೆ, ಸೈಬರ್ ಭದ್ರತೆ ಹಾಗೂ ಯಾವುದೇ ಕೇಂದ್ರಕ್ಕೆ ವಿದ್ಯುತ್ ಸರಬರಾಜು ವ್ಯತ್ಯಯವಾಗದಂತೆ ನೋಡಿಕೊಳ್ಳಲು ಎಲ್ಲ ರಾಜ್ಯಗಳ ಮುಖ್ಯ ಕಾರ್ಯದರ್ಶಿಗಳು, ಪೊಲೀಸ್ ಮಹಾನಿರ್ದೇಶಕರಿಗೆ ಎನ್‌ಬಿಇಎಂಎಸ್ ಪತ್ರ ಬರೆದಿತ್ತು. ಈ ನಿಟ್ಟಿನಲ್ಲಿ ಎಲ್ಲ ಜಿಲ್ಲಾಡಳಿತಗಳು, ಪೊಲೀಸರ ಸಹಕಾರವನ್ನೂ ಕೋರಿತ್ತು.

ಮೈಸೂರು ಮಿತ್ರ 46 — ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

ಅಟಲ್ ಬಿಹಾರಿ ವಾಜಪೇಯಿ ವಸತಿ ಶಾಲೆಯಲ್ಲಿ

ಮೂಲ ಸೌಕರ್ಯ ಕಲ್ಪಿಸಿಲ್ಲವೆಂದು ಆರೋಪಿಸಿ ಪ್ರತಿಭಟನೆ

ನಂಜನಗೂಡು, ಆ.3– ವಸತಿ ಶಾಲೆಯಲ್ಲಿ ವ್ಯಾಸಂಗ ಮಾಡುತ್ತಿರುವ ಮಕ್ಕಳಿಗೆ ಮೂಲ ಸೌಕರ್ಯ ಕಲ್ಪಿಸಿಲ್ಲ ಎಂದು ಆರೋಪಿಸಿ ಸಿಎಂ ಸಿದ್ದರಾಮಯ್ಯ ಪ್ರತಿನಿಧಿಸುವ ಕ್ಷೇತ್ರ ವ್ಯಾಪ್ತಿಯ ವಸತಿ ಶಾಲೆ ವಿದ್ಯಾರ್ಥಿಗಳು ಹಾಗೂ ಪೋಷಕರು ಭಾನುವಾರ ದಿಢೀರ್ ಪ್ರತಿಭಟನೆ ನಡೆಸಿ ಆಕ್ರೋಶ ವ್ಯಕ್ತಪಡಿಸಿದರು.

ತಾಲೂಕಿನ ತಗಡೂರು ಸಮೀಪದ ಕೊಂತಯ್ಯನಹುಂಡಿಯಲ್ಲಿರುವ ಅಟಲ್ ಬಿಹಾರಿ ವಾಜಪೇಯಿ ವಸತಿ ಶಾಲೆಯಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಕನಿಷ್ಟ ಸೇವಿಸಲು ಯೋಗ್ಯವಾಗಿರುವ ಆಹಾರ ನೀಡುತ್ತಿಲ್ಲ. ಶೌಚಾಲಯ ಸ್ವಚ್ಛ ಗೊಳಿಸುತ್ತಿಲ್ಲ ಹಾಗೂ ಕುಡಿಯಲು ಶುದ್ಧ ನೀರು ಪೂರೈಸುತ್ತಿಲ್ಲ ಎಂದು ಆರೋಪಿಸಿ ಭಾನುವಾರ ಪೋಷಕರು ಹಾಗೂ ಮಕ್ಕಳು ಬೆಳಗಿನ ಉಪಹಾರ ಸೇವಿಸದೆ ಎಐಡಿಎಸ್‌ಓ (ಅಖಿಲ ಭಾರತ ಪ್ರಜಾಸತ್ತಾತ್ಮಕ ವಿದ್ಯಾರ್ಥಿ ಸಂಘಟನೆ) ವಿದ್ಯಾರ್ಥಿ ಸಂಘಟನೆ ಕಾರ್ಯಕರ್ತರೊಡಗೂಡಿ ವಸತಿ ಶಾಲೆ ಎದುರು ದಿಢೀರ್ ಪ್ರತಿಭಟನೆ ನಡೆಸಿ ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.


ಮಕ್ಕಳಿಗೆ ಮೂಲಭೂತ ಸೌಕರ್ಯ ಒದಗಿಸಿಲ್ಲ ಎಂದು ಆರೋಪಿಸಿ ವಿದ್ಯಾರ್ಥಿಗಳು ಹಾಗೂ ಪೋಷಕರು ಪ್ರತಿಭಟನೆ ನಡೆಸಿದರು.

ಈ ವೇಳೆ ಮಾತನಾಡಿದ ಪೋಷಕರು ವಸತಿ ಶಾಲೆಯಲ್ಲಿ ಮೂಲ ಸೌಕರ್ಯ ಕೊರತೆ ಇದ್ದು, ಶೈಕ್ಷಣಿಕ ವಾತಾವರಣಕ್ಕೆ ಪೂರಕ ಚಟುವಟಿಕೆಗಳು ನಡೆಯುತ್ತಿಲ್ಲ. ಇನ್ನು ವಸತಿ ಶಾಲೆಯಲ್ಲಿ ಮಕ್ಕಳಿಗೆ ಹಳಸಿದ ಆಹಾರ ನೀಡಲಾಗುತ್ತಿದ್ದು, ಹಲವು ವಿದ್ಯಾರ್ಥಿಗಳು ಚರ್ಮ ರೋಗದಿಂದ ಬಳಲುತ್ತಿದ್ದಾರೆ. ಮಕ್ಕಳಿಗೆ ಸ್ನಾನಕ್ಕೆ ಬಿಸಿ ನೀರಿನ ಸೌಕರ್ಯವಿಲ್ಲ. ಜೊತೆಗೆ ಶಾಲೆಯಲ್ಲಿ ಸಮಸ್ಯೆಗಳನ್ನು ಪ್ರಶ್ನಿಸುವ ವಿದ್ಯಾರ್ಥಿಗಳಿಗೆ ಥಳಿಸಲಾಗುತ್ತಿದೆ. ಈ ಬಗ್ಗೆ ಹಲವು ಬಾರಿ ದೂರು ನೀಡಿದರೂ ಯಾವುದೇ ಪ್ರಯೋಜನವಾಗಿಲ್ಲ. ಆದ್ದರಿಂದ ಅಧಿಕಾರಿಗಳು ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಿ ಸೂಕ್ತ ಪರಿಹಾರಕ್ಕೆ ಮುಂದಾಗಬೇಕು. ಇಲ್ಲವಾದಲ್ಲಿ ಮಕ್ಕಳನ್ನು ವಾಪಸ್ ಕರೆದೊಯ್ಯುವುದಾಗಿ ಎಚ್ಚರಿಸಿದರು.

ಬಳಿಕ ಮಾಹಿತಿ ಪಡೆದು ಸ್ಥಳಕ್ಕಾಗಮಿಸಿದ ಉಪ ವಿಭಾಗಾಧಿಕಾರಿ ಆಶಪ್ಪ, ಕ್ರೈಸ್ಟ್ ಸಂಸ್ಥೆಯ ರಂಗೇಗೌಡ ಹಾಗೂ ತಹಸೀಲ್ದಾರ್ ಶಿವಕುಮಾರ್ ಕಾಸ್ನೂರು ಪ್ರತಿಭಟನಾನಿರತ ಮಕ್ಕಳು ಹಾಗೂ ಪೋಷಕರೊಡನೆ ಸಮಾಲೋಚನೆ ನಡೆಸಿ ವಸತಿ ಶಾಲೆಯಲ್ಲಿ ವಿದ್ಯಾರ್ಥಿಗಳು ಎದುರಿಸುತ್ತಿರುವ ಸಮಸ್ಯೆಯನ್ನು ಇನ್ನು ಒಂದು ವಾರದಲ್ಲಿ ಬಗೆಹರಿಸುವ ಭರವಸೆ ನೀಡಿದರು. ಬಳಿಕ ವಿದ್ಯಾರ್ಥಿಗಳು ಹಾಗೂ ಪೋಷಕರು ಪ್ರತಿಭಟನೆ ಹಿಂತೆಗೆದುಕೊಂಡರು.

ಪ್ರತಿಭಟನೆಯಲ್ಲಿ ಎಐಡಿಎಸ್‌ಓ ಜಿಲ್ಲಾ ಕಾರ್ಯದರ್ಶಿ ಅಭಿಷೇಕ್, ಕಾರ್ಯ ಗ್ರಾಪಂ ಸದಸ್ಯ ಗುರುಸ್ವಾಮಿ, ಪೋಷಕರಾದ ಮಹದೇವ್, ನಾಗರಾಜು, ಕೊಂತಯ್ಯನಹುಂಡಿ ಗುರುಸ್ವಾಮಿ ಸೇರಿದಂತೆ ನೂರಾರು ಮಂದಿ ಭಾಗವಹಿಸಿದ್ದರು.

ಹಂಚೀಪುರ ಜಮೀನಿನಲ್ಲಿ ಚಿರತೆ ಪ್ರತ್ಯಕ್ಷ



ಸರಗೂರು, ಆ.3– ತಾಲೂಕಿನ ಹಂಚೀಪುರ ಗ್ರಾಮದ ಸಿದ್ದಮಲ್ಲೇಶ್ವರ ಮಠದ ಜಮೀನಿನಲ್ಲಿ ಚಿರತೆ ಪ್ರತ್ಯಕ್ಷವಾಗಿದ್ದು, ಗ್ರಾಮಸ್ಥರು ಆತಂಕಗೊಂಡಿದ್ದಾರೆ.

ಜಮೀನಿನಲ್ಲಿ ಕೆಲಸ ಮಾಡುತ್ತಿದ್ದ ರೈತರಿಗೆ ಚಿರತೆ ಕಾಣಿಸಿಕೊಂಡಿದ್ದು, ಭಯಗೊಂಡ ರೈತರು ಸರಗೂರು ವಲಯ ಅರಣ್ಯಾಧಿಕಾರಿಗಳ ಗಮನಕ್ಕೆ ತಂದಿದ್ದಾರೆ.

ಗ್ರಾಮದ ಯಜಮಾನ ಗುರುಸಿದ್ದಪ್ಪ ಹಾಗೂ ಗ್ರಾಮಸ್ಥರು ಮಾತನಾಡಿ, ಕೆಲ ದಿನಗಳ ಹಿಂದೆ ಹುಲಿ ಹಸುವಿನ ಮೇಲೆ ದಾಳಿ ಮಾಡಿ ಬಲಿ ಪಡೆದಿತ್ತು. ಇದೀಗ ಚಿರತೆ ಪ್ರತ್ಯಕ್ಷವಾಗಿದೆ. ಹೀಗಾಗಿ ಪದೇಪದೇ ಹುಲಿ, ಚಿರತೆ ಪ್ರತ್ಯಕ್ಷವಾಗುತ್ತಿರುವುದರಿಂದ ಗ್ರಾಮಸ್ಥರು ಹಾಗೂ ರೈತರು ಜಮೀನಿಗೆ ತೆರಳಲು ಭಯಪಡುತ್ತಿದ್ದಾರೆ. ಕೂಡಲೇ ಚಿರತೆ ಸೆರೆಗೆ ಕ್ರಮ ವಹಿಸಬೇಕು ಎಂದು ಆಗ್ರಹಿಸಿದರು.

ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಆರ್‌ಎಫ್‌ಓ ಮಹಾಲಕ್ಷ್ಮೀ ಮಾತನಾಡಿ, ಎಸಿಎಫ್ ಎಸ್.ಸುಮಿತ್ರ ಅವರ ನಿರ್ದೇಶನದಲ್ಲಿ ಸ್ಥಳ ಪರಿಶೀಲಿಸಿ ಹುಲಿ, ಚಿರತೆ ತಿರುಗಾಡುವ ಸ್ಥಳಗಳಲ್ಲಿ ಬೋನ್ ಇಡಲಾಗಿದೆ ಅವಶ್ಯವಿದ್ದಲ್ಲಿ ಇನ್ನೊಂದು ಬೋನ್ ಇಡಲಾಗುವುದು. ಅರಣ್ಯ ಇಲಾಖೆ ನಿಮ್ಮೊಂದಿಗಿದೆ. ಭಯಪಡುವುದು ಬೇಡ. ಹುಲಿ ಹಾಗೂ ಚಿರತೆ ಸೆರೆಗೆ ಮುಂದಾಗುತ್ತೇವೆ ಎಂದರು.

ಬಿಜೆಪಿ ಪ್ರತಿಭಟನೆ ಫಲವಾಗಿ ರೈತರಿಗೆ ರಸಗೊಬ್ಬರ ವಿತರಣೆ

ಸಂಘಟನಾತ್ಮಕ ಸಭೆಯಲ್ಲಿ ಬಿಜೆಪಿ ಜಿಲ್ಲಾಧ್ಯಕ್ಷ ಕುಂಬ್ರಹಳ್ಳಿ ಸುಬ್ಬಣ್ಣ

ಪಿರಿಯಾಪಟ್ಟಣ, ಆ.3– ಬಿಜೆಪಿ ಪ್ರತಿಭಟನೆ ಫಲವಾಗಿ ರೈತರಿಗೆ ರಸಗೊಬ್ಬರ ವಿತರಿಸಲು ಸರ್ಕಾರ ಮುಂದಾಗಿದೆ ಎಂದು ಬಿಜೆಪಿ ಜಿಲ್ಲಾಧ್ಯಕ್ಷ ಕುಂಬ್ರಹಳ್ಳಿ ಸುಬ್ಬಣ್ಣ ತಿಳಿಸಿದರು.

ಪಟ್ಟಣದಲ್ಲಿ ನಡೆದ ಬಿಜೆಪಿ ಸಂಘಟನಾತ್ಮಕ ಸಭೆಯಲ್ಲಿ ಮಾತನಾಡಿದ ಅವರು, ರೈತರಿಗೆ ರಸಗೊಬ್ಬರ ಸಿಗದೆ ಸಾಕಷ್ಟು ಪರದಾಡುತ್ತಿದ್ದನ್ನು ಮನಗಂಡು ಬಿಜೆಪಿ ಪ್ರತಿಭಟನೆ ಮಾಡಲಾಗಿ ಸರ್ಕಾರ ಇಂದು ರಸಗೊಬ್ಬರ ವಿತರಿಸಲು ಕ್ರಮ ಕೈಗೊಳ್ಳುತ್ತಿದೆ. ಜಿಲ್ಲೆಯಲ್ಲಿ ಈಗಾಗಲೇ ಪ್ರಧಾನಿ ಮೋದಿ ನೇತೃತ್ವದ ಬಿಜೆಪಿ ಬಲಿಷ್ಠವಾಗಿದ್ದು, 7 ಕ್ಷೇತ್ರಗಳಲ್ಲಿ 5 ಕ್ಷೇತ್ರವನ್ನಾದರೂ ನಾವು ಜಯ ಸಾಧಿಸುವ ಛಲ ಹೊಂದಿದ್ದೇವೆ ಅದರಲ್ಲಿ ಪಿರಿಯಾಪಟ್ಟಣ ಕ್ಷೇತ್ರವು ಒಂದು ಎಂದರು.


ಕಾರ್ಯಕ್ರಮವನ್ನು ಬಿಜೆಪಿ ಜಿಲ್ಲಾಧ್ಯಕ್ಷ ಕುಂಬ್ರಹಳ್ಳಿ ಸುಬ್ಬಣ್ಣ ಉದ್ಘಾಟಿಸಿದರು.

ರಾಜ್ಯ ಕಾಂಗ್ರೆಸ್ ಸರ್ಕಾರ ಗ್ಯಾರಂಟಿ ಯೋಜನೆ ಜಾರಿಗೊಳಿಸಿರುವುದು ಸಂತೋಷದ ವಿಚಾರ. ಆದರೆ ಈ ಮೂಲಕ ಸಾರ್ವಜನಿಕರಿಗೆ ಆಗುತ್ತಿರುವ ತೊಂದರೆಯನ್ನು ಗಮನಿಸಬೇಕು. ಕೋಟ್ಯಾಂತರ ಮಹಿಳೆಯರು ಶಕ್ತಿ ಯೋಜನೆಯಲ್ಲಿ ಪ್ರಯಾಣಿಸಿದ್ದಾರೆ ಎಂದು ಲೆಕ್ಕ ತೋರಿಸುವ ಸರ್ಕಾರ ಪ್ರಯಾಣಿಕರಿಗೆ ಹೆಚ್ಚಿನ ಬಸ್ ಸೌಲಭ್ಯ ಮಾಡಿದೆಯೇ ಎಂಬುದನ್ನು ಉತ್ತರಿಸಬೇಕು ಎಂದರು.

ತಾಲೂಕು ಬಿಜೆಪಿ ಅಧ್ಯಕ್ಷ ರಾಜೇಂದ್ರ ಮಾತನಾಡಿ, ಅಭಿವೃದ್ಧಿ ಯೋಜನೆಗಳಿಗೆ ಕೇಂದ್ರ ಸರ್ಕಾರದಿಂದ ಸಾಕಷ್ಟು ಅನುದಾನ ಬಿಡುಗಡೆಯಾಗುತ್ತಿದ್ದು, ಈ ಯೋಜನೆಗಳ ಕಟ್ಟಡ ಮತ್ತು ಕಾಮಗಾರಿಗಳ ಉದ್ಘಾಟನಾ ಕಾರ್ಯಕ್ರಮಗಳಿಗೆ ಸ್ಥಳೀಯ ಸಚಿವರು ಸಂಸದರನ್ನು ನಿರ್ಲಕ್ಷ್ಯ ಮಾಡುತ್ತಿದ್ದಾರೆ. ಇದರ ಪರಿಣಾಮ ತಾಲೂಕಿನ ಚಪ್ಪರದಹಳ್ಳಿ ನೂತನ ಗ್ರಾಪಂ ಕಟ್ಟಡ ಉದ್ಘಾಟನೆಯನ್ನು ಬಿಜೆಪಿ ಕಾರ್ಯಕರ್ತರು ತಡೆದು ನಿಲ್ಲಿಸಿದ್ದಾರೆ. ಇದೇ ರೀತಿ ಪರಿಸ್ಥಿತಿ ಮುಂದುವರೆದರೆ ಪಕ್ಷದಿಂದ ಉಗ್ರ ಹೋರಾಟ ಮಾಡಬೇಕಾಗುತ್ತದೆ. ಸಚಿವರು ಕೇವಲ ಪ್ರವಾಸದಲ್ಲಿಯೇ ಕಾಲಹರಣ ಮಾಡುತ್ತಿದ್ದು, ತಾಲೂಕಿನ ಅಭಿವೃದ್ಧಿ ಕಡೆ ಗಮನ ಹರಿಸಬೇಕು ಎಂದು ಒತ್ತಾಯಿಸಿದರು.

ಬಿಜೆಪಿ ಜಿಲ್ಲಾ ಉಪಾಧ್ಯಕ್ಷ ರಮೇಶ್, ಸೋಮಶೇಖರ್, ಪ್ರಧಾನ ಕಾರ್ಯದರ್ಶಿ ಕಿರಣ್, ಜಯರಾಮೇಗೌಡ, ಜಿಲ್ಲಾ ವಕ್ತಾರ ದಯಾನಂದ್ ಪಟೇಲ್, ಮುಖಂಡರಾದ ಆರ್.ಟಿ.ಸತೀಶ್, ಲೋಕಪಾಲಯ್ಯ, ಚನ್ನಬಸವರಾಜ್, ವಿಕ್ರಂ ರಾಜ್, ಚಂದ್ರು, ಸ್ವಾಮಿ, ಪಾಪಣ್ಣ, ಬಾಲಕೃಷ್ಣ, ಸಾಮ್ರಾಟ್ ಸೇರಿದಂತೆ ಇತರರಿದ್ದರು.

ರೆಸಾರ್ಟ್‌ಗಳಿಗೆ ಅನುಮತಿ ನೀಡಿ ಹಣ ಮಾಡಬೇಕಾಗಿಲ್ಲ

ತಾಲೂಕಿನ ಜನತೆಯೇ ನನ್ನ ಆಸ್ತಿ: ಶಾಸಕ ಅನಿಲ್

ಹೆಚ್.ಡಿ.ಕೋಟೆ, ಆ.3–ತಾಲೂಕಿನಲ್ಲಿ ಅಕ್ರಮ ರೆಸಾರ್ಟ್‌ಗಳಿಗೆ ಅನುಮತಿ ನೀಡಿ ನಾನು ಹಣ ಮಾಡಬೇಕಾಗಿಲ್ಲ. ತಾಲೂಕಿನ ಜನತೆಯೇ ನನ್ನ ಆಸ್ತಿ ಎಂದು ಶಾಸಕ ಅನಿಲ್ ತಿಳಿಸಿದರು.



ಪಟ್ಟಣದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ತಾಲೂಕಿನ ಕಬಿನಿ, ತಾರಕ, ನುಗು, ಜಲಾಶಯಗಳ ಹಿನ್ನೀರಿನಲ್ಲಿ ಅಕ್ರಮವಾಗಿ ರೆಸಾರ್ಟ್‌ಗಳನ್ನು ನಿರ್ಮಾಣ ಮಾಡಲಾಗುತ್ತಿದೆ. ಇದಕ್ಕೆ ಸ್ಥಳೀಯ ಶಾಸಕರು ಅವಕಾಶ ಮಾಡಿಕೊಟ್ಟಿದ್ದಾರೆ ಎಂದು ಕೆಲವೊಂದು ವಿದ್ಯುನ್ಮಾನ ಸುದ್ದಿ ಮಾಧ್ಯಮ ಹಾಗೂ ಸಾಮಾಜಿಕ ಜಾಲತಾಣದಲ್ಲಿ ಆರೋಪಿಸಲಾಗಿದೆ. ನನ್ನ ತಂದೆ, ಮಾಜಿ ಶಾಸಕ ದಿ.ಚಿಕ್ಕಮಾದು ಹಾಗೂ ಮಾಜಿ ಸಂಸದ ದಿ.ಆರ್.ಧ್ರುವನಾರಾಯಣ್ ಅವರು ತಾಲೂಕಿನ ಜನತೆಯ ವಿಶ್ವಾಸ ಹಾಗೂ ಅಭಿವೃದ್ಧಿಪಡಿಸುವ ಮಾರ್ಗದರ್ಶನ ನೀಡಿ ಹೋಗಿದ್ದಾರೆ. ಅದರಂತೆ ನಾನು ತಾಲೂಕಿನಲ್ಲಿ ಅಭಿವೃದ್ಧಿ ಕೆಲಸ ಮಾಡಿ ಜನತೆ ವಿಶ್ವಾಸಗಳಿಸುತ್ತೇನೆ ಹೊರತು ರೆಸಾರ್ಟ್‌ಗಳಿಗೆ ಅನುಮತಿ ನೀಡಿ ನಾನು ಹಣ ಮಾಡುವ ಆಸೆ ನನಗಿಲ್ಲ. ಜನತೆ ನನಗೆ 2ನೇ ಬಾರಿ 36 ಸಾವಿರ ಮತಗಳ ಅಂತರದಲ್ಲಿ ಗೆಲ್ಲಿಸಿದ್ದಾರೆ. ಅವರೇ ನನ್ನ ಆಸ್ತಿ. ನಾನು ಯಾವ ಹಣ, ಆಸ್ತಿ ಮಾಡುವುದಕ್ಕೆ ಮುಂದಾಗುವುದಿಲ್ಲ. ನನ್ನ ಗುರಿ ತಾಲೂಕಿನ ಅಭಿವೃದ್ಧಿ. ನಮ್ಮ ತಾಲೂಕಿನ ಜನತೆಯ ಪ್ರೀತಿ, ವಿಶ್ವಾಸ ಗೆಲ್ಲುವುದೇ ನನ್ನ ಹಾದಿ ಎಂದರು.

ತಾಲೂಕಿನಲ್ಲಿ ಅಕ್ರಮ ರೆಸಾರ್ಟ್ ನಿರ್ಮಾಣ ಸಂಬಂಧ ನನಗೆ ಯಾವುದೇ ಲಿಖಿತ ದೂರುಗಳು ಬಂದಿಲ್ಲ. ಆದ್ದರಿಂದ ಎಲೆಕ್ಟ್ರಾನಿಕ್ ಮಾಧ್ಯಮದಲ್ಲಿನ ಅಂಶಗಳನ್ನು ದೂರುಗಳೆಂದು ಆಧರಿಸಿ ತಾಲೂಕಿನಲ್ಲಿ ಅಕ್ರಮ ರೆಸಾರ್ಟ್ ನಿರ್ಮಾಣವಾಗುತ್ತಿದ್ದಲ್ಲಿ ಅಥವಾ ಕಾರ್ಯ ನಿರ್ವಹಿಸುತ್ತಿದ್ದಲ್ಲಿ ಸಂಬಂಧಪಟ್ಟ ಇಲಾಖೆ ಅಧಿಕಾರಿಗಳಿಂದ ತನಿಖೆ ನಡೆಸಿ ಶಿಸ್ತು ಕ್ರಮ ಕೈಗೊಳ್ಳಬೇಕೆಂದು ಜಿಲ್ಲಾಧಿಕಾರಿ ಲಕ್ಷ್ಮೀಕಾಂತ ರೆಡ್ಡಿ ಅವರಿಗೆ ಪತ್ರ ಬರೆದು ಸೂಚಿಸಿದ್ದೇನೆ ಎಂದರು.

> “ತಾಲೂಕಿನಲ್ಲಿ ಅಕ್ರಮ ರೆಸಾರ್ಟ್‌ಗಳಿಗೆ ಅನುಮತಿ ನೀಡುತ್ತಿದ್ದಾರೆ ಎಂದು ಕೆಲವು ವಿದ್ಯುನ್ಮಾನ ಮಾಧ್ಯಮದವರು ಬೇರೆ ಕ್ಷೇತ್ರದಿಂದ ಕೆಲವರನ್ನು ಕರೆದುಕೊಂಡು ಬಂದು ಗಾಳಿಯಲ್ಲಿ ಗುಂಡು ಹೊಡೆದ ಹಾಗೆ ಮಾತನಾಡಿಸಿದರೆ ಪ್ರಯೋಜನ ಇಲ್ಲ. ಅಕ್ರಮ ರೆಸಾರ್ಟ್ ಆಗಿರುವ ಬಗ್ಗೆ ಸಂಪೂರ್ಣ ಮಾಹಿತಿ ನೀಡಲಿ. ಅದನ್ನು ಬಿಟ್ಟು ಜನತೆ, ಸುಳ್ಳು ಸಂದೇಶ ನೀಡಿ ನನ್ನ ತಾಲೂಕಿನ ಜನತೆಯ ಪ್ರೀತಿ ವಿಶ್ವಾಸವನ್ನು ಯಾರಿಂದಲೂ ಬೇರ್ಪಡಿಸಲು ಸಾಧ್ಯವಿಲ್ಲ. – **ಅನಿಲ್, ಶಾಸಕ.**

ಆ.10ಕ್ಕೆ, ಸಾಲಿಗ್ರಾಮದಲ್ಲಿ ಬಸವ ಜಯಂತಿ

ಚುಂಚನಕಟ್ಟೆ, ಆ.3– ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಮತ್ತು ವೀರಶೈವ ಲಿಂಗಾಯತ ಸಂಘಟನೆಗಳ ಒಕ್ಕೂಟದಿಂದ ಆ.10 ರಂದು ಸಾಲಿಗ್ರಾಮದಲ್ಲಿ ನಡೆಯುವ ಬಸವ ಜಯಂತಿ ಅಂಗವಾಗಿ ತಾಲೂಕು ವ್ಯಾಪ್ತಿಯ ಗ್ರಾಮಗಳಲ್ಲಿ ಬಸವ ರಥದ ಮೂಲಕ ಸಾರ್ವಜನಿಕರನ್ನು ಕಾರ್ಯಕ್ರಮಕ್ಕೆ ಆಹ್ವಾನಿಸಲಾಯಿತು.

ಸಾಲಿಗ್ರಾಮ ತಾಲೂಕಿನ ಹೊಸೂರು, ಹಳಿಯೂರು ಬಡಾವಣೆ, ಹಳಿಯೂರು, ಸೋಮನಹಳ್ಳಿ, ಕುಪ್ಪೆ ಮುದ್ದನಹಳ್ಳಿ, ಹೊಸಕೋಟೆ ನಿಜಗನಹಳ್ಳಿ ಸೇರಿದಂತೆ ಇನ್ನಿತರ ಗ್ರಾಮಗಳಲ್ಲಿ ಬಸವ ರಥದೊಂದಿಗೆ ಕಾರ್ಯಕ್ರಮದ ಪ್ರಚಾರ ನಡೆಸಲಾಯಿತು.


ಬಸವ ರಥದ ಮೂಲಕ ಸಾರ್ವಜನಿಕರನ್ನು ಕಾರ್ಯಕ್ರಮಕ್ಕೆ ಆಹ್ವಾನಿಸಲಾಯಿತು.

ಸಂಘಟನೆ ಅಧ್ಯಕ್ಷ ಹಾಡ್ಯ ಮಹದೇವ ಸ್ವಾಮಿ ಮಾತನಾಡಿ, ಅಂದು ಬೆಳಗ್ಗೆ 11 ಗಂಟೆಗೆ ಸಾಲಿಗ್ರಾಮ ಸರ್ಕಾರಿ ಶಾಲಾ ಆವರಣದಲ್ಲಿ ನಡೆಯುವ ಕಾರ್ಯಕ್ರಮದ ಸಾನಿಧ್ಯವನ್ನು ಸುತ್ತೂರು ಶ್ರೀಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಸಿದ್ದಮಠದ ಶ್ರೀಸಿದ್ದಲಿಂಗ ವಹಿಸಲಿದ್ದಾರೆ ಎಂದು ತಿಳಿಸಿದರು

ಕಾರ್ಯಕ್ರಮವನ್ನು ಅರಣ್ಯ ಖಾತೆ ಸಚಿವ ಈಶ್ವರ ಖಂಡ್ರೆ ಉದ್ಘಾಟಿಸಲಿದ್ದು, ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಅಧ್ಯಕ್ಷ ಶಂಕರ ಬದರಿ ಪ್ರತಿಭಾ ಪುರಸ್ಕಾರ ನೆರವೇರಿಸಲಿದ್ದಾರೆ. ಸಾಧಕರಿಗೆ ಮಾಜಿ ಸಚಿವ ಜೆ.ಸಿ.ಮಾಧುಸ್ವಾಮಿ ಸನ್ಮಾನ ಮಾಡಲಿದ್ದು, ಕೇಂದ್ರ ಸಚಿವ ಹೆಚ್.ಡಿ.ಕುಮಾರ ಸ್ವಾಮಿ, ಶಾಸಕ ಡಿ.ರವಿಶಂಕರ್, ಮಾಜಿ ಸಚಿವ ಸಾ.ರಾ.ಮಹೇಶ್, ಎಂಎಲ್‌ಸಿ ಹೆಚ್.ವಿಶ್ವನಾಥ್, ಶಾಸಕ ಗಣೇಶ್ ಪ್ರಸಾದ್, ಮಾಜಿ ಎಂಎಲ್‌ಸಿ ತೋಂಟದಾರ್ಯ ಮತ್ತಿತರರು ಭಾಗವಹಿಸಲಿದ್ದಾರೆ ಎಂದರು.

ಭಾನುವಾರ ಬೆಳಗ್ಗೆ 8 ಗಂಟೆಗೆ ಶ್ರೀ ಯೋಗನರಸಿಂಹಸ್ವಾಮಿ ದೇವಾಲದಿಂದ ವೇದಿಕೆವರೆಗೆ ಬೃಹತ್ ಮೆರವಣಿಗೆ ಹಮ್ಮಿಕೊಳ್ಳಲಾಗಿದ್ದು, ಕಾರ್ಯಕ್ರಮದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಸಾರ್ವಜನಿಕರು ಭಾಗವಹಿಸುವಂತೆ ಮನವಿ ಮಾಡಿದರು.

ಈ ವೇಳೆ ಪ್ರಚಾರ ಸಮಿತಿ ಅಧ್ಯಕ್ಷ ನಟರಾಜು, ಕೆ.ಆರ್.ನಗರ– ಸಾಲಿಗ್ರಾಮ ತಾಲೂಕು ಯುವ ಘಟಕದ ಅಧ್ಯಕ್ಷ ಕುಮಾರಸ್ವಾಮಿ, ಕುಪ್ಪೆ ಗ್ರಾಪಂ ಮಾಜಿ ಉಪಾಧ್ಯಕ್ಷ ನವೀನ್, ಮಾಯಿಗೌಡನಹಳ್ಳಿ ಗ್ರಾಪಂ ಮಾಜಿ ಸದಸ್ಯ ಎಂ.ಎಸ್.ಮಲ್ಲಿಕಾರ್ಜುನ, ಹನಸೋಗೆ ಗ್ರಾಪಂ ಮಾಜಿ ಸದಸ್ಯ ನಟಬುದ್ದಿ, ವೀರಶೈವ ಮುಖಂಡರಾದ ಪ್ರಕಾಶ್, ಗಿರೀಶ್, ನಾಗರಾಜು, ರೇವಣ್ಣ, ಹಳಿಯೂರು ರೇವಣ್ಣ, ನಾಗೇಂದ್ರ, ಹರೀಶ್, ಪುಟ್ಟರಾಮಣ್ಣ ಸೇರಿದಂತೆ ಮತ್ತಿತರರಿದ್ದರು.

ಮಾನವನ ದೈಹಿಕ, ಮಾನಸಿಕ ಆರೋಗ್ಯಕ್ಕೆ ಕ್ರೀಡೆ ಸಹಕಾರಿ

ಪತ್ರಕರ್ತರ ಕೂಟದಲ್ಲಿ ಡಿವೈಎಸ್ಪಿ ರಘು

ನಂಜನಗೂಡು, ಆ.3– ಕ್ರೀಡೆ ಮನುಷ್ಯನ ಮಾನಸಿಕ, ದೈಹಿಕ ಆರೋಗ್ಯ ಕಾಪಾಡುತ್ತದೆ. ನಿತ್ಯ ಕ್ರೀಡೆಯಲ್ಲಿ ತೊಡಗಿಸಿಕೊಳ್ಳುವುದರಿಂದ ಒತ್ತಡ ನಿವಾರಿಸಿ, ದುಶ್ಚಟಗಳಿಂದ ದೂರವಿರಲು ಸಹಕಾರಿಯಾಗಲಿದೆ ಎಂದು ಡಿವೈಎಸ್ಪಿ ರಘು ತಿಳಿಸಿದರು.

ನಗರದ ಸಿಟಿಜನ್ ಶಾಲೆ ಆವರಣದಲ್ಲಿ ತಾಲೂಕು ಪತ್ರಕರ್ತರ ಸಂಘದಿಂದ ಏರ್ಪಡಿಸಿದ್ದ ಪತ್ರಕರ್ತರು ಮತ್ತು ಪತ್ರಕರ್ತರ ಕುಟುಂಬ ವರ್ಗದವರ ಕ್ರೀಡಾಕೂಟಕ್ಕೆ ಚಾಲನೆ ನೀಡಿ ಮಾತನಾಡಿದರು.


ಕ್ರೀಡಾಕೂಟಕ್ಕೆ ಡಿವೈಎಸ್ಪಿ ರಘು ಗುಂಡು ಎಸೆಯುವ ಮೂಲಕ ಚಾಲನೆ ನೀಡಿದರು.

ಇಂದಿನ ಒತ್ತಡದ ಜೀವನ ಶೈಲಿಯಿಂದಾಗಿ ದೈಹಿಕ ಕಸರತ್ತು ಕಡಿಮೆಯಾಗಿ ಹಲವು ಕಾಯಿಲೆಗಳಿಗೆ ತುತ್ತಾಗುತ್ತಿದ್ದೇವೆ. ಅಲ್ಲದೇ ಮೊಬೈಲ್ ಮತ್ತು ಟಿವಿ ಬಳಕೆಯಿಂದಾಗಿ ಮಾನಸಿಕ ಖಿನ್ನತೆಗೆ ಒಳಗಾಗುತ್ತಿದ್ದೇವೆ. ಕ್ರೀಡೆಯಲ್ಲಿ ತೊಡಗುವುದರಿಂದ ಮಾನಸಿಕ ಮತ್ತು ದೈಹಿಕ ಆರೋಗ್ಯ ಉತ್ತಮಪಡಿಸುವ ಜೊತೆಗೆ ವ್ಯಕ್ತಿಯಲ್ಲಿ ಕ್ರೀಡಾ ಮನೋಭಾವ ಬೆಳವಣಿಗೆಯಾಗುತ್ತದೆ. ಇದರಿಂದಾಗಿ ಜೀವನದಲ್ಲಿ ಸೋತಾಗ ಕುಗ್ಗದೆ, ಗೆದ್ದಾಗ ಹಿಗ್ಗದೆ ಜೀವನದಲ್ಲಿ ಎದುರಾಗುವ ಸವಾಲುಗಳನ್ನು ಸಮರ್ಥವಾಗಿ ಎದುರಿಸಲು ಸಹಕಾರಿಯಾಗುತ್ತದೆ. ವಿದ್ಯಾರ್ಥಿಗಳು ಕ್ರೀಡೆಯಲ್ಲಿ ತೊಡಗುವುದರಿಂದ ನಾಯಕತ್ವ ಗುಣ ಮತ್ತು ಸಂವಹನ ಕೌಶಲ್ಯಗಳನ್ನು ಬೆಳೆಸಿಕೊಳ್ಳಬಹುದು. ಕ್ರೀಡೆಯಲ್ಲಿ ಸೋಲು ಗೆಲುವು ಮುಖ್ಯವಲ್ಲ. ಭಾಗವಹಿಸುವಿಕೆ ಮುಖ್ಯ. ಆದ್ದರಿಂದ ಪ್ರತಿದಿನ ಎಲ್ಲರೂ ಯಾವುದಾದರೂ ಒಂದು ಕ್ರೀಡೆಯಲ್ಲಿ ತೊಡಗಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಹಿರಿಯ ಪತ್ರಕರ್ತ ಎಂ.ಪ್ರಕಾಶ್ ಮಾತನಾಡಿ, ಸಿಟಿಜನ್ ಶಿಕ್ಷಣ ಸಂಸ್ಥೆ ಕ್ರೀಡಾಕೂಟ ನಡೆಸಲು ಸ್ಥಳಾವಕಾಶ ಮಾಡಿಕೊಡುವ ಜೊತೆಗೆ ಕ್ರೀಡಾಕೂಟಕ್ಕೆ ಅಗತ್ಯ ಸಹಕಾರವನ್ನು ನೀಡುವ ಮೂಲಕ ತಾಲೂಕು ಪತ್ರಕರ್ತರ ಸಂಘದ ಬೆನ್ನೆಲುಬಾಗಿ ನಿಂತು ಕೆಲಸ ಮಾಡುತ್ತಿದೆ. ಪತ್ರಕರ್ತರ ಸೇವೆ ಗುರುತಿಸಿ ಶಿಕ್ಷಣ ಸಂಸ್ಥೆ ಸಂಸ್ಥಾಪಕ ಜಾವಿದ್ ಅಹಮದ್ ಹೆಸರಿನಲ್ಲಿ ದತ್ತಿ ಸ್ಥಾಪಿಸಿ ಪ್ರಶಸ್ತಿ ನೀಡುತ್ತಿರುವುದು ವಿಶೇಷವಾಗಿದೆ. ಸಿಟಿಜನ್ ಶಿಕ್ಷಣ ಸಂಸ್ಥೆ ಸೇವಾ ಕಾರ್ಯಗಳು ಹೀಗೆ ಮುಂದುವರೆಯಲಿ ಎಂದರು.

ಕಾರ್ಯಕ್ರಮದಲ್ಲಿ ಆಟೋಟಗಳಲ್ಲಿ ಭಾಗವಹಿಸಿ ಗೆದ್ದವರಿಗೆ ಬಹುಮಾನ ವಿತರಿಸಲಾಯಿತು. ಸಿಟಿಜನ್ ಶಿಕ್ಷಣ ಸಂಸ್ಥೆ ಕಾರ್ಯದರ್ಶಿ ಮಹಮ್ಮದ್ ಅಲಿ, ಪತ್ರಕರ್ತರ ಸಂಘದ ಅಧ್ಯಕ್ಷ ಹೆಚ್.ಡಿ.ರಂಗಸ್ವಾಮಿ, ಉಪಾಧ್ಯಕ್ಷ ವೇಣುಗೋಪಾಲ್, ಕಾರ್ಯದರ್ಶಿ ಎನ್.ಪಿ. ದೀಪಕ್ ಪ್ರಸಾದ್, ಖಜಾಂಚಿ ಭಾಗ್ಯರಾಜು, ಪತ್ರಕರ್ತರಾದ ಮಧು, ಶ್ರೀನಿವಾಸ್, ಪ್ರತಾಪ್, ಕೆಂಪೇಗೌಡ, ಮಹದೇವ ಪ್ರಸಾದ್, ಚಿನ್ನಸ್ವಾಮಿ, ಗಂಗಾಧರ್, ಸತ್ಯನಾರಾಯಣ, ಲೋಕೇಶ್, ಚೆನ್ನಪ್ಪ, ಮಹದೇವಸ್ವಾಮಿ, ರಾಘವೇಂದ್ರ, ಸಿದ್ದು, ನಂಜುಂಡ ನಾಯಕ, ಕೃಷ್ಣೇಗೌಡ ಪತ್ರಕರ್ತರ ಕುಟುಂಬ ವರ್ಗದವರು ಉಪಸ್ಥಿತರಿದ್ದರು.

ಸಹಾಯ ಧನಕ್ಕಾಗಿ ಅರ್ಜಿ ಆಹ್ವಾನ

ಮೈಸೂರು: ಮೀನುಗಾರಿಕೆ ಇಲಾಖೆ 2024–25ನೇ ಸಾಲಿನ ಕೇಂದ್ರ ಪುರಸ್ಕೃತ ಪ್ರಧಾನಮಂತ್ರಿ ಮತ್ಸ್ಯ ಸಂಪದ ಯೋಜನೆಯಡಿ ಮೀನುಮರಿ ಪಾಲನಾ ಕೊಳಗಳ ನಿರ್ಮಾಣ (1.00 ಹೆಕ್ಟೇರ್) ಯೋಜನೆಯಡಿ ಆಸಕ್ತಿ ಹೊಂದಿರುವ ಫಲಾನುಭವಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಸಾಮಾನ್ಯ ವರ್ಗದ ಫಲಾನುಭವಿಗಳಿಗೆ ಘಟಕ ವೆಚ್ಚದ ಶೇ. 40ರಷ್ಟು ಸಹಾಯಧನ ಮತ್ತು ಪ.ಜಾತಿ/ಪಂಗಡ ಹಾಗೂ ಮಹಿಳಾ ಫಲಾನುಭವಿಗಳಿಗೆ ಘಟಕ ವೆಚ್ಚದ ಶೇ.60ರಷ್ಟು ಸಹಾಯಧನ ನೀಡಲಾಗುವುದು. ಅರ್ಜಿಯನ್ನು ಸಂಬಂಧಿಸಿದ ತಾಲೂಕು ಮಟ್ಟದ ಮೀನುಗಾರಿಕೆ ಸಹಾಯಕ ನಿರ್ದೇಶಕರ ಕಚೇರಿಗಳಿಂದ ಪಡೆದು ಎಲ್ಲಾ ಅಗತ್ಯ ದಾಖಲಾತಿಗಳೊಂದಿಗೆ ಆ.15ರೊಳಗೆ ಕಚೇರಿ ವೇಳೆ ಸಂಬಂಧಪಟ್ಟ ತಾಲೂಕು ಮಟ್ಟದ ಮೀನುಗಾರಿಕೆ ಸಹಾಯಕ ನಿರ್ದೇಶಕರ ಕಛೇರಿಗೆ ಸಲ್ಲಿಸಬಹುದಾಗಿದೆ ಹಾಗೂ ಹಿಂದಿನ ಸಾಲಿನಲ್ಲಿ ಮೇಲ್ಕಂಡ ಘಟಕಗಳಿಗೆ ಈಗಾಗಲೇ ಇಲಾಖೆಗೆ ಅರ್ಜಿ ಸಲ್ಲಿಸಿರುವ ಫಲಾನುಭವಿಗಳು ಆಸಕ್ತಿ ಇದ್ದಲ್ಲಿ ಪುನಃ ಅರ್ಜಿಗಳನ್ನು ಸಲ್ಲಿಸಬಹುದಾಗಿದೆ.

ಸೇತುವೆ ಕುಸಿದು ನಾಲೆಗೆ ಬಿದ್ದ ಭತ್ತ ತುಂಬಿದ್ದ ಲಾರಿ

ಸರಗೂರು, ಆ.3– ಬಲದಂಡೆ ನಾಲೆ ಸೇತುವೆ ಕುಸಿದು ಬಿದ್ದ ಪರಿಣಾಮ ಭತ್ತ ತುಂಬಿದ್ದ ಲಾರಿ ನಾಲೆಗೆ ಬಿದ್ದಿರುವ ಘಟನೆ ತಾಲೂಕಿನ ಶ್ರೀಚಿಕ್ಕದೇವಮ್ಮನ ಬೆಟ್ಟಕ್ಕೆ ಸಂಪರ್ಕ ಕಲ್ಪಿಸುವ ಹಾಲುಗಡ ಗಣೇಶನ ಗುಡಿ ಬಳಿ ಭಾನುವಾರ ರಾತ್ರಿ ನಡೆದಿದೆ.

ತಮಿಳುನಾಡಿಗೆ ಭತ್ತ ತುಂಬಿಕೊಂಡು ಹೋಗುತ್ತಿದ್ದ (ಟಿಎನ್.52, 8333) ಲಾರಿ ಕುಸಿದು ಬಿದ್ದಿದ್ದು, ಅದೃಷ್ಟವಶಾತ್ ಯಾವುದೇ ಪ್ರಾಣಾಪಾಯ ಸಂಭವಿಸಿಲ್ಲ ಎನ್ನಲಾಗಿದೆ. ಭಾನುವಾರ ರಾತ್ರಿ ಭತ್ತ ತುಂಬಿಕೊಂಡು ಹೋಗುತ್ತಿದ್ದ ಲಾರಿ ಸೇತುವೆ ಸೇತುವೆ ಕುಸಿದು ನಾಲೆಗೆ ಬಿದ್ದಿದೆ. ಈ ಸೇತುವೆ ದುರಸ್ತಿ ಪಡಿಸುವಂತೆ ಅಧಿಕಾರಿಗಳಿಗೆ ಸಾಕಷ್ಟು ಬಾರಿ ಮನವಿ ಸಲ್ಲಿಸಿದರೂ ಯಾವುದೇ ಪ್ರಯೋಜನವಾಗಿಲ್ಲ ಎಂದು ಸ್ಥಳೀಯರು ಆರೋಪಿಸಿದ್ದಾರೆ. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಸರಗೂರು ಠಾಣೆ ಎಸ್‌ಐ ಕಿರಣ್ ಕುಮಾರ್ ಹಾಗೂ ಪರಿಶೀಲನೆ ನಡೆಸಿದರು.


ಸೇತುವೆ ಕುಸಿದು ನಾಲೆಗೆ ಲಾರಿ ಬಿದ್ದಿರುವುದು.

ರಾಜ್ಯ ಮಟ್ಟದ ರೈಫಲ್ ಶೂಟಿಂಗ್ ಸ್ಪರ್ಧೆ

ವೈದ್ಯ ರಾಜೇಂದ್ರಪ್ರಸಾದ್‌ಗೆ ಪ್ರಥಮ ಬಹುಮಾನ

ತಿ.ನರಸೀಪುರ, ಆ.3– ರಾಜ್ಯ ಮಟ್ಟದ ರೈಫಲ್ ಶೂಟಿಂಗ್ ಸ್ಪರ್ಧೆಯಲ್ಲಿ ತಾಲೂಕಿನ ಬನ್ನೂರು ಪಟ್ಟಣದ ವೈದ್ಯ ಡಾ.ವೈ.ಟಿ.ರಾಜೇಂದ್ರಪ್ರಸಾದ್ ಪ್ರಥಮ ಬಹುಮಾನ ಪಡೆದಿದ್ದಾರೆ.

ಬೆಂಗಳೂರಿನಲ್ಲಿ ಕರ್ನಾಟಕ ಸ್ಟೇಟ್ ರೈಫಲ್ ಅಸೋಸಿಯೇಷನ್ ವತಿಯಿಂದ ಜು.1 ರಿಂದ 21ರವರೆಗೆ ಆಯೋಜಿಸಿದ್ದ ರಾಜ್ಯ ಮಟ್ಟದ ಶೂಟಿಂಗ್ ಸ್ಪರ್ಧೆಯಲ್ಲಿ ಪುರುಷರ ಓಪನ್ ಸೈಟ್‌ನ ಮಾಸ್ಟರ್ಸ್ ವಿಭಾಗದಲ್ಲಿ ಸ್ಪರ್ಧಿಸಿದ್ದ ಡಾ.ವೈ.ಟಿ.ರಾಜೇಂದ್ರಪ್ರಸಾದ್ ಪ್ರಥಮ ಸ್ಥಾನ ಪಡೆದರು.


ವೈದ್ಯ ಡಾ.ವೈ.ಟಿ.ರಾಜೇಂದ್ರ ಪ್ರಸಾದ್ ಪ್ರಥಮ ಬಹುಮಾನ ಪಡೆದರು.

ರಾಜ್ಯಮಟ್ಟದ ಈಜು ಸ್ಪರ್ಧೆ ಹಾಗೂ ಗಾಯನ ಸ್ಪರ್ಧೆಗಳಲ್ಲಿ ಪ್ರಶಸ್ತಿಗಳನ್ನು ಗೆದ್ದಿರುವ ಡಾ.ವೈ.ಟಿ.ರಾಜೇಂದ್ರಪ್ರಸಾದ್ ಅವರು ಮೂಲತಃ ಮಂಡ್ಯದವರಾಗಿದ್ದು, ಕಳೆದ ಒಂದೂವರೆ ದಶಕದಿಂದ ಬನ್ನೂರು ಪಟ್ಟಣದಲ್ಲಿ ವೈದ್ಯರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಕರ್ನಾಟಕ ಸ್ಟೇಟ್ ರೈಫಲ್ ಅಸೋಸಿಯೇಷನ್ ಪ್ರತಿ ವರ್ಷವೂ ನಡೆಸುವ ರಾಜ್ಯ ಮಟ್ಟದ ಶೂಟಿಂಗ್ ಸ್ಪರ್ಧೆಯಲ್ಲಿ ಸತತವಾಗಿ ಭಾಗವಹಿಸುತ್ತಿದ್ದ ವೈದ್ಯರು ಈ ಬಾರಿ ಪ್ರಥಮ ಬಹುಮಾನ ಪಡೆದುಕೊಂಡು ಎಲ್ಲರ ಮೆಚ್ಚುಗೆಗೆ ಪಾತ್ರರಾಗಿದ್ದಾರೆ.

ರಸ್ತೆ ನಿರ್ಮಾಣ ಕಾಮಗಾರಿಗೆ ಭೂಮಿ ಪೂಜೆ

ಕಂಪಲಾಪುರ, ಆ.3– ಹಲವು ವರ್ಷಗಳಿಂದ ಪಿರಿಯಾಪಟ್ಟಣ ತಾಲೂಕಿನ ಶಾಸಕನಾಗಿ, ಸಚಿವನಾಗಿ ಸಾಕಷ್ಟು ಅಭಿವೃದ್ಧಿ ಕಾರ್ಯ ಮಾಡಿದ್ದು, ಇನ್ನು 3 ವರ್ಷ ಅಧಿಕಾರದಲ್ಲಿರುತ್ತೇನೆ. ಹೀಗಾಗಿ ಬಾಕಿ ಉಳಿದಿರುವ ಕಾಮಗಾರಿಗಳನ್ನು ಪೂರ್ಣಗೊಳಿಸುತ್ತೇನೆ ಎಂದು ಪಶುಸಂಗೋಪನೆ ಮತ್ತು ರೇಷ್ಮೆ ಸಚಿವ ಕೆ.ವೆಂಕಟೇಶ್ ತಿಳಿಸಿದರು.

ಗ್ರಾಮದಲ್ಲಿ ಅಂದಾಜು 85 ಲಕ್ಷ ರೂ. ವೆಚ್ಚದಲ್ಲಿ ಅಂಬೇಡ್ಕರ್ ಬಡಾವಣೆ, ಜನತಾ ಬಡಾವಣೆ, ಚೌಡೇಶ್ವರಿ ಬೀದಿಯ ರಸ್ತೆ ನಿರ್ಮಾಣ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿ ಅವರು ಮಾತನಾಡಿದರು.

ಗ್ರಾಮಸ್ಥರ ಹಲವು ದಿನಗಳ ಬೇಡಿಕೆಯಂತೆ ದೊಡ್ಡಮ್ಮ ತಾಯಿ ದೇವಸ್ಥಾನದ ರಸ್ತೆ, ಹೈಮಾಸ್ಟ್ ದೀಪ, ಅಂಬೇಡ್ಕರ್ ಭವನ ನಿರ್ಮಾಣ ಎಲ್ಲವನ್ನೂ ಪೂರ್ಣಗೊಳಿಸಲು ಸ್ಥಳದಲ್ಲಿದ್ದ ಅಧಿಕಾರಿಗಳಿಗೆ ಸೂಚಿಸಿದರು.

ಜಾತಿ ಆಧಾರದ ಮೇಲೆ ಸ್ಮಶಾನ ಕೊಡಲ್ಲ: ನಾಯಕ ಸಮುದಾಯದ ವ್ಯಕ್ತಿಯೋರ್ವ ನಮ್ಮ ಜನಾಂಗಕ್ಕೆ ಸ್ಮಶಾನವಿಲ್ಲ. ಸುಂಡೆಕೆರೆ ಪಕ್ಕದಲ್ಲಿ 2 ಎಕರೆ ಸರ್ಕಾರಿ ಜಾಗವಿದೆ. ಅಲ್ಲಿ ಸ್ಮಶಾನಕ್ಕೆ ದಯಮಾಡಿ ಅನುಕೂಲ ಮಾಡಿಕೊಡಿ ಎಂದು ಸಚಿವರಿಗೆ ಮನವಿ ಸಲ್ಲಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಸಚಿವರು ನಾನು ಜಾತಿ ಆಧಾರದ ಮೇಲೆ ಸ್ಮಶಾನ ನೀಡುತ್ತಿಲ್ಲ. ಅದು ಎಲ್ಲಾ ಸಮುದಾಯದವರಿಗೆ ಸೇರಿದ್ದು, ಶೀಘ್ರ ನಿಮ್ಮ ಸಮಸ್ಯೆ ಪರಿಹರಿಸುತ್ತೇನೆ ಎಂದು ತಿಳಿಸಿ ಸ್ಥಳದಲ್ಲಿದ್ದ ಉಪ ತಹಸೀಲ್ದಾರ್ ಶುಭಾ ಹಾಗೂ ಗ್ರಾಮ ಲೆಕ್ಕಿಗ ದರ್ಶನ್ ಅವರನ್ನು ಕರೆದು ಆ ಜಾಗವನ್ನು ಸರ್ವೆ ಮಾಡಿ ಸಾರ್ವಜನಿಕರಿಗೆ ಅನುಕೂಲಕ್ಕೆ ಅವಕಾಶ ಮಾಡಿಕೊಡಿ ಎಂದರು.


ಅಭಿವೃದ್ಧಿ ಕಾಮಗಾರಿಗೆ ಸಚಿವ ಕೆ.ವೆಂಕಟೇಶ್ ಚಾಲನೆ ನೀಡಿದರು.

ಹೊಸದಾಗಿ ಪಿಯು ಕಾಲೇಜಿಗೆ ಸರ್ಕಾರ ಅನುಮತಿ ನೀಡುತ್ತಿಲ್ಲ. ಕೊಟ್ಟರೆ ನಿಮ್ಮೂರಿಗೆ ಪಿಯು ಕಾಲೇಜು ಮಂಜೂರು ಮಾಡಿಸಿಕೊಡುತ್ತೇನೆ ಎಂದರು.

ಈ ವೇಳೆ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಡಿ.ಟಿ.ಸ್ವಾಮಿ, ತಾಲೂಕು ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ನಿತಿನ್ ವೆಂಕಟೇಶ್, ಯಜಮಾನ್ ಸ್ವಾಮಿಗೌಡ, ಪ್ರಕಾಶ್ ಗೌಡ, ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷ ಹೊಲದಪ್ಪ, ಎಇಇ ವೆಂಕಟೇಶ್, ಮಲ್ಲಿಕಾರ್ಜುನ್, ಸಿಡಿಪಿಒ ವೀಣಾ, ಆರ್‌ಎಫ್‌ಓ ಪದ್ಮಶ್ರೀ, ಎಡಿಎಲ್ ಆರ್. ಮುನಿಯಪ್ಪ, ಲ್ಯಾಂಡ್ ಆರ್ಮಿ ಸುಗಂಧರಾಜ್, ನಿರ್ಮಿತಿ ಕೇಂದ್ರದ ಲವ, ಸಮಾಜ ಕಲ್ಯಾಣ ಇಲಾಖೆಯ ಚಂದ್ರಶೇಖರ್, ಚೆಸ್ಕಾಂ ಜೆಇ ಚಂದ್ರಶೇಖರ್, ಶಿಕ್ಷಣ ಇಲಾಖೆಯ ಪ್ರಶಾಂತ್, ವಿ.ಜಿ.ಕೊಪ್ಪಲು ಲೋಕೇಶ್, ಡಿಸಿಸಿ ಬ್ಯಾಂಕ್ ನಿರ್ದೇಶಕ ಲೋಕೇಶ್, ಎಂ.ರಮೇಶ್, ಕೆ.ಪಿ.ನಿಂಗರಾಜ್, ಕೆ.ಪಿ.ನಾರಾಯಣ, ಹೆಚ್.ಆರ್.ಗೋಪಾಲ್, ಗ್ರಾಪಂ ಅಧ್ಯಕ್ಷ ಸಣ್ಣತಮ್ಮಯ್ಯ, ಉಪಾಧ್ಯಕ್ಷೆ ಸುಮ ಶಿವು, ಪಿಡಿಓ ಪರಮೇಶ್, ಸುಷ್ಮ, ಸುಮಿತ್ರಾ, ಗ್ರಾಪಂ ಸದಸ್ಯರಾದ ರಾಮಲಿಂಗ, ಚಂದ್ರು, ಮಂಜು, ಸೋಮು, ರವಿ, ಶ್ರೀಪತಿ, ರಾಣಿ, ಮಮತ, ಶೀಲಾ, ಜಾನಕಿ ಸೇರಿದಂತೆ ಗ್ರಾಪಂ ಸಿಬ್ಬಂದಿ ಹಾಗೂ ಗ್ರಾಮಸ್ಥರು ಹಾಜರಿದ್ದರು.

ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ತಿ.ನರಸೀಪುರ, ಆ.3– ತಾಲೂಕು ಕುರುಬರ ಸಂಘದಿಂದ ಪ್ರಸಕ್ತ ಸಾಲಿನ ಎಸ್‌ಎಸ್‌ಎಲ್‌ಸಿ ಹಾಗೂ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಶೇ.90ಕ್ಕಿಂತ ಹೆಚ್ಚು ಅಂಕ ಪಡೆದ ಕುರುಬ ಸಮುದಾಯದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲಾಗುತ್ತಿದ್ದು, ಅರ್ಹ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಅರ್ಹ ಅಭ್ಯರ್ಥಿಗಳು ಅರ್ಜಿಯೊಂದಿಗೆ 2 ಭಾವಚಿತ್ರ, ಅಂಕಪಟ್ಟಿ, ಜಾತಿ ದೃಢೀಕರಣ ಪತ್ರದೊಂದಿಗೆ ಆ.10ರೊಳಗೆ ಅರ್ಜಿ ಸಲ್ಲಿಸಲು ಕೋರಲಾಗಿದೆ. ಸಂಗೊಳ್ಳಿ ರಾಯಣ್ಣ ಜಯಂತಿ ಹಾಗೂ ಸ್ವಾತಂತ್ರ್ಯ ದಿನಾಚರಣೆ ಪ್ರಯುಕ್ತ ಆ.15 ರಂದು ಪಟ್ಟಣದ ತಾಲೂಕು ಕುರುಬರ ಸಂಘದ ಆವರಣದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಪ್ರತಿಭಾವಂತರನ್ನು ಪುರಸ್ಕರಿಸಲಾಗುವುದು. ಹೆಚ್ಚಿನ ಮಾಹಿತಿಗೆ ಸಂಘದ ಅಧ್ಯಕ್ಷ ಮಹೇಶ್ 8453771223 ಹಾಗೂ ಪ್ರಧಾನ ಕಾರ್ಯದರ್ಶಿ ಬಸವರಾಜು 7760031209 ಅವರನ್ನು ಸಂಪರ್ಕಿಸಬಹುದು.

ಸುಬ್ಬಮ್ಮ ನಿಧನ



ನಂಜನಗೂಡು, ಆ.3– ತಾಲೂಕಿನ ದೇವರಸನಹಳ್ಳಿ ಗ್ರಾಮದ ಸುಬ್ಬಮ್ಮ(83) ಭಾನುವಾರ ನಿಧನರಾದರು. ಮೃತರು ಮೊಮ್ಮಗ ಸಂತೋಷ್ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸೋಮವಾರ ಮಧ್ಯಾಹ್ನ ಸ್ವಗ್ರಾಮದಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಮಿತ್ರ

ಸೋಮವಾರ 4 ಆಗಸ್ಟ್ 2025

ದಸರಾ ಗಜಪಡೆಗೆ ಹೊಸ ಆನೆಗಳಾದ ರೂಪ, ಹೇಮಾವತಿ ಸೇರ್ಪಡೆ

●ಮದವೇರಿದ ಹರ್ಷ ಗಜಪಡೆಯಿಂದ ಔಟ್, ಶ್ರೀಕಂಠ ಇನ್ ಸಾಧ್ಯತೆ ●ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಸ್ಮರಣಾರ್ಥ ಶ್ರೀಕಂಠ ಆನೆಗೆ ನಾಮಕರಣ ●ಸಕ್ರೆಬೈಲು ಕ್ಯಾಂಪ್‌ನಿಂದ ದುಬಾರೆ ಕ್ಯಾಂಪ್‌ಗೆ ಬಂದ ಹೇಮಾವತಿಗೆ ಒಲಿದ ಸ್ಥಾನ

ಎಂ.ಟಿ.ಯೋಗೇಶ್ ಕುಮಾರ್

ಮೈಸೂರು,ಆ.3 – ನಾಡಹಬ್ಬ ದಸರಾ ಮಹೋತ್ಸವದಲ್ಲಿ ಪಾಲ್ಗೊಳ್ಳಲಿರುವ ಕ್ಯಾಪ್ಟನ್ ಅಭಿಮನ್ಯು ನೇತೃತ್ವದ ಗಜಪಡೆಯಲ್ಲಿ ಈ ಬಾರಿ ಎರಡು ಹೊಸ ಹೆಣ್ಣಾನೆಗಳಾದ ರೂಪ ಮತ್ತು ಹೇಮಾವತಿ ಸ್ಥಾನಗಿಟ್ಟಿಸಿಕೊಂಡಿದ್ದರೆ, ಕೊನೆ ಕ್ಷಣದಲ್ಲಿ ಮದದ ಲಕ್ಷಣ ಕಂಡು ಬಂದ ಹಿನ್ನೆಲೆಯಲ್ಲಿ ಹರ್ಷ ಆನೆ ಗಜಪಡೆಯಿಂದ ಹೊರಗೆ ಉಳಿಯುವ ಸಾಧ್ಯತೆ ಇದ್ದು, ಅದರ ಬದಲಾಗಿ ಶ್ರೀಕಂಠ ಆನೆಯನ್ನು ಕರೆತರಲು ನಿರ್ಧರಿಸಲಾಗಿದೆ.



ಭೀಮನಕಟ್ಟೆಯ ರೂಪ.



ದುಬಾರೆಯ ಹೇಮಾವತಿ



ಮತ್ತಿಗೋಡು ಕ್ಯಾಂಪ್‌ನ ಶ್ರೀಕಂಠ

ಈ ಸಾಲಿನ ದಸರಾ ಗಜಪಡೆಯಲ್ಲಿ ಎಂದಿನಂತೆ 14 ಆನೆಗಳು ಪಾಲ್ಗೊಳ್ಳಲಿದ್ದು, 10 ಗಂಡಾನೆ ಹಾಗೂ 4 ಹೆಣ್ಣಾನೆ ಒಳಗೊಂಡ ತಂಡವನ್ನು ಆಯ್ಕೆ ಮಾಡಲಾಗಿತ್ತು. ಮೊದಲ ತಂಡದಲ್ಲಿ 9, ಎರಡನೇ ತಂಡದಲ್ಲಿ 5 ಆನೆ ಕರೆತರಲು ನಿರ್ಧರಿಸಲಾಗಿತ್ತು. ಮೊದಲ ತಂಡದ 9 ಆನೆಗಳ ಪಟ್ಟಿ ಈಗಾಗಲೇ ಬಿಡುಗಡೆ ಮಾಡಲಾಗಿತ್ತು. ಎರಡನೇ ತಂಡದ ಆನೆಗಳ ಪಟ್ಟಿ ಗಜಪಯಣದ ದಿನವಾದ ಆ.4ರಂದು ಬಿಡುಗಡೆ ಮಾಡಲಾಗುತ್ತದೆ. ಎರಡನೇ ತಂಡದಲ್ಲಿ ಭೀಮನಕಟ್ಟೆ ಶಿಬಿರದ ರೂಪ(49) ಹಾಗೂ ದುಬಾರೆ ಕ್ಯಾಂಪ್‌ನ ಹೇಮಾವತಿ(11) ಆನೆ ಮೈಸೂರಿಗೆ ಆಗಮಿಸಲಿವೆ. ಈ ಎರಡೂ ಹೆಣ್ಣಾನೆಗಳು ಇದೇ ಮೊದಲ ಬಾರಿಗೆ ದಸರಾ ಮಹೋತ್ಸವದಲ್ಲಿ ಪಾಲ್ಗೊಳ್ಳುತ್ತಿವೆ.

ಉಳಿದಂತೆ ಎರಡನೇ ತಂಡದಲ್ಲಿ ದುಬಾರೆಯಿಂದ ಸುಗ್ರೀವ್, ಗೋಪಿ, ಹರ್ಷ ಗಂಡಾನೆಗಳು ಆಯ್ಕೆ ಮಾಡಲಾಗಿತ್ತು. ಆದರೆ, ಹರ್ಷ ಆನೆಗೆ ಮದದ ಲಕ್ಷಣ ಎರಡು ದಿನದಿಂದ ಗೋಚರಿಸಲಾರಂಭಿಸಿದ್ದು, ಇದೀಗ ಅರಣ್ಯ ಇಲಾಖೆ ಅಧಿಕಾರಿಗಳಿಗೆ ತಲೆ ನೋವಾಗಿ ಪರಿಣಮಿಸಿದೆ. ಈ ಹಿಂದೆ ಪರಿಶೀಲನೆ ಮಾಡಿ ಕಾಯ್ದಿರಿಸಲಾಗಿದ್ದ(ಸ್ಟ್ಯಾಂಡ್ ಬೈ) ಮತ್ತಿಗೋಡು ಶಿಬಿರದ ಶ್ರೀಕಂಠ ಆನೆಗೆ ಅದೃಷ್ಟ ಒಲಿಯುವ ಸಾಧ್ಯತೆ ಬಹುತೇಕ ಹೆಚ್ಚಾಗಿದೆ. ಹರ್ಷ ಆನೆಗೆ ಮದ ಇಲ್ಲದೇ ಇದ್ದರೆ ಆ ಆನೆ ಈ ಬಾರಿಯೂ ಜಂಬೂಸವಾರಿ ಮೆರವಣಿಗೆಯಲ್ಲಿ ಹೆಜ್ಜೆ ಹಾಕುತ್ತಿತ್ತು. ಆದರೆ, ಅರಮನೆಗೆ ಕರೆತಂದ ನಂತರ ಪೌಷ್ಟಿಕ ಆಹಾರ ಸೇವಿಸಿದ ನಂತರ ಮದ ಹೆಚ್ಚಾಗುವ ಸಾಧ್ಯತೆ ಇದೆ ಎಂದು ತಜ್ಞರು ಅಭಿಪ್ರಾಯಪಟ್ಟಿರುವುದರಿಂದ ಕೊನೆ ಗಳಿಗೆಯಲ್ಲಿ ಹರ್ಷ ಆನೆ ಗಜಪಡೆಯಿಂದ ಹೊರಗುಳಿಯುವುದು ಖಚಿತವಾಗುತ್ತಿದೆ.

ಅದಕ್ಕೆ ಬದಲಾಗಿ 2014ರ ಫೆ.18ರಂದು ಹಾಸನ ವಿಭಾಗದ ಶನಿವಾರ ಸಂತೆ ವಲಯದ ಮೀಸಲು ಅರಣ್ಯ ಪ್ರದೇಶದಲ್ಲಿ ಸೆರೆ ಹಿಡಿದ ಆನೆಗೆ ರಾಜವಂಶಸ್ಥ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಸ್ಮರಣಾರ್ಥ ಶ್ರೀಕಂಠ ಎಂದು ನಾಮಕರಣ ಮಾಡಲಾಗಿದ್ದು, ಮತ್ತಿಗೋಡು ಶಿಬಿರದಲ್ಲಿ ಪಾಲನೆ ಮಾಡಲಾಗುತ್ತಿದೆ. ಈಗಾಗಲೇ ಹುಲಿ, ಕಾಡಾನೆ ಸೆರೆ ಕಾರ್ಯಾಚರಣೆಯಲ್ಲಿ ದೈರ್ಯದಿಂದ ಪಾಲ್ಗೊಂಡಿರುವ ಅನುಭವ ಹೊಂದಿರುವ ಶ್ರೀಕಂಠ ಆನೆ ನೋಡಲು ಸಧೃಡವಾಗಿದೆ. 2.79 ಮೀಟರ್ ಎತ್ತರ, 3.71 ಮೀಟರ್ ಉದ್ದ, 4,650 ಕೆಜಿ ತೂಕ ಹೊಂದಿರುವ ಶ್ರೀಕಂಠ ಆನೆಗೆ ಮಾವುತರಾಗಿ ಓಂಕಾರ್ ಕೆ., ಜೆ.ಆರ್.ರಾಧಾಕೃಷ್ಣ ಪಾಲನೆ ಮಾಡುತ್ತಿದ್ದಾರೆ.

ಕಿರಿಯ ಆನೆ ಹೇಮಾವತಿ: ದಸರಾ ಗಜಪಡೆಯ 14 ಆನೆಗಳಲ್ಲಿ ದುಬಾರೆ ಶಿಬಿರದ ಹೇಮಾವತಿ ಆನೆ ಅತಿ ಕಿರಿಯ ಆನೆ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. 3 ವರ್ಷದ ಹಿಂದೆ ಸಕ್ರೆಬೈಲು ಕ್ಯಾಂಪ್‌ನಿಂದ ದುಬಾರೆ ಕ್ಯಾಂಪ್‌ಗೆ ತಂದು ಪಾಲನೆ ಮಾಡುತ್ತಿರುವ ಹೇಮಾವತಿ ಎಲ್ಲರ ಮುದ್ದಿನ ಆನೆಯಾಗಿದೆ. ದಸರಾ ಗಜಪಡೆಗೆ ಹೆಣ್ಣಾನೆಗಳ ಆಯ್ಕೆಯೇ ಅರಣ್ಯ ಇಲಾಖೆಗೆ ದೊಡ್ಡ ಸವಾಲಾಗಿದ್ದು, ಕ್ಯಾಂಪ್ ಆನೆಗಳು ನಾಲ್ಕು ವರ್ಷಕ್ಕೊಮ್ಮೆ ಮರಿಗೆ ಜನ್ಮ ನೀಡುವುದರಿಂದ ಬಹುತೇಕ ಎಲ್ಲಾ ಹೆಣ್ಣಾನೆಗಳು ಗರ್ಭಿಣಿ ಅಥವಾ ಚಿಕ್ಕ ಮರಿಗಳನ್ನು ಹೊಂದಿವೆ. ಈ ಹಿನ್ನೆಲೆಯಲ್ಲಿ ಈ ಬಾರಿ 11 ವರ್ಷ ಹೇಮಾವತಿ ಆನೆಯನ್ನು ದಸರಾ ಗಜಪಡೆಗೆ ಸೇರಿಸಿ ತರಬೇತಿ ನೀಡಲು ನಿರ್ಧರಿಸಲಾಗಿದೆ. ಈ ಹಿಂದೆ ಬಂಡೀಪುರದದ ಲಕ್ಷ್ಮೀ ಆನೆ 17 ವರ್ಷ ವಯಸ್ಸಿನಲ್ಲಿ ದಸರಾ ಮಹೋತ್ಸವದಲ್ಲಿ ಪಾಲ್ಗೊಂಡಿದ್ದ ಹಿರಿಮೆ ಹೊಂದಿತ್ತು.

ಭೀಮನಕಟ್ಟೆ ರೂಪ: ಪ್ರಸ್ತುತ ಭೀಮನಕಟ್ಟೆ ಕ್ಯಾಂಪ್‌ನಲ್ಲಿರುವ ರೂಪ(49) ಆನೆ ದಸರಾ ಮಹೋತ್ಸವದಲ್ಲಿ ಮೊದಲ ಬಾರಿಗೆ ಪಾಲ್ಗೊಳ್ಳಲುತ್ತಿದೆ. 2015ರಲ್ಲಿ ಜೆಮಿನಿ ಸರ್ಕಸ್‌ನಿಂದ ರಕ್ಷಣೆ ಮಾಡಿದ ಆನೆಗಳಲ್ಲಿ ರೂಪ ಆನೆಯೂ ಒಂದಾಗಿದ್ದು, ಕೆಲ ವರ್ಷಗಳ ಹಿಂದೆ ದೊಡ್ಡ ಹರವೆ ಕ್ಯಾಂಪ್‌ನಲ್ಲಿ ಆಶ್ರಯ ಪಡೆದಿತ್ತು. ಪ್ರಸ್ತುತ ಭೀಮನಕಟ್ಟೆ ಕ್ಯಾಂಪ್‌ನಲ್ಲಿದ್ದು, ಈ ಬಾರಿ ದಸರಾ ಮಹೋತ್ಸವದಲ್ಲಿ ಪಾಲ್ಗೊಳ್ಳುತ್ತಿದೆ. ರೂಪಳ ಜೊತೆಗಾರ್ತಿ ಬಳ್ಳಿಯ (ದೊಡ್ಡ ಹರವೆ) ಲಕ್ಷ್ಮೀ ಕಳೆದ ಮೂರು ವರ್ಷದಿಂದ ದಸರಾ ಮಹೋತ್ಸವದಲ್ಲಿ ಪಾಲ್ಗೊಳ್ಳುತ್ತಿದೆ.

ಸೇವಾಯಾನ ಸಂಸ್ಥೆಯಿಂದ ಉಚಿತ ಹೊಲಿಗೆ ತರಬೇತಿ



ಮೈಸೂರು, ಆ.3– ಮೈಸೂರಿನ ವಿಜಯನಗರ ನಾಲ್ಕನೆಯ ಹಂತದಲ್ಲಿರುವ ಸೇವಾಯಾನ ಟ್ರಸ್ಟ್‌ನ ವತಿಯಿಂದ ಹಿರಿಯ ಮಹಿಳೆಯರಿಗೆ ಉಚಿತ ವೃದ್ಧಾಶ್ರಮವನ್ನು ನಡೆಸುತ್ತಿದ್ದು, ಪ್ರಸ್ತುತ 32 ಮಂದಿ ವೃದ್ಧ ಮಹಿಳೆಯರು ಇಲ್ಲಿ ಆಶ್ರಯ ಪಡೆದಿದ್ದಾರೆ. ಮಹಿಳಾ ಸಬಲೀಕರಣದ ಉದ್ದೇಶದಿಂದ ಮಹಿಳೆಯರಿಗಾಗಿ ಉಚಿತವಾಗಿ ತರಬೇತಿಗಳನ್ನು ನಡೆಸುತ್ತಾ ಬಂದಿದ್ದು, ಇದೀಗ ಉಚಿತವಾಗಿ ನಾಲ್ಕನೆಯ ತಂಡದ ಟೈಲರಿಂಗ್ ತರಬೇತಿಯನ್ನು ಪ್ರಾರಂಭಿಸಲಾಗಿದೆ. ಆರ್ಥಿಕವಾಗಿ ಹಿಂದುಳಿದಿರುವ ಇಪ್ಪತ್ತೈದು ಹೆಣ್ಣುಮಕ್ಕಳು ಈ ತರಬೇತಿಯನ್ನು ಪಡೆಯಲು ಸನ್ನದ್ಧರಾಗಿದ್ದಾರೆ.

ಟೈಲರಿಂಗ್ ತರಬೇತಿ ಕಾರ್ಯಕ್ರಮವನ್ನು ಮರಿಮಲ್ಲಪ್ಪ ಶಿಕ್ಷಣ ಸಂಸ್ಥೆಯ ಶ್ರೀಮತಿ ಮಂಗಳ ಮುದ್ದುಮಾದಪ್ಪನವರು ಗಿಡಕ್ಕೆ ನೀರು ಹಾಕುವ ಮೂಲಕ ಚಾಲನೆಗೊಳಿಸಿದರು. ಈ ಸಂದರ್ಭದಲ್ಲಿ ಮಾತನಾಡಿದ ಅವರು, ಹೆಣ್ಣೊಂದು ಕಲಿತರೆ ಶಾಲೆಯೊಂದು ತೆರೆದಂತೆ. ಹೆಣ್ಣೊಂದು ದುಡಿದರೆ ಕುಟುಂಬವು ಅಭಿವೃದ್ಧಿಯಾದಂತೆ. ಈ ನಿಟ್ಟಿನಲ್ಲಿ ನಾನಾ ರೀತಿಯ ತರಬೇತಿಗಳನ್ನು ಪಡೆದ ಮಹಿಳೆ ಆರ್ಥಿಕವಾಗಿ ಸದೃಢಳಾಗಲು ಸಾಧ್ಯವಾಗುತ್ತದೆ. ಹಾಗೂ ಇದು ಆಕೆಯ ಆತ್ಮಸ್ಥೈರ್ಯವನ್ನು ಹೆಚ್ಚಿಸುತ್ತದೆ. ಈ ಮೂಲಕ ಇಪ್ಪತ್ತೈದು ಕುಟುಂಬಗಳ ಜೀವನಮಟ್ಟ ಸುಧಾರಿಸುತ್ತದೆ. ಹೀಗಾಗಿ ಎಲ್ಲರೂ ಈ ತರಬೇತಿಯ ಸದುಪಯೋಗ ಪಡೆದುಕೊಳ್ಳಿ ಎಂದು ಹೆಣ್ಣುಮಕ್ಕಳಿಗೆ ಸಲಹೆ ನೀಡುವ ಮೂಲಕ ತರಬೇತಿಗೆ ಶುಭ ಹಾರೈಸಿದರು.

ಶರಣ ಸಾಹಿತ್ಯ ಪರಿಷತ್ತಿನ ಚೆನ್ನಬಸಪ್ಪ, ಸೇವಾಯಾನ ಸಂಸ್ಥೆಯ ಮುಖ್ಯಸ್ಥೆ ಪ್ರಭಾಮಣಿ.ಎಸ್, ತರಬೇತಿ ಘಟಕದ ಮುಖ್ಯಸ್ಥ ಕೆ.ಎಂ.ಪ್ರಭುಶಂಕರ್, ಸಂಯೋಜಕಿ ಜಾಹ್ನವಿ, ಪ್ರಶಿಕ್ಷಣಾರ್ಥಿಗಳು ಹಾಗೂ ಸೇವಾಯಾನ ಸಂಸ್ಥೆಯ ಕಾರ್ಯಕರ್ತರು ಹಾಜರಿದ್ದರು.

ತುರ್ತು ಸಂದರ್ಭದಲ್ಲಷ್ಟೇ ಕೆಎಸ್‌ಆರ್‌ಪಿ ತುಕಡಿಗಳ ನಿಯೋಜನೆ

●ರಾಜ್ಯ ಪೊಲೀಸ್ ಮಹಾನಿರ್ದೇಶಕ ಡಾ.ಸಲೀಂ ಮಾಹಿತಿ ●ನಿಯೋಜನೆಗೆ ಮುನ್ನ ಸಂಬಂಧಪಟ್ಟ ಪೊಲೀಸ್ ಅಧಿಕಾರಿಗಳ ಕೂಲಂಕುಷ ಪರಿಶೀಲನೆ ಅವಶ್ಯ



ಮೈಸೂರು,ಆ.3(ಎಸ್‌ಪಿಎನ್)– ಸಾರ್ವಜನಿಕ ಭದ್ರತೆಗಾಗಿ ಕೆಎಸ್‌ಆರ್‌ಪಿ ಪ್ಲಟೂನ್ (28 ಜನರ ತಂಡದ ತುಕ್ಕಡಿ) ಗಳನ್ನು ಜಿಲ್ಲೆ ಮತ್ತು ಕಮೀಷನರೇಟ್ ವ್ಯಾಪ್ತಿಗೆ ನಿಯೋಜಿಸುವ ಮುನ್ನ ಸಂಬಂಧಪಟ್ಟ ಅಧಿಕಾರಿಗಳು ನೂತನ 9 ಅಂಶಗಳ ಪಟ್ಟಿಯನ್ನು ಗಮನಿಸುವಂತೆ ರಾಜ್ಯದ ಎಲ್ಲಾ ಪೊಲೀಸ್ ಆಯುಕ್ತರು, ವಲಯಾಧಿಕಾರಿಗಳು, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು, ಎಲ್ಲಾ ಕೆಎಸ್‌ಆರ್‌ಪಿ ಕಮಾಂಡೆಂಟ್‌ಗಳಿಗೆ ರಾಜ್ಯ ಪೊಲೀಸ್ ಇಲಾಖೆಯ ಡಿಜಿ ಮತ್ತು ಐಜಿ ಡಾ.ಎಂ.ಎ. ಸಲೀಂ ಸುತ್ತೋಲೆಯಲ್ಲಿ ಹೊರಡಿಸಿದ್ದಾರೆ.

ಕಾನೂನು ಮತ್ತು ಸುವ್ಯವಸ್ಥೆಯ ತುರ್ತು ಸಂದರ್ಭದಲ್ಲಿ ಮಾತ್ರವೇ ಕೆಎಸ್‌ಆರ್‌ಪಿ ಪಡೆಗಳಿಗೆ ನಿಯೋಜನೆಗೆ ಸಂಬಂಧಪಟ್ಟ ಅಧಿಕಾರಿಗಳಿಗೆ ಕೋರಿಕೆ ಸಲ್ಲಿಸತಕ್ಕದ್ದು. ಇನ್ನಿತರೆ ಯಾವುದೇ ಉದ್ದೇಶಗಳಿಗಾಗಿ ಕೆಎಸ್‌ಆರ್‌ಪಿ ಪ್ಲಟೂನ್‌ಗಳನ್ನು ಬಳಸಿಕೊಳ್ಳಕೂಡದು. ಅಂತಹ ಕರ್ತವ್ಯಗಳಿಗಾಗಿ ಲಭ್ಯವಿರುವ ಸಿಎಆರ್, ಡಿಎಆರ್ ಸಿಬ್ಬಂದಿಗಳನ್ನು ಬಳಸಿಕೊಳ್ಳಬೇಕು. ಗೊತ್ತುಪಡಿಸಲಾದ ಬಂದೋಬಸ್ತ್ ಕರ್ತವ್ಯಕ್ಕಾಗಿ ಕನಿಷ್ಠ ಒಂದು ವಾರ ಮುಂಗಡವಾಗಿ ಕೆಎಸ್‌ಆರ್‌ಪಿ ಅಧಿಕಾರಿಗಳಿಗೆ ಸಲ್ಲಿಸತಕ್ಕದ್ದು ಎಂದು ಮಾರ್ಗಸೂಚಿಯಲ್ಲಿ ತಿಳಿಸಿದ್ದಾರೆ.

ಕೆಎಸ್‌ಆರ್‌ಪಿ ಪ್ಲಟೂನ್‌ಗಳನ್ನು ಗೊತ್ತುಪಡಿಸದ ನಂತರ ಪೊಲೀಸ್ ಠಾಣೆಗೆ ಆಗಮಿಸಿ ವರದಿ ಮಾಡಿದ ಕೂಡಲೇ ಪಿಎಸ್‌ಐ, ಎಎಸ್‌ಐ ದರ್ಜೆಯ ಓರ್ವ ಅಧಿಕಾರಿಯನ್ನು ಪ್ರಭಾರ ಅಧಿಕಾರಿ ಎಂದು ನಿಯೋಜಿಸುವುದು ಹಾಗೂ ಕೆಎಸ್‌ಆರ್‌ಪಿ ಪ್ಲಟೂನ್ (28 ಜನರಿರುವ ತುಕ್ಕಡಿ) ಹಿಂದಿರುಗುವವರೆಗೆ ಅದೇ ಅಧಿಕಾರಿಯು ಪ್ರಭಾರ ಅಧಿಕಾರಿಯಾಗಿ ಮುಂದುವರೆಸಬೇಕು ಎಂದು ಸೂಚಿಸಿದ್ದಾರೆ.

ಕೆಎಸ್‌ಆರ್‌ಪಿ ಪ್ಲಟೂನ್‌ಗಳ ನಿಗದಿತ ಸ್ಥಳಕ್ಕೆ ಆಗಮನವಾದ ನಂತರ ಆ ಠಾಣಾಧಿಕಾರಿಯು(ಎಸ್‌ಎಚ್‌ಒ) ಸಂಬಂಧ ಪಟ್ಟ ಪ್ಲಟೂನ್‌ನ ಕರ್ತವ್ಯದ ಪ್ರಮುಖ ಉದ್ದೇಶವನ್ನು ಸ್ಪಷ್ಟವಾಗಿ ವಿವರಿಸಬೇಕು. ಸದರಿ ಬಂದೋಬಸ್ತ್‌ನ ಸಂದರ್ಭದಲ್ಲಿ ಯಾವುದೇ ಅಹಿತಕರ ಘಟನೆ ನಡೆದಿರುವ ಸಂದರ್ಭಗಳಲ್ಲಿ ಅನುಸರಿಸಬೇಕಾದ ಮುಂಜಾಗ್ರತ ಕ್ರಮಗಳನ್ನು ಎಲ್ಲಾ ಅಧಿಕಾರಿಗಳಿಗೆ ವಿವರವಾಗಿ ತಿಳಿಸುವುದು ಕಡ್ಡಾಯ ಎಂದು ಸೂಚಿಸಿದ್ದಾರೆ.

ಕೆಎಸ್‌ಆರ್‌ಪಿ ಪ್ಲಟೂನ್‌ಗಳನ್ನು ಸ್ಥಿರವಾದ ಸ್ಥಳದಲ್ಲಿ ನಿಯೋಜಿಸಿದ ಪಕ್ಷದಲ್ಲಿ, ಗಲಭೆ ನಿಗ್ರಹ ಸಾಧನೆಗಳು ಹಾಗೂ ಇತರೆ ಸಲಕರಣೆಗಳೊಂದಿಗೆ ಪ್ಲಟೂನಿನ ಅರ್ಧದಷ್ಟು ಅಧಿಕಾರಿ, ಸಿಬ್ಬಂದಿಗಳನ್ನು ಸದಾಕಾಲ ಸಿದ್ಧರಿರುವಂತೆ ನೋಡಿಕೊಳ್ಳಬೇಕು. ನಿಯೋಜನೆಗೊಂಡ ತುಕ್ಕಡಿಗಳ ಸರದಿಯಂತೆ ಪ್ರತಿ ಮೂರು ತಾಸಿಗೊಮ್ಮೆ ಬದಲಾಯಿಸಬೇಕು ಹಾಗೂ ಸರದಿಯಂತೆ 10 ನಿಮಿಷಗಳಿಗೂ ಮುನ್ನ ತಂಡವನ್ನು 'ವಾರ್ಮ್ ಅಪ್ ಡ್ರಿಲ್' ಮಾಡುವುದನ್ನು ಪ್ಲಟೂನ್ ಕಮಾಂಡರ್ ಅವರು ಖಾತ್ರಿ ಮಾಡಿಕೊಳ್ಳುವಂತೆ ಸೂಚಿಸಿದ್ದಾರೆ.

ಪೊಲೀಸ್ ಅಧೀಕ್ಷಕರು, ಅಪರ ಪೊಲೀಸ್ ಅಧೀಕ್ಷಕ, ಉಪ ಪೊಲೀಸ್ ಅಧೀಕ್ಷಕರು ಮತ್ತು ಪೊಲೀಸ್ ಇನ್‌ಸ್ಪೆಕ್ಟರ್ ಅವರುಗಳು ಕೆಎಸ್‌ಆರ್‌ಪಿ ಅಧಿಕಾರಿ ಮತ್ತು ಸಿಬ್ಬಂದಿಗಳನ್ನು ಬಂದೋಬಸ್ತ್‌ಗೆ ನಿಯೋಜಿಸಲಾದ ಸ್ಥಳ, ಅವರು ತಂಗುವ ಸ್ಥಳಗಳಿಗೆ ನಿಯಮಿತವಾಗಿ ಭೇಟಿ ನೀಡಿ, ಅವರ ಯೋಗ ಕ್ಷೇಮ ಹಾಗೂ ಶಿಸ್ತನ್ನು ಪರಿಶೀಲಿಸಿಕೊಳ್ಳುವುದು. ಆಗಿಂದಾಗ್ಗೆ ಅಧಿಕಾರಿಗಳು ಭೇಟಿ ನೀಡಿ, ಕೆಎಸ್‌ಆರ್‌ಪಿ ಅಧಿಕಾರಿ, ಸಿಬ್ಬಂದಿ ಜಾಗೃತರಾಗಿರಲು ಹಾಗೂ ಶಿಸ್ತನ್ನು ಕಾಪಾಡಿಕೊಳ್ಳುವ ವಾತಾವರಣವನ್ನು ನಿರ್ಮಿಸಬೇಕು.

ಅಂತಹ ಪ್ಲಟೂನಿನ ವತಿಯಿಂದ ಒಂದು ರಿಜಿಸ್ಟರ್ ನಿರ್ವಹಣೆ ಮಾಡಿ, ಸದರಿ ರಿಜಿಸ್ಟರ್‌ನಲ್ಲಿ ಹಿರಿಯ ಅಧಿಕಾರಿಗಳ ಭೇಟಿ, ಪ್ಲಟೂನ್ ತಂಗಿರುವ ಸ್ಥಳ, ಡಿಪ್ಲಾಯ್‌ಮೆಂಟ್ ಮುಂತಾದವುಗಳನ್ನು ನಮೂದಿಸಿಕೊಳ್ಳುವುದು. ಸಂದರ್ಶನ ನೀಡುವ ಅಧಿಕಾರಿಯೂ ನಿರ್ವಹಿಸಲಾದ ರಿಜಿಸ್ಟರ್‌ನಲ್ಲಿ ತಮ್ಮ ವೀಕ್ಷಣೆಯನ್ನು ಮತ್ತು ನಿರ್ದೇಶನಗಳನ್ನು ನಮೂದಿಸುವುದು ಕಡ್ಡಾಯ ಎಂದಿದ್ದಾರೆ. ಕೆಎಸ್‌ಆರ್‌ಪಿ ಪ್ಲಟೂನ್‌ನ್ನು ಡೆಪ್ಲಾಯ್‌ಮೆಂಟಿನ ಉದ್ದೇಶ ಈಡೇರಿದ ಕೂಡಲೇ ಅಂತಹ ಪ್ಲಟೂನ್‌ನ್ನು ಕರ್ತವ್ಯ ಮುಕ್ತಗೊಳಿಸಿದ ಹಿಂದಿರುಗಿಸುವ ಕ್ರಮ ಕೈಗೊಳ್ಳಬೇಕು ಎಂದು ಡಿಜಿ ಮತ್ತು ಐಜಿ ಡಾ.ಎಂ.ಎ. ಸಲೀಂ ಮಾರ್ಗಸೂಚಿಯಲ್ಲಿ ಉಲ್ಲೇಖಿಸಿದ್ದಾರೆ.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಮಹಾವತಾರ ನರಸಿಂಹ (ಕ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಜೂನಿಯರ್ (ಕ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಸನ್ ಆಫ್ ಸರ್ದಾರ್–2 (ಹಿಂ)	4 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಎಲ್ಲುಮುತ್ತಾ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಎಕ್ಕ (ಕ)	4 ಪ್ರದರ್ಶನಗಳು
ರಾಜಕಮಲ್	
ಹೌಸ್ ಮೇಟ್ಸ್ (ತ)	4 ಪ್ರದರ್ಶನಗಳು
ಸಂಗಂ	
ಸು ಫ್ರಮ್ ಸೋ (ಕ)	4 ಪ್ರದರ್ಶನಗಳು
ಲಿಡೋ	
ಎಲ್ಲುಮುತ್ತಾ (ಕ) + ಕೊತಲ್ವಾಡಿ (ಕ)	2+2 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಮಹಾವತಾರ ನರಸಿಂಹ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	28 ಇಯರ್ಸ್ ಲೇಟರ್ (ಇಂ): ಬೆ10.40ಕ್ಕೆ, ರಾ.7.55ಕ್ಕೆ, ಡಿಎನ್‌ಎ (ತ): ಮ1.10ಕ್ಕೆ, ಕುಬೇರಾ (ತೆ): ಸಂ.4.05ಕ್ಕೆ, ಸಿತಾರೆ ಜಮೀನ್ ಪರ್ (ಹಿಂ): ರಾ.10.25ಕ್ಕೆ.
ಸ್ಕ್ರೀನ್ 2	ಇಲಿಯೋ (3ಡಿ)(ಇಂ): ಬೆ11.30ಕ್ಕೆ, ಮ1.45ಕ್ಕೆ, ಸಿತಾರೆ ಜಮೀನ್ ಪರ್ (ಹಿಂ): ಸಂ.4ಕ್ಕೆ, ರಾ.7.10ಕ್ಕೆ, ಯುನೈಟೆಡ್ ಕಿಂಗ್‌ಡಮ್ ಆಫ್ ಕೇರಳ (ಮ): ರಾ10.20ಕ್ಕೆ.
ಸ್ಕ್ರೀನ್ 3	ಮಾದೇವ (ಕ): ಬೆ.10.30ಕ್ಕೆ, ರಾ.7.10ಕ್ಕೆ, ಮಾತೊಂದ ಹೇಳುವೆ (ಕ): ಮ.1.15ಕ್ಕೆ, 28 ಇಯರ್ಸ್ ಲೇಟರ್ (ಇಂ): ಸಂ.4.30ಕ್ಕೆ, ವ್ಯಾಸನಸಮೇತಂ ಬಂಧುಮಿತ್ರ (ಮ): ರಾ.10ಕ್ಕೆ.
ಸ್ಕ್ರೀನ್ 4	ಕುಬೇರಾ (ತೆ): ಬೆ.10.30ಕ್ಕೆ, ಸಂ.6.25ಕ್ಕೆ, ರಾ.10.15ಕ್ಕೆ, ಕುಬೇರಾ (ತ): ಮ.2.20ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಎಡಗೈಯೇ ಅಪಘಾತಕ್ಕೆ ಕಾರಣ (ಕ): ಮ.1.45ಕ್ಕೆ, ಸಂ.4.25ಕ್ಕೆ, ಸಂ.6.50ಕ್ಕೆ, ಮಾದೇವ (ಕ): ರಾ.9.15ಕ್ಕೆ.
ಸ್ಕ್ರೀನ್ 2	ಮಾದೇವ (ಕ): ಮ.1.15ಕ್ಕೆ, ಸಂ.4.30ಕ್ಕೆ, ರಾ.7.30ಕ್ಕೆ.
ಸ್ಕ್ರೀನ್ 3	ಯುದ್ಧಕಾಂಡ 2 (ಕ): ಸಂ.6.50ಕ್ಕೆ.
ಸ್ಕ್ರೀನ್ 4	ಹೌಸ್‌ಫುಲ್ 5ಎ (ಹಿಂ): ಮ.1.15ಕ್ಕೆ, ಸಂ.4.30ಕ್ಕೆ, ರಾ.7.44ಕ್ಕೆ.

ಪಿವಿಆರ್ ಸಿನಿಮಾಸ್
PVR CINEMAS
ನೆಕ್ಸಸ್ ಸೆಂಟರ್‌ಸಿಟಿ ಮಾಲ್,
2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆ ಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಮೈಸೂರಿನ ಎನ್.ಆರ್.ಮೊಹಲ್ಲಾದ ಅಂಬಾಭವಾನಿ ವೃತ್ತದಲ್ಲಿ ಫುಟ್‌ಪಾತ್ ಅತಿಕ್ರಮಣ

●ನಗರ ಪಾಲಿಕೆ ಆಯುಕ್ತರಿಗೆ ಹಿರಿಯ ನಾಗರಿಕರು ದೂರು ನೀಡಿದ್ದರೂ ಪ್ರಯೋಜನವಾಗಿಲ್ಲ ●ಕೂಡಲೇ ಕ್ರಮ ಕೊಳ್ಳದಿದ್ದರೆ ಲೋಕಾಯುಕ್ತರಿಗೆ ದೂರು ನೀಡುವ ಎಚ್ಚರಿಕೆ





ಎನ್.ಆರ್.ಮೊಹಲ್ಲಾದ ಈಶಾನ್ಯ ಭಾಗದಲ್ಲಿರುವ ಅಂಬಾಭಾವಾನಿ ವೃತ್ತದಲ್ಲಿ ಪಾದಚಾರಿ ಮಾರ್ಗವನ್ನು ಅತಿಕ್ರಮಣ ಮಾಡಿಕೊಂಡಿರುವುದು

ಮೈಸೂರು, ಆ.3(ಬಿಎಲ್‌ಯು)– ಫುಟ್‌ಪಾತ್ ಅತಿಕ್ರಮಣ ಮೈಸೂರಿನ ಸೌಂದರ್ಯಕ್ಕೆ ಭೂಷಣ ಎಂದು ಪ್ರಾಯಶಃ ನಗರ ಪಾಲಿಕೆಯವರು ತಪ್ಪಾಗಿ ಭಾವಿಸಬಹುದು ಅನಿಸುತ್ತದೆ. ಈ ಕಾರಣದಿಂದಲೇ ನಗರದ ಹಲವು ಸ್ಥಳಗಳಲ್ಲಿ ಫುಟ್‌ಪಾತ್ ಅತಿಕ್ರಮಣವಾಗಿದ್ದರೂ ನಗರ ಪಾಲಿಕೆ ಅಧಿಕಾರಿಗಳು ಯಾವುದೇ ಕ್ರಮ ಕೈಗೊಳ್ಳದೆ ಮೌನ ವಹಿಸಿದ್ದಾರೆ. ಮೈಸೂರಿನ ಎನ್.ಆರ್. ಮೊಹಲ್ಲಾದ ಅಂಬಾಭಾವಾನಿ ವೃತ್ತದಲ್ಲಿ ಫುಟ್‌ಪಾತ್ ಅತಿಕ್ರಮಣವಾಗಿದ್ದರೂ ನಗರ ಪಾಲಿಕೆ ಅಧಿಕಾರಿಗಳು ಯಾವುದೇ ಕ್ರಮ ಕೈಗೊಂಡಿಲ್ಲ.

ನಗರದ ಎನ್.ಆರ್.ಮೊಹಲ್ಲಾದ ಈಶಾನ್ಯ ಭಾಗದಲ್ಲಿರುವ ಅಂಬಾಭಾವಾನಿ ವೃತ್ತದಲ್ಲಿ ಪಾದಚಾರಿ ಮಾರ್ಗವನ್ನು ಅತಿಕ್ರಮಣ ಮಾಡಿಕೊಳ್ಳಲಾಗಿದೆ. ಇದನ್ನು ತೆರವುಗೊಳಿಸುವಂತೆ ಹಿರಿಯ ನಾಗರಿಕರಾದ ಹುಮಾಯೂನ್ ರಶೀದ್ ಅವರು ನವೆಂಬರ್ 7, 2024 ನಗರ ಪಾಲಿಕೆ ಆಯುಕ್ತರಿಗೆ ಪತ್ರ ಬರೆದಿದ್ದರು. ಎಂಟು ತಿಂಗಳು ಕಳೆದರೂ ಫುಟ್‌ಪಾತ್ ಅತಿಕ್ರಮಣ ತೆರವುಗೊಳಿಸಲು ಯಾವುದೇ ಕ್ರಮ ಕೈಗೊಂಡಿಲ್ಲ. ಇತ್ತೀಚಿಗೆ ಹೈ ಮಾಸ್ಟ್ ಬೀದಿ ದೀಪದ ಕಂಬದ ಪಕ್ಕದಲ್ಲಿ ಪಾದಚಾರಿ ಮಾರ್ಗವನ್ನು ಅತಿಕ್ರಮಣ ಮಾಡಲಾಗಿದೆ. ಅಲ್ಲಿ ಒಂದು ಚಹಾ ಅಂಗಡಿ ಇಟ್ಟಿದ್ದು, ರಸ್ತೆ ಮೇಲೆ ತರಕಾರಿ ಗಾಡಿಯನ್ನು ನಿಲ್ಲಿಸಿ ವ್ಯಾಪಾರ ಮಾಡಲಾಗುತ್ತಿದೆ.

ಚಹಾ ಅಂಗಡಿ ಹಾಗೂ ತರಕಾರಿ ಗಾಡಿಯ ತ್ಯಾಜ್ಯವನ್ನು ಮಳೆ ನೀರಿನ ಚರಂಡಿಗೆ ಸುರಿಯಲಾಗುತ್ತಿದೆ. ಇದರಿಂದ ಚರಂಡಿಯಿಂದ ಮಳೆ ನೀರು ಸರಾಗವಾಗಿ ಹೋಗದ ಪರಿಸ್ಥಿತಿ ನಿರ್ಮಾಣವಾಗಿದೆ.

ಫುಟ್‌ಪಾತ್ ಅತಿಕ್ರಮಣ ಜಾಗದಲ್ಲಿ ಕಲ್ಲಿನ ಬೆಂಚು ನಿರ್ಮಾಣ ಮಾಡಲಾಗಿದೆ. ಈಗ ಆ ಸ್ಥಳ ಸಮಾಜ ಘಾತುಕ ವ್ಯಕ್ತಿಗಳು ಹಾಗೂ ಕುಡುಕರ ಆಶ್ರಯ ತಾಣವಾಗಿದೆ. ಪ್ರತಿ ದಿನ ಬೆಳಿಗ್ಗೆಯಿಂದ ರಾತ್ರಿವರೆಗೆ ಇಲ್ಲಿ ಜಗಳ, ಕೂಗಾಟ ಸಾಮಾನ್ಯವಾಗಿದೆ.

ಇಷ್ಟೆಲ್ಲಾ ಆದರೂ ನಗರ ಪಾಲಿಕೆಯ ಯಾವ ಅಧಿಕಾರಿಗಳು ಫುಟ್‌ಪಾತ್ ಅತಿಕ್ರಮಣ ತೆರವು ಮಾಡಿಲ್ಲ. ಅಲ್ಲಿ ಅವ್ಯವಸ್ಥೆ ಇರುವುದು ಸುತ್ತಮುತ್ತಲಿನ ನಿವಾಸಿಗಳಿಗೆ ತೊಂದರೆಯಾಗಿದೆ. ಈ ಹಿನ್ನೆಲೆ ಅತಿಕ್ರಮಣ ತೆರವು ಮಾಡುವಂತೆ ಜುಲೈ 9, 2025 ರಂದು ನಗರ ಪಾಲಿಕೆ ಆಯುಕ್ತರಿಗೆ ಮತ್ತೊಮ್ಮೆ ಪುತ್ರ ಬರೆದಿದ್ದೇನೆ ಎಂದು ಹುಮಾಯೂನ್ ರಶೀದ್ ತಿಳಿಸಿದ್ದಾರೆ.

ನಗರ ಪಾಲಿಕೆಯ ಸ್ಥಳಿಯ ಅಧಿಕಾರಿಗಳಿಗೆ ದೂರು ನೀಡುವುದರ ಜೊತೆಗೆ ನಗರ ಪಾಲಿಕೆ ಆಯುಕ್ತರಿಗೆ ಎರಡು ಪತ್ರ ಬರೆದಿದ್ದರೂ ಅವರಿಂದ ಸಕರಾತ್ಮಕ ಪ್ರತಿಕ್ರಿಯೆ ಬಂದಿಲ್ಲ. ಈ ಕೂಡಲೇ ಫುಟ್ ಪಾತ್ ಅತಿಕ್ರಮಣ, ವ್ಯಾಪಾರದ ಗಾಡಿಗಳು ಹಾಗೂ ಕಲ್ಲಿನ ಬೆಂಚು ತೆರವು ಮಾಡದಿದ್ದರೆ ಲೋಕಾಯುಕ್ತರಿಗೆ ದೂರು ನೀಡಬೇಕಾಗುತ್ತದೆ ಎಂದು ಹುಮಾಯೂನ್ ರಶೀದ್ ನಗರ ಪಾಲಿಕೆ ಆಯುಕ್ತರನ್ನು ಎಚ್ಚರಿಸಿದ್ದಾರೆ.

ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಜಯಂತಿ ಮೈಸೂರಿಗರ ಹಬ್ಬವಾಗಬೇಕು

ಬಿಜೆಪಿ ಒಬಿಸಿ ಮೋರ್ಚಾ ರಾಜ್ಯಾಧ್ಯಕ್ಷ ರಘು ಕೌಟಿಲ್ಯ ಸಲಹೆ



ಮೈಸೂರಿನ ನಂಜನಗೂಡು ರಸ್ತೆಯ ಮಧುವನದ ನಾಲ್ವಡಿ ಅವರ ಬೃಂದಾವನದಲ್ಲಿ ಕರ್ನಾಟಕ ರಾಜ್ಯ ಒಕ್ಕಲಿಗರ ವಿಕಾಸ ವೇದಿಕೆ ನಾಲ್ವಡಿ ಕೃಷ್ಣರಾಜ ಒಡೆಯರ್ ಪುಣ್ಯಸ್ಮರಣೆ ಕಾರ್ಯಕ್ರಮ ಆಯೋಜಿಸಿತ್ತು.

ಮೈಸೂರು, ಆ.3(ಬಿಎಲ್‌ಯು)– ಆಧುನಿಕ ಮೈಸೂರು ನಿರ್ಮಾತೃ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಜಯಂತಿ ಮೈಸೂರಿಗರ ಹಬ್ಬವಾಗಬೇಕು ಎಂದು ಬಿಜೆಪಿ ಒಬಿಸಿ ಮೋರ್ಚಾ ರಾಜ್ಯಾಧ್ಯಕ್ಷ ರಘು ಕೌಟಿಲ್ಯ ಅವರು ಸಲಹೆ ನೀಡಿದರು.

ಮೈಸೂರಿನ ನಂಜನಗೂಡು ರಸ್ತೆಯ ಮಹಾರಾಜರ ಸಮಾದಿ ಸ್ಥಳ ಮಧುವನದಲ್ಲಿ ಕರ್ನಾಟಕ ರಾಜ್ಯ ಒಕ್ಕಲಿಗರ ವಿಕಾಸ ವೇದಿಕೆ ಆಯೋಜಿಸಿದ್ದ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಪುಣ್ಯಸ್ಮರಣೆ ಕಾರ್ಯಕ್ರಮದಲ್ಲಿ ನಾಲ್ವಡಿ ಅವರ ಬೃಂದಾವನಕ್ಕೆ ಪುಷ್ಪಾರ್ಚನೆ ಮಾಡಿದ ನಂತರ ಮಾತನಾಡಿದ ಅವರು, ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಮಾಡಿರುವ ಅಭಿವೃದ್ಧಿಯಿಂದ ಮೈಸೂರು ವಿಶ್ವದ ಭೂಪಟದಲ್ಲಿ ಸ್ಥಾನ ಪಡೆದಿದೆ ಎಂದರು.

ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಉಪಕಾರ ಸ್ಮರಣೆಯನ್ನು ಜನಪ್ರತಿನಿಧಿಗಳು ಹಾಗೂ ಅಧಿಕಾರಸ್ಥರು ಮಾಡಬೇಕು. ಜೊತೆಗೆ ನಾಲ್ವಡಿ ಅವರ ಜಯಂತಿ ಮೈಸೂರು ಹಾಗೂ ಮೈಸೂರಿಗರ ಹಬ್ಬವಾಗಬೇಕು ಎಂದು ಸಲಹೆ ನೀಡಿದರು. ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಮಾಡಿದಷ್ಟು ಅಭಿವೃದ್ಧಿ ಕಾರ್ಯವನ್ನು ಈಗಿನ ಸರ್ಕಾರಗಳು ಮಾಡಲು ಸಾಧ್ಯವಿಲ್ಲ. ಕನಿಷ್ಟ ಅವರು ನಿರ್ಮಾಣ ಮಾಡಿರುವ ಪಾರಂಪರಿಕ ಕಟ್ಟಡಗಳನ್ನು ಸಂರಕ್ಷಣೆ ಮಾಡಬೇಕು ಹೇಳಿದರು.

ರಾಮರಾಜ್ಯವಾಗಿದ್ದ ಮೈಸೂರು ರಾಜ್ಯದ ಅಭಿವೃದ್ಧಿ ನೋಡಿದ ರಾಷ್ಟ್ರಪಿತ ಮಹಾತ್ಮಾ ಗಾಂಧಿ ಅವರು ನಾಲ್ವಡಿ ಕೃಷ್ಣರಾಜ ಒಡೆಯರ್ ಅವರಿಗೆ ರಾಜರ್ಷಿ ಎಂಬ ಬಿರುದು ನೀಡಿದರು. ಇಂತಹ ಮಹಾನ್ ವ್ಯಕ್ತಿಯ ಸ್ಮರಣೆ ಮಾಡುತ್ತಿರುವುದು ಉತ್ತಮ ಕಾರ್ಯ ಎಂದು ಅಭಿಪ್ರಾಯಪಟ್ಟರು.

ಮೈಸೂರಿನ ಅಭಿವೃದ್ಧಿ ಬಗ್ಗೆ ಧ್ವನಿ ಎತ್ತುವ ಬಹಳಷ್ಟು ಮಂದಿ ಕಾಲವಾಗಿದ್ದಾರೆ. ಅವರಲ್ಲಿ 'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ಪತ್ರಿಕೆಗಳ ಸಂಸ್ಥಾಪಕ ಸಂಪಾದಕ ಡಾ.ಕೆ.ಬಿ.ಗಣಪತಿ ಅವರು ಕೂಡ ಒಬ್ಬರಾಗಿದ್ದಾರೆ. ಈಗ ಇಂತಹ ಮಹನಿಯರು ತೋರಿದ ದಾರಿಯಲ್ಲಿ ಸಾಗುವ ಮೂಲಕ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ನಿರ್ಮಾಣ ಮಾಡಿರುವ ಪಾರಂಪರಿಕ ಕಟ್ಟಡಗಳನ್ನು ಸಂರಕ್ಷಿಸಬೇಕು ಎಂದು ರಘು ಕೌಟಿಲ್ಯ ಸಲಹೆಯಿತ್ತರು.

ಮೈಸೂರು ಅರಮನೆ ಮಂಡಳಿ ಉಪ ನಿರ್ದೇಶಕ ಸುಬ್ರಹ್ಮಣ್ಯ, ಮಾಜಿ ಮೇಯರ್ ಮೋದಾಮಣಿ, ಕನ್ನಡ ಸಾಹಿತ್ಯ ಕಲಾ ಕೂಟದ ಅಧ್ಯಕ್ಷ ಎಂ.ಚಂದ್ರಶೇಖರ್, ಅರಸು ಮಂಡಳಿ ಸಂಘದ ಅಧ್ಯಕ್ಷ ಕೆಂಪರಾಜೇ ಅರಸ್, ಜೆಡಿಎಸ್ ಮುಖಂಡರಾದ ಹೆಚ್.ಕೆ.ರಾಮು, ಗಂಗಾಧರ್, ಕರ್ನಾಟಕ ರಾಜ್ಯ ಒಕ್ಕಲಿಗರ ವಿಕಾಸ ವೇದಿಕೆ ರಾಜ್ಯಾಧ್ಯಕ್ಷ ಹೆಚ್.ಎಲ್. ಯಮುನಾ ಕಾರ್ಯಕ್ರಮದಲ್ಲಿ ಹಾಜರಿದ್ದರು.

ನೇಮಕ



ಮೈಸೂರು, ಆ.3– ಇಂಡಿಯನ್ ನ್ಯಾಷನಲ್ ಟ್ರೇಡ್ ಯೂನಿಯನ್ ಕಾಂಗ್ರೆಸ್(ಐಎನ್‌ಟಿಯುಸಿ) ಯುವ ಘಟಕ ಎನ್.ಆರ್.ಕ್ಷೇತ್ರದ ಅಧ್ಯಕ್ಷರಾಗಿ ಗಾಯತ್ರಿಪುರಂನ ಸುಫಿಯನ್ ಅಹ್ಮದ್ ಅವರನ್ನು ನೇಮಕ ಮಾಡಲಾಗಿದೆ ಎಂದು ಘಟಕದ ಜಿಲ್ಲಾಧ್ಯಕ್ಷ ಮದನ್ ಕುಮಾರ್ ತಿಳಿಸಿದ್ದಾರೆ.

ಒಣ, ಹಸಿ ಕಸ ವಿಂಗಡಿಸದೇ ಮಿಶ್ರ ತ್ಯಾಜ್ಯ ಸುರಿಯುತ್ತಿರುವ ನಾಗರಿಕರು

● ಪೌರಕಾರ್ಮಿಕರಿಗೆ ನರಕಯಾತನೆ ● ಮಾನವ ಹಕ್ಕು ಆಯೋಗದ ಮೊರೆ ಹೋಗುವುದಾಗಿ ಮಾಜಿ ಕಾರ್ಪೋರೇಟರ್ ಕೆ.ವಿ.ಶ್ರೀಧರ್ ಎಚ್ಚರಿಕೆ

ಮೈಸೂರು, ಆ.3(ಎಸ್‌ಬಿಡಿ)– ಮನೆ ಬಾಗಿಲಲ್ಲಿ ಕಸ ಸಂಗ್ರಹಿಸುವ ವಾಹನಗಳಿಗೆ ಮಿಶ್ರ ತ್ಯಾಜ್ಯ ಸುರಿಯುವ ಪರಿಪಾಟ ಮತ್ತೆ ವ್ಯಾಪಿಸುತ್ತಿದ್ದು, ಇದರಿಂದ ಪೌರಕಾರ್ಮಿಕರಿಗೆ ಸಂಕಟ ಸೃಷ್ಟಿಯಾಗಿದೆ ಎಂದು ಮೈಸೂರು ಮಹಾನಗರ ಪಾಲಿಕೆ ಮಾಜಿ ಸದಸ್ಯ ಕೆ.ವಿ.ಶ್ರೀಧರ್ ಬೇಸರ ವ್ಯಕ್ತಪಡಿಸಿದ್ದಾರೆ.

ನಗರವನ್ನು ಕಂಟೈನರ್ ಮುಕ್ತ ಮಾಡುವ ಉದ್ದೇಶದಿಂದ ಪ್ರತಿ ದಿನ ಬೆಳಗ್ಗೆ ಮನೆ ಮನೆಗೆ ತೆರಳಿ ಹಸಿ ಮತ್ತು ಒಣ ಕಸವನ್ನು ಪ್ರತ್ಯೇಕವಾಗಿ ಸಂಗ್ರಹಿಸುವ ವ್ಯವಸ್ಥೆ ಜಾರಿಗೊಳಿಸಲಾಯಿತು. ಆದರೆ ಈ ಯೋಜನೆ ದಿನ ಕಳೆದಂತೆ ವಿಫಲವಾಗುತ್ತಿದೆ. ಬಹುತೇಕ ಮನೆಯವರು ಕಸವನ್ನು ವಿಂಗಡಿಸದೇ ಮಿಶ್ರ ಕಸವನ್ನು ನೀಡುತ್ತಿದ್ದಾರೆ. ಇದರಿಂದ ಪೌರಕಾರ್ಮಿಕರು ಆಟೋಗಳಲ್ಲಿ ಕಸದ ಮೇಲೆಯೇ ನಿಂತು ವಿಂಗಡಿಸಬೇಕಾದ ದುಃಸ್ಥಿತಿ ನಿರ್ಮಾಣವಾಗಿದೆ ಎಂದು ಪತ್ರಿಕಾ ಹೇಳಿಕೆಯಲ್ಲಿ ವಿಷಾದಿಸಿದ್ದಾರೆ.

ವಿಂಗಡಿಸದ ಕಸವನ್ನು ಸಂಸ್ಕರಣಾ ಘಟಕಗಳಲ್ಲಿ ಸ್ವೀಕರಿಸದ ಕಾರಣ ಪೌರಕಾರ್ಮಿಕರೇ ವಿಂಗಡಿಸಬೇಕಿದೆ. ಕಸದ ರಾಶಿಯಲ್ಲಿ ನಿಂತು ದುರ್ವಾಸನೆ ನಡುವೆ ಈ ಕೆಲಸ ಮಾಡುವುದು ನರಕಸದೃಶವಾಗಿದೆ. ಇದು ನಾಗರಿಕ ಸಮಾಜ ತಲೆತಗ್ಗಿಸುವಂತಿದ್ದರೂ ಪಾಲಿಕೆ ಅಧಿಕಾರಿಗಳು ಯಾವುದೇ ಕ್ರಮ ಕೈಗೊಂಡಿಲ್ಲ. ವೈಜ್ಞಾನಿಕವಾಗಿ ಕಸ ಸಂಗ್ರಹ ಹಾಗೂ ವಿಂಗಡಣೆ ನಡೆಸದೆ, ಎಲ್ಲ ಹೊರೆಯನ್ನು ಪೌರಕಾರ್ಮಿಕರ ಮೇಲೆ ಹಾಕಿದ್ದಾರೆ. ಇದರಿಂದ ಪೌರಕಾರ್ಮಿಕರ ಆರೋಗ್ಯದ ಮೇಲೆ ಗಂಭೀರ ಪರಿಣಾಮವಾದರೆ ಅದಕ್ಕೆ ಅಧಿಕಾರಿಗಳೇ ನೇರ ಹೊಣೆಗಾರರಾಗುತ್ತಾರೆ ಎಂದು ಎಚ್ಚರಿಕೆ ನೀಡಿದ್ದಾರೆ.



ಸಾಂದರ್ಭಿಕ ಚಿತ್ರ

ಹೆಚ್ಚುತ್ತಿದೆ ಪಾಯಿಂಟ್ ಕಸ: ಮನೆ ಮನೆ ಕಸ ಸಂಗ್ರಹ ವ್ಯವಸ್ಥೆ ಇದ್ದರೂ ಅಧಿಕಾರಿಗಳ ಬೇಜವಾಬ್ದಾರಿಯಿಂದ ಪಾಯಿಂಟ್ ಕಸ ಹೆಚ್ಚುತ್ತಿದೆ. ನಗರದ ಯಾವುದೇ ಬಡಾವಣೆ, ರಸ್ತೆಗೆ ಹೋದರೂ ಅಲ್ಲೊಂದು ಕಸದ ರಾಶಿ ಕಾಣುತ್ತಿದೆ. ಅಧಿಕಾರಿಗಳಲ್ಲಿ ನಗರದ ಬಗ್ಗೆ ಕಾಳಜಿಯಾಗಲೀ, ಈ ನಿಟ್ಟಿನಲ್ಲಿ ಕಾರ್ಯ ನಿರ್ವಹಿಸುವ ಉತ್ಸಾಹವಾಗಲೀ ಉಳಿದಿಲ್ಲ. ಕಸ ಸಂಗ್ರಹಣೆ ನಿರ್ವಹಿಸುವಲ್ಲಿ ವಿಫಲರಾಗಿದ್ದಾರೆ. ಅಧಿಕಾರಿಗಳ ನಿರ್ಲಕ್ಷ್ಯದಿಂದ ಪೌರಕಾರ್ಮಿಕರಿಗೂ ಸಂಕಷ್ಟ ಎದುರಾಗಿದೆ. ಕೆಲ ಮನೆಯವರು, ಮಳಿಗೆಯವರು ಪಾಲಿಕೆ ವಾಹನಗಳಲ್ಲಿ ಕಸ ಹಾಕದೆ ಎಲ್ಲೆಂದರಲ್ಲಿ ಬಿಸಾಡುವುದರಿಂದ ಪೌರಕಾರ್ಮಿಕರ ಕೆಲಸದ ಒತ್ತಡವೂ ಹೆಚ್ಚಾಗಿದೆ ಎಂದು ತಿಳಿಸಿದ್ದಾರೆ.

ಸುರಕ್ಷತಾ ಕ್ರಮಕ್ಕೆ ಆದ್ಯತೆ ನೀಡಿ: ಅನಿವಾರ್ಯವಾಗಿ ತ್ಯಾಜ್ಯದ ನಡುವೆ ನಿಂತು ವಿಂಗಡಣೆ ಮಾಡುವ ಪೌರಕಾರ್ಮಿಕರಿಗೆ ಕೈಗವುಸು, ಶೂ ಸೇರಿದಂತೆ ಕನಿಷ್ಠ ಸುರಕ್ಷತಾ ಪರಿಕರಗಳನ್ನಾದರೂ ನೀಡಬೇಕು. ಈ ಮೂಲಕ ನಗರದ ಸ್ವಚ್ಛತೆಗೆ ಶ್ರಮಿಸುವ ಪೌರಕಾರ್ಮಿಕರ ಆರೋಗ್ಯ ರಕ್ಷಿಸಬೇಕು. ಕೊಳೆಯಬಹುದಾದ ಕಸದಿಂದ ಗೊಬ್ಬರ ತಯಾರಿಸುವುದರ ಜೊತೆಗೆ ಪ್ಲಾಸ್ಟಿಕ್ ಇನ್ನಿತರ ಕರಗದ ವಸ್ತುಗಳನ್ನು ಮರುಬಳಕೆಗೆ ಕ್ರಮ ವಹಿಸಲಾಗಿದೆ. ಈ ಮೂಲಕ ಪಾಲಿಕೆಗೆ ಆದಾಯ ಬರುತ್ತಿದ್ದು, ಆ ಹಣದಲ್ಲೇ ಪೌರಕಾರ್ಮಿಕರಿಗೆ ಸೂಕ್ತ ಸೌಲಭ್ಯ ಕಲ್ಪಿಸಬೇಕು ಎಂದು ಆಗ್ರಹಿಸಿದ್ದಾರೆ.

ಮಾನವ ಹಕ್ಕು ಆಯೋಗದ ಮೊರೆ: ನಗರದ ಸ್ವಚ್ಛತೆ, ಸಾರ್ವಜನಿಕರ ಆರೋಗ್ಯ ರಕ್ಷಣೆಯಲ್ಲಿ ಪ್ರಮುಖ ಪಾತ್ರ ವಹಿಸುವ ಪೌರಕಾರ್ಮಿಕರ ರಕ್ಷಣೆಯೂ ಅಷ್ಟೇ ಮುಖ್ಯ. ಈ ಬಗ್ಗೆ ಅಧಿಕಾರಿಗಳು ತಕ್ಷಣ ಎಚ್ಚೆತ್ತುಕೊಂಡು ಪೌರಕಾರ್ಮಿಕರಿಗೆ ಅಗತ್ಯ ಸೌಲಭ್ಯ ಕಲ್ಪಿಸದಿದ್ದರೆ ಮಾನವ ಹಕ್ಕುಗಳ ಆಯೋಗದ ಕದ ತಟ್ಟಬೇಕಾಗುತ್ತದೆ ಎಂದು ಎಚ್ಚರಿಸಿದ್ದಾರೆ.

ಸಮಸ್ಯೆಗೆ ಪರಿಹಾರ ಇದೆ



ಪ್ರತಿ ಮನೆಯಿಂದಲೂ ವೈಜ್ಞಾನಿಕವಾಗಿ ವಿಂಗಡಿತ ಕಸ ಸಂಗ್ರಹಿಸಬೇಕು. ಕಸ ನೀಡದ ಮನೆಗಳ ಪಟ್ಟಿ ಮಾಡಿ, ಅಂತಹ ಮನೆಗಳಿಗೆ ಪರಿಸರ ಎಂಜಿನಿಯರ್, ಆರೋಗ್ಯ ಅಧಿಕಾರಿಗಳು ಭೇಟಿ ನೀಡಿ, ಅರಿವು ಮೂಡಿಸಬೇಕು. ಆದಾಗ್ಯೂ ಪಾಲಿಕೆ ವಾಹನ ಬಂದಾಗ ಕಸ ನೀಡದೆ, ಇಷ್ಟಬಂದಾಗ ಎಲ್ಲೆಂದರಲ್ಲಿ ಕಸ ಹಾಕುವವರಿಗೆ ದಂಡ ವಿಧಿಸಬೇಕು. ಪ್ರತಿ ಮನೆಯಿಂದಲೂ ತಪ್ಪದೇ ಕಸ ಸಂಗ್ರಹ ಮಾಡಿದರೆ ಕಸದ ಪಾಯಿಂಟ್ ಸೃಷ್ಟಿಯಾಗುವುದಿಲ್ಲ. ನಗರವೂ ಸ್ವಚ್ಛವಾಗಿರುತ್ತದೆ.

-ಕೆ.ವಿ.ಶ್ರೀಧರ್

'ಶ್ರೀ ದೇವಿ ಮಹಾತ್ಮೆ' ಯಕ್ಷಗಾನ ಪ್ರದರ್ಶನ



ಮೈಸೂರು, ಆ.3(ಎಸ್‌ಪಿಎನ್)– ಯಕ್ಷಗಾನ ಗಂಡು ಕಲೆ. ಈ ಕಲೆ ಜಗತ್ತಿನ ಬಹುತೇಕ ರಾಷ್ಟ್ರಗಳಲ್ಲಿ ಪ್ರದರ್ಶನಗೊಂಡು ಮೆಚ್ಚುಗೆ ಗಳಿಸಿದೆ. ಹಾಗಾಗಿ ಯಕ್ಷಗಾನ ಕಲೆ ಉಳಿವಿಗೆ ಎಲ್ಲರೂ ಪ್ರೋತ್ಸಾಹ ನೀಡಬೇಕು ಎಂದು ಹಿರಿಯ ರಂಗಕರ್ಮಿ ಮಂಡ್ಯ ರಮೇಶ್ ಅಭಿಪ್ರಾಯಪಟ್ಟರು.

ಮೈಸೂರಿನ ರಾಮಕೃಷ್ಣನಗರ ನಟನ ರಂಗಮಂದಿರದಲ್ಲಿ ದಕ್ಷಿಣ ಕನ್ನಡ ಮತ್ತು ಕರಾವಳಿ ಜಿಲ್ಲಾ ಸಂಘಗಳ ಒಕ್ಕೂಟ, ಮನುಜ ರಂಗ ಟ್ರಸ್ಟ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮೈಸೂರು ವಿಭಾಗದ ಸಹಯೋಗದೊಂದಿಗೆ ಆಯೋಜಿಸಿದ್ದ 'ಶ್ರೀ ದೇವಿ ಮಹಾತ್ಮೆ' ಯಕ್ಷಗಾನ ಪ್ರದರ್ಶನ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು.

ಸಾಂಸ್ಕೃತಿಕ ನಗರಿ ಮೈಸೂರಲ್ಲಿ ಎಲ್ಲಾ ಪ್ರಕಾರಗಳ ಕಲೆಗಳಿಗೂ ಪ್ರೇಕ್ಷಕರಿದ್ದಾರೆ. ಅದರಲ್ಲೂ ಯಕ್ಷಗಾನಕ್ಕೆ ಹೆಚ್ಚಿನ ಪ್ರೇಕ್ಷಕ ವರ್ಗವಿದೆ. ಯಾವುದೇ ಕಲೆ ಉಳಿಯಬೇಕಾದರೆ, ಅದಕ್ಕೆ ಪ್ರೇಕ್ಷಕ ವರ್ಗದ ಪ್ರೋತ್ಸಾಹ ಅತೀ ಮುಖ್ಯ. ಇಂದಿನ ಯಕ್ಷಗಾನದಲ್ಲಿ ಬಹುತೇಕ ಮಹಿಳಾ ಕಲಾವಿದರು, ಯಕ್ಷಗಾನ ಪ್ರದರ್ಶನ ನೀಡುತ್ತಿರುವುದು ಸಂತೋಷದ ಸಂಗತಿ ಎಂದರು.

ದಕ್ಷಿಣ ಕನ್ನಡ ಮತ್ತು ಕರಾವಳಿ ಜಿಲ್ಲಾ ಸಂಘಗಳ ಒಕ್ಕೂಟದ ಅಧ್ಯಕ್ಷ ಗ್ರೇಶಿಯನ್ ರೋಡ್ರಿಗಸ್ ಮಾತನಾಡಿ, ರಾಜಾಶ್ರಯದಲ್ಲಿ ಕಲೆ, ಸಾಹಿತ್ಯ, ಸಂಗೀತ, ಚಿತ್ರಕಲೆಗಳಿಗೆ ಹೆಚ್ಚಿನ ಪ್ರೋತ್ಸಾಹವಿತ್ತು ಇದೀಗ ಪ್ರಜಾಪ್ರಭುತ್ವದಲ್ಲೂ ಎಲ್ಲಾ ಕಲಾ ಪ್ರಕಾರಗಳ ಪ್ರದರ್ಶನಕ್ಕೆ ಪ್ರೋತ್ಸಾಹ ದೊರಕುತ್ತಿದೆ. ನಟನ ಸಂಸ್ಥೆ ಹಲವು ವರ್ಷಗಳಿಂದ ಹಿರಿಯ ರಂಗಕರ್ಮಿ ಮಂಡ್ಯ ರಮೇಶ್ ಸಾರಥ್ಯದಲ್ಲಿ ಸಾಕಷ್ಟು ಚಟುವಟಿಕೆಗಳಿಂದ ಕೂಡಿದೆ.

ಇದರಿಂದ ರಾಮಕೃಷ್ಣನಗರಕ್ಕೂ ಹಿರಿಮೆ ತಂದುಕೊಟ್ಟಿದೆ ಎಂದರು. ಶ್ರೀ ದೇವಿ ಮಹಾತ್ಮೆ ಯಕ್ಷಗಾನಕ್ಕೆ ಸಿಂಚನಾ ಮುಡುಕೋಡಿ ಭಾಗವತರಾಗಿ, ಹೇಮಸ್ವಾತಿ ಕುರಿಯಾಜೆ, ರಚನಾ ಚಿದ್ಗಲ್ ಅಮೋಘವಾಗಿ ನಟಿಸಿ, ಪ್ರೇಕ್ಷಕರ ಮನಗೆದ್ದರು.

19ನೇ ರಾಜ್ಯಮಟ್ಟದ ಸುಗಮ ಸಂಗೀತ ಸಮ್ಮೇಳನಕ್ಕೆ ತೆರೆ

ಸುಗಮ ಸಂಗೀತಕ್ಕೆ ಭೂಮಿಕೆ ನಿರ್ಮಿಸಿದ್ದು ಕನ್ನಡದ ಆದಿಕವಿ ಪಂಪ

ಹಿರಿಯ ಸಾಹಿತಿ ನಾಡೋಜ ಡಾ.ಹಂಪನಾಗರಾಜಯ್ಯ



ಮೈಸೂರಿನ ಕಲಾಮಂದಿರದಲ್ಲಿ ಭಾನುವಾರ ನಡೆದ 'ಗೀತೋತ್ಸವ–2025' ಶೀರ್ಷಿಕೆಯ ಸುಗಮ ಸಂಗೀತ ಸಮ್ಮೇಳನದ ಸಮಾರೋಪ ಸಮಾರಂಭದಲ್ಲಿ ಸಮ್ಮೇಳನಾಧ್ಯಕ್ಷ ನಗರ ಶ್ರೀನಿವಾಸ ಉಡುಪ ಹಾಗೂ ಅವರ ಪತ್ನಿ ರಾಜೇಶ್ವರಿ ಅವರನ್ನು ಸನ್ಮಾನಿಸಲಾಯಿತು.

ಮೈಸೂರು,ಆ.3(ಪಿಎಂ)– ಸುಗಮ ಸಂಗೀತ ಪ್ರಕಾರಕ್ಕೆ ಅಗತ್ಯವಾದ ಭೂಮಿಕೆ ನಿರ್ಮಿಸಿಕೊಟ್ಟಿದ್ದು ಕನ್ನಡದ ಆದಿಕವಿ ಪಂಪ. ಅವರ ಸ್ಮರಣೆಯಲ್ಲಿ ಸುಗಮ ಸಂಗೀತ ಬೆಳೆಸುವಂತಾಗಲಿ ಎಂದು ಹಿರಿಯ ಸಾಹಿತಿ ನಾಡೋಜ ಡಾ.ಹಂಪ ನಾಗರಾಜಯ್ಯ ಆಶಯ ವ್ಯಕ್ತಪಡಿಸಿದರು.

ಮೈಸೂರಿನ ಕಲಾಮಂದಿರದಲ್ಲಿ ಕರ್ನಾಟಕ ಸುಗಮ ಸಂಗೀತ ಪರಿಷತ್ತು ವತಿಯಿಂದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಕಾರದೊಂದಿಗೆ 'ಗೀತೋತ್ಸವ–2025' ಶೀರ್ಷಿಕೆಯಡಿ ಎರಡು ದಿನಗಳು ನಡೆದ 19ನೇ ರಾಜ್ಯಮಟ್ಟದ ಸುಗಮ ಸಂಗೀತ ಸಮ್ಮೇಳನದ ಸಮಾರೋಪ ಸಮಾರಂಭದಲ್ಲಿ ಭಾನುವಾರ ಅವರು ಸಮಾರೋಪ ಭಾಷಣ ಮಾಡಿದರು.

ಕನ್ನಡದ ಮೊಟ್ಟ ಮೊದಲನೆಯ ಸುಗಮ ಸಂಗೀತ ಹಾಗೂ ಭಾವಗೀತೆ ಹಾಡಿದವರನ್ನು ಮರೆಯಲಾಗಿದೆ. ಪಂಪ ಮತ್ತು ಅವನ ತಮ್ಮ (ಕಿರಿಯ ಸಹೋದರ) ಜಿನವಲ್ಲಭ ಮೊದಲು ಈ ಪ್ರಕಾರದ ಗೀತೆಗಳನ್ನು ಹಾಡಿದವರು. ಪಂಪನು ಮನುಷ್ಯನ ಜೀವನ ಕುರಿತು ವ್ಯಾಖ್ಯಾನ ನೀಡುತ್ತಾ, ಸುಖ–ದುಃಖ, ತ್ಯಾಗ ಹಾಗೂ ವಿದ್ಯೆಯ ಬಗ್ಗೆ ತಿಳಿಸಿದ್ದಲ್ಲದೆ ಸಂಗೀತದ ಮಹತ್ವವನ್ನೂ ತಿಳಿಸಿದ್ದಾನೆ ಎಂದರು.

ಪಂಪ ಮತ್ತು ಅವನ ಸಹೋದರ ಜಿನವಲ್ಲಭ ಇಬ್ಬರು ಗೀತೆಗಳನ್ನು ಹಾಡುತ್ತಿದ್ದರು ಎನ್ನುವುದಕ್ಕೆ ಶಾಸನವೊಂದರಲ್ಲಿರುವ ಒಂದು ಪದ್ಯದಲ್ಲಿ ಉಲ್ಲೇಖವಾಗಿದೆ. ಜಿನವಲ್ಲಭ ಈ ಶಾಸನ ಹಾಕಿಸಿದ್ದು, ಕನ್ನಡ ಸೇರಿದಂತೆ ಮೂರು ಭಾಷೆಗಳಲ್ಲಿರುವ ಏಕಮೇವ ಶಾಸನ ಇದು. ಆಂಧ್ರಪ್ರದೇಶದ ಕರೀಂನಗರ ಜಿಲ್ಲೆಯ ಕುರ್ಕ್ಯಾಲ ಗ್ರಾಮದ ಬೆಟ್ಟದ ಮೇಲೆ ಈ ದೊಡ್ಡ ಶಾಸನ ಇದೆ. ಅದರಲ್ಲಿ ಪಂಪನ ವಂಶಾವಳಿ ಹಾಗೂ ಅವನ ಕೆಲಸ–ಕಾರ್ಯಗಳನ್ನು ಉಲ್ಲೇಖಿಸಲಾಗಿದೆ. ಇದರಲ್ಲಿ ಸುಗಮ ಸಂಗೀತದ ಉಲ್ಲೇಖವೂ ಇದೆ ಎಂದು ಹೇಳಿದರು.

ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಹಿರಿಯ ಸಾಹಿತಿ ಡಾ.ಸಿ.ಪಿ.ಕೃಷ್ಣಕುಮಾರ್ (ಸಿಪಿಕೆ) ಮಾತನಾಡಿ, ಈ ಕಾಲದಲ್ಲಿ ಸುಗಮ ಸಂಗೀತ ಒಂದು ವಿಶೇಷ ಪ್ರಕ್ರಿಯೆ. ಜೊತೆಗೆ ವಿದ್ಯಮಾನ ಹಾಗೂ ವಿಧಾನವೂ ಹೌದು. ಅದು ಸಹೃದಯರ ಕಿವಿ–ಮನಗಳಿಗೆ ಕವಿತೆಯನ್ನು ಮುಟ್ಟಿಸುವ ಸುವರ್ಣ ಮಾಧ್ಯಮ. ಸಂಗೀತದ ವಿಶಿಷ್ಟ ಪ್ರಕಾರವೂ ಹೌದು ಎಂದರು.

ಸುಗಮ ಸಂಗೀತವು ಕಿವಿಗಳನ್ನು ಮುಟ್ಟಿ ತಟ್ಟಿ ತಣಿಸುತ್ತದೆ. ಈ ಸಂಗೀತ ಒಂದು ಮಾಂತ್ರಿಕ ಸತ್ವ. ಸಂಸ್ಕೃತಿ ಎಂಬುದು ಸುಗಮ ಸಂಗೀತದಲ್ಲಿ ಹಾಸುಹೊಕ್ಕಾಗಿದೆ. ಸಂಸ್ಕೃತಿ ಎಂದರೇನು ಎಂಬುದಕ್ಕೆ ಪಾಶ್ಚಿಮಾತ್ಯ ವಿಮರ್ಶಕನೊಬ್ಬ 'ಮಾಧುರ್ಯ ಮತ್ತು ಬೆಳಕು' ಎಂದು ಲಕ್ಷಣೀಕರಿಸಿರುವುದು ಗಮನಾರ್ಹ. ಈ ಮಾತುಗಳು ಸುಗಮ ಸಂಗೀತಕ್ಕೆ ಒಪ್ಪುತ್ತವೆ. ಸುಗಮ ಸಂಗೀತ ಅಥವಾ ಲಘು ಸಂಗೀತವು ಭವದ ಭಾರವನ್ನು ದೂರ ಮಾಡುತ್ತವೆ ಎಂದು ಹೇಳಿದರು.

ಇದೇ ವೇಳೆ ಸಮ್ಮೇಳನಾಧ್ಯಕ್ಷರೂ ಆದ ಸುಗಮ ಸಂಗೀತದ ಹಿರಿಯ ಗಾಯಕ ನಗರ ಶ್ರೀನಿವಾಸ ಉಡುಪ ಹಾಗೂ ಅವರ ಪತ್ನಿ ರಾಜೇಶ್ವರಿ ಅವರನ್ನು ಸನ್ಮಾನಿಸಲಾಯಿತು. ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ.ಸಿ.ಸೋಮಶೇಖರ್ ಅಧ್ಯಕ್ಷತೆ ವಹಿಸಿದ್ದರು. ಅಪರ ಜಿಲ್ಲಾಧಿಕಾರಿ ಡಾ.ಪಿ.ಶಿವರಾಜು, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನಸ್ವಾಮಿ, ಕರ್ನಾಟಕ ಸುಗಮ ಸಂಗೀತ ಪರಿಷತ್ತು ಅಧ್ಯಕ್ಷ ವೈ.ಕೆ.ಮುದ್ದುಕೃಷ್ಣ, ಕಾರ್ಯಾಧ್ಯಕ್ಷ ಡಾ.ಕಿಕ್ಕೇರಿ ಕೃಷ್ಣಮೂರ್ತಿ, ಮೈಸೂರು ಘಟಕದ ಅಧ್ಯಕ್ಷ ಡಾ.ನಾಗರಾಜ್ ವಿ.ಬೈರಿ ಮತ್ತಿತರರು ಹಾಜರಿದ್ದರು.

ಸಾರಿಗೆ ನೌಕರರ ವೇತನ ಪರಿಷ್ಕರಣೆಯಾಗದಿರಲು

ಬಿಜೆಪಿ ಸರ್ಕಾರದ ಆದೇಶ ಕಾರಣ

ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಆರೋಪ



ಬೆಂಗಳೂರು, ಆ.3– ಸಾರಿಗೆ ನೌಕರರ ವೇತನ ಪರಿಷ್ಕರಣೆಯಾಗದೇ ಇರಲು ಬಿಜೆಪಿ ಸರ್ಕಾರದ ಆದೇಶವೇ ಕಾರಣ ಎಂದು ಎಂದು ಸಚಿವ ರಾಮಲಿಂಗಾರೆಡ್ಡಿ ಆರೋಪಿಸಿದರು. ಸಾರಿಗೆ ನಿಗಮಗಳ ಆರ್ಥಿಕ ಪರಿಸ್ಥಿತಿ ನೋಡಿಕೊಂಡು ವೇತನ ಪರಿಷ್ಕರಣೆ ಜಾರಿ ಮಾಡಬಹುದು ಎಂಬ ಬಿಜೆಪಿ ಸರ್ಕಾರದ ಆದೇಶದಿಂದ ಹಿಂಬಾಕಿ ತಡವಾಗಿದೆ ಎಂದು ಹೇಳಿದ್ದಾರೆ.

ಪ್ರತಿ 4 ವರ್ಷಗಳಿಗೊಮ್ಮೆ ಸಾರಿಗೆ ನೌಕರರ ವೇತನ ಪರಿಷ್ಕರಣೆ ನಡೆಯುತ್ತದೆ. ಈ ಹಿಂದೆ 2012–2016ರ ವರೆಗೆ ವೇತನ ಹೆಚ್ಚಳ ಮಾಡಿದಾಗ 2012ರಿಂದ ಜಾರಿಗೆ ಬರುವುದಾಗಿ, 2016–2020ರವರೆಗೆ ವೇತನ ಹೆಚ್ಚಳ ಮಾಡಿದಾಗ 2016ರಿಂದ ಜಾರಿಗೆ ಬರುವಂತೆ ಎಂದು ಸರ್ಕಾರದ ಆದೇಶದಲ್ಲಿ ಉಲ್ಲೇಖವಾಗಿತ್ತು.

2023ರ ಆದೇಶದಲ್ಲಿ 2023ರ ಮಾರ್ಚ್ 1ರಿಂದ ಜಾರಿಗೆ ಬರುವಂತೆ ಎಂದು ಉಲ್ಲೇಖಿಸಿದೆ ಈ ಆದೇಶದಲ್ಲಿ 2020 ರಿಂದ ಎಂದು ಉಲ್ಲೇಖ ಮಾಡಿಲ್ಲ ಈ ಆದೇಶದ ಅನ್ವಯ ಮುಂದಿನ 4 ವರ್ಷ ಅಂದರೆ 2027 ರವರೆಗೆ ವೇತನ ಪರಿಷ್ಕರಣೆ ಮಾಡಲು ಸಾಧ್ಯವಿಲ್ಲ. ಆದೇಶದಲ್ಲಿ ಎಲ್ಲಿಯೂ ಸ್ಪಷ್ಟವಾಗಿ 2020 ರಿಂದಲೇ ಜಾರಿಗೆ ಬರುವಂತೆ ಎಂದು ಉಲ್ಲೇಖ ಮಾಡದ ಕಾರಣ ವೇತನ ಪರಿಷ್ಕರಣೆ ಮಾಡಲು ಸಾಧ್ಯವಿಲ್ಲ ಎಂಬ ವಾದವನ್ನು ಅವರು ಮುಂದಿಟ್ಟರು.

ಪ್ರತ್ಯೇಕ ನಿಧಿ ಇಲ್ಲ: 2020 ರಿಂದ ಅನ್ವಯವಾಗುವಂತಿದ್ದರೆ ಇದಕ್ಕಾಗಿ ಯಾವುದೇ ಪ್ರತ್ಯೇಕ ನಿಧಿಯನ್ನು ಹಿಂದಿನ ಸರ್ಕಾರ ಹಂಚಿಕೆ ಮಾಡಿಲ್ಲ. ಈ ಹಿಂದಿನ ಸರ್ಕಾರದ ಆದೇಶವನ್ನು ಮಾರ್ಪಡಿಸಲು ಸಾಧ್ಯವಿಲ್ಲ. 2023 ರಿಂದ 2027 ರವರೆಗೆ ನಾಲ್ಕು ವರ್ಷಗಳ ಅವಧಿಯವರೆಗೂ ಬಿಜೆಪಿ ಸರ್ಕಾರದ ಆದೇಶ ಅನ್ವಯವಾಗುತ್ತದೆ. ಯಾವುದೇ ನಿಧಿಯನ್ನು ಮೀಸಲಿಡದ ಕಾರಣ 2027 ರಿಂದಲೇ ಮುಂದಿನ ವೇತನ ಪರಿಷ್ಕರಣೆ ಜಾರಿಯಾಗಲು ಸಾಧ್ಯ ಎಂಬ ನಿಲುವಿಗೆ ಸರ್ಕಾರ ಬಲವಾಗಿ ಅಂಟಿಕೊಂಡಿದೆ.

2020ರಲ್ಲಿ ಏನಾಗಿತ್ತು?: ಕೋವಿಡ್ ಲಾಕ್‌ಡೌನ್ ಕಾರಣದಿಂದ 2020ರಲ್ಲಿ ಕೆಲ ತಿಂಗಳು ಬಸ್ಸುಗಳ ಸಂಚಾರವನ್ನು ಬಂದ್ ಮಾಡಲಾಗಿತ್ತು. ನಂತರ ಸೇವೆ ಆರಂಭಗೊಂಡಿದ್ದರೂ ಜನ ಕಡಿಮೆ ಪ್ರಮಾಣದಲ್ಲಿ ಸಂಚರಿಸುತ್ತಿದ್ದರು. ಕೋವಿಡ್ ಸಮಯದಲ್ಲಿ ಪೂರ್ಣ/ ಅಪೂರ್ಣ ಪ್ರಮಾಣದಲ್ಲಿ ಬಸ್ಸುಗಳ ಕಾರ್ಯಾಚರಣೆ ಸ್ಥಗಿತಗೊಂಡಿದ್ದರಿಂದ ಸಾರಿಗೆ ಇಲಾಖೆ ಮುಳುಗುವ ಹಂತದಲ್ಲಿತ್ತು.

ಈ ಕಠಿಣ ಪರಿಸ್ಥಿತಿಯಲ್ಲಿ ನಾಲ್ಕು ಸಾರಿಗೆ ಸಂಸ್ಥೆಗಳ ಸಿಬ್ಬಂದಿ ವೇತನ ಹಾಗೂ ಇತರೇ ಭತ್ಯೆಗಳನ್ನು ಸರ್ಕಾರ ಪಾವತಿ ಮಾಡಿತ್ತು. ಆದರೆ ಸಂಬಳವನ್ನು ಪರಿಷ್ಕರಣೆ ಮಾಡುವ ನಿರ್ಧಾರ ಕೈಗೊಂಡಿರಲಿಲ್ಲ. ಕೋವಿಡ್ ನಂತರ ಬಸ್ಸುಗಳು ಪೂರ್ಣ ಪ್ರಮಾಣದಲ್ಲಿ ಕಾರ್ಯಾಚರಣೆ ಇಳಿದ ಬಳಿಕ 2023 ರಲ್ಲಿ ಬಿಜೆಪಿ ಸರ್ಕಾರ ವೇತನ ಪರಿಷ್ಕರಣೆ ಮಾಡಿತ್ತು.

ನೌಕರರ ವಾದ ಏನು?: ಬಿಜೆಪಿ ಸರ್ಕಾರದ ಅವಧಿಯಲ್ಲಿ ಮಹಿಳೆಯರಿಗೆ ಉಚಿತ ಪ್ರಯಾಣ ಇರಲಿಲ್ಲ ಮತ್ತು ಕಡಿಮೆ ಸಂಖ್ಯೆಯಲ್ಲಿ ಮಹಿಳೆಯರು ಪ್ರಯಾಣ ಮಾಡುತ್ತಿದ್ದರು. ಆದರೆ ಈಗ ಬಸ್ಸುಗಳಲ್ಲಿ ಭಾರೀ ಸಂಖ್ಯೆಯಲ್ಲಿ ಮಹಿಳೆಯರು ಪ್ರಯಾಣಿಸುತ್ತಿದ್ದಾರೆ. ಮಹಿಳೆಯರಿಗೆ ಉಚಿತ ಟಿಕೆಟ್ ನೀಡಿದ್ದರೂ ನಿರ್ವಾಹಕರು ಟಿಕೆಟ್ ಹರಿಯುತ್ತಾರೆ. ಉಚಿತ ಟಿಕೆಟ್ ಹಣವನ್ನು ಸರ್ಕಾರ ಸಾರಿಗೆ ಸಂಸ್ಥೆಗಳಿಗೆ ಪಾವತಿ ಮಾಡಬೇಕು.

ಶಕ್ತಿ ಯೋಜನೆಯಡಿ ಉಚಿತ ಬಸ್ ಪ್ರಯಾಣದ ಮಹಿಳಾ ಫಲಾನುಭವಿಗಳ ಸಂಖ್ಯೆ 500 ಕೋಟಿ ದಾಟಿ ಮೈಲಿಗಲ್ಲು ಸ್ಥಾಪಿಸಿದೆ. ಪ್ರಯಾಣಿಕರ ಸಂಖ್ಯೆ ಹೆಚ್ಚಳದಿಂದ ಆದಾಯವೂ ಜಾಸ್ತಿಯಾಗಿದೆ. ಆದಾಯ ಜಾಸ್ತಿಯಾಗಿರುವ ಕಾರಣ ಸರ್ಕಾರ ಸಂಬಳ ಏರಿಕೆ ಮಾಡಲೇಬೇಕು ಎಂದು ಆಗ್ರಹಿಸುತ್ತಿದ್ದಾರೆ.

9, 11ನೇ ತರಗತಿ ಪ್ರವೇಶಾತಿಗೆ ಅರ್ಜಿ ಆಹ್ವಾನ

ಮೈಸೂರು,ಆ.3– ನವೋದಯ ವಿದ್ಯಾಲಯ ಸಮಿತಿಯಿಂದ 2026–27ನೇ 9 ಮತ್ತು 11ನೇ ತರಗತಿಗೆ ಪ್ರವೇಶ ಕುರಿತು ಅರ್ಜಿ ಆಹ್ವಾನಿಸಲಾಗಿದೆ. ಮೈಸೂರು ಜಿಲ್ಲೆಯಲ್ಲಿ 2025–26ನೇ ಸಾಲಿನಲ್ಲಿ 8 ಮತ್ತು 10ನೇ ತರಗತಿಯಲ್ಲಿ ಓದುತ್ತಿರಬೇಕು. ಇಂಥ ಮಕ್ಕಳು ಆನ್‌ಲೈನ್ ಲಿಂಕ್‌ನಲ್ಲಿ https://navodaya.gov.in/nvs/nvs-school/MYSURU/en ಅರ್ಜಿ ಸಲ್ಲಿಸಬೇಕೆಂದು ಎಂ.ಜಿ ಹಳ್ಳಿಯ ಪಿ.ಎಂ. ಶ್ರೀ ಜವಹಾರ ನವೋದಯ ವಿದ್ಯಾಲಯ ಪ್ರಾಚಾರ್ಯರಾದ ಸಾಜು ಜೋಸೆಫ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

